ವಾರ್ಷಿಕ ಚಂದಾ ರೂ.25/-

ಮಾಸಿಕ

# ಜನಪದ

ಸಂಪುಟ-05 • ಸಂಚಿಕೆ-07 • ಏಪ್ರಿಲ್ 2022




ಸಾವಿರಾರು ಜೀವಗಳ ಉಳಿಸಿದ
**"ಆಪರೇಷನ್ ಗಂಗಾ"**

**ದೇಗುಲಗಳಿಗೆ ಡಿಜಿಟಲ್ ಸ್ಪರ್ಶ**

**ರೈತರ ಮನೆ ಬಾಗಿಲಿಗೆ ಕಂದಾಯ ದಾಖಲೆ**

**ದೇಶಿ ಒಲಿಂಪಿಕ್ಸ್ ಖೇಲೋ ಇಂಡಿಯಾ ಕ್ರೀಡಾ ಕೂಟಕ್ಕೆ ಸಿದ್ಧತೆ**




Downloaded From: www.kpscvaani.com



ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ ಅವರು ತಮ್ಮ ನಿವಾಸದ ಬಳಿ ಸಾರ್ವಜನಿಕರಿಂದ ಕುಂದುಕೊರತೆಗಳ ಅಹವಾಲುಗಳನ್ನು ಸ್ವೀಕರಿಸುತ್ತಿರುವುದು.



ಮಾರ್ಚ್ 19 ರಂದು ಶಹಾಪೂರ ತಾಲ್ಲೂಕಿನ ದೋರನಹಳ್ಳಿ ಗ್ರಾಮದಲ್ಲಿ ಗ್ಯಾಸ್ ಸಿಲಿಂಡರ್ ಸ್ಫೋಟದಿಂದ ಮೃತಪಟ್ಟ 15 ಜನರ ವಾರಸುದಾರರಿಗೆ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಚೆಕ್ ವಿತರಿಸಿದ ಸಂದರ್ಭ.

Downloaded From: www.kpscvaani.com



ವಾರ್ಷಿಕ ಚಂದಾ ರೂ.25/-

# ವಾರ್ತಾ ಜನಪದ

ಸಂಪುಟ-05 • ಸಂಚಿಕೆ-07 • ಏಪ್ರಿಲ್ 2022


**06** ಕರ್ನಾಟಕ ಆಯವ್ಯಯ 2022-23: ರಾಜ್ಯದ ಸಮಗ್ರ ಅಭಿವೃದ್ಧಿಗೆ ಸಮರ್ಥ ನೀಲನಕ್ಷೆ
• ಕೆ.ವಿ.ಸಿಬಂತಿ ಪದ್ಮನಾಭ



**14** ಸಾವಿರಾರು ಜೀವಗಳ ಉಳಿಸಿದ ಆಪರೇಷನ್ ಗಂಗಾ
• ಡಿ.ಪಿ.ಮುರಳೀಧರ್

**18** ರೈತರ ಮನೆ ಬಾಗಿಲಿಗೆ ಕಂದಾಯ ದಾಖಲೆ
• ಉಮೇಶ್ ಕೊಲಿಗೆರೆ

**21** ಚಿತ್ರೋದ್ಯಮದಕ್ಕೆ ಪುನಶ್ಚೇತನ ನೀಡಿದ 13 ನೇ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ
• ಡಾ.ಎಚ್. ವೀರಭದ್ರಪ್ಪ

**25** ದೇಗುಲಗಳಿಗೆ ಡಿಜಿಟಲ್ ಸ್ಪರ್ಶ
• ಪಿ. ವಿ. ಯೋಷಿಕಾ

**28** ಕನ್ನಡ ಸಾರಸ್ವತ ಲೋಕದ ವಿಚಾರವಾದಿ ಕವಿ: ಚೆನ್ನವೀರ ಕಣವಿ
• ಸಂಗಮೇಶ್ ಎನ್ ಜವಾದಿ

**30** ಅಂಬೇಡ್ಕರ್ ಮೆಚ್ಚಿದ 'ಮೈಸೂರು ಮಾದರಿ'
• ಅರುಣ್ ಜೋಳದ ಕೂಡ್ಲಿಗಿ

**32** ದೇಶಿ ಒಲಿಂಪಿಕ್ಸ್ ಖೇಲೋ ಇಂಡಿಯಾ ಕ್ರೀಡಾ ಕೂಟಕ್ಕೆ ಸಿದ್ಧತೆ
• ಶೀಲಾ ಕಾಂತಿಕೆರೆ

**35** ಬಿಳಿಯರ ವಿರುದ್ಧ ಸಿಡಿದೆದ್ದ ಸುರಪುರದ ವೆಂಕಟಪ್ಪನಾಯಕ
• ಎನ್. ಜಗನ್ನಾಥ ಪ್ರಕಾಶ್



**37** ನವೀಕರಿಸಬಹುದಾದ ವಿದ್ಯುತ್ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಿರುವ ಕರ್ನಾಟಕ
• ಬಿ. ವೆಂಕಟಸಿಂಗ್

**40** ರೈತನ ಮನಪರಿವರ್ತಿಸಿದ ಸಮಗ್ರ ಕೃಷಿ ಪದ್ಧತಿ
• ಸಂಧ್ಯಾ ಸೊರಬ

**42** ನಿಮ್ಮ ಹಣದ ಸುರಕ್ಷತೆ ನಿಮ್ಮ ಕೈಯಲ್ಲಿದೆ
• ವಿ.ನಂಜುಂಡಪ್ಪ

**44** ಅಚ್ಚರಿ ಮೂಡಿಸಿರುವ ಬಿದನೂರಿನಲ್ಲಿ ಪತ್ತೆಯಾದ ರಾಕೆಟ್‌ಗಳು
• ಎಲ್. ವತ್ಸಲಾ ಮತ್ತು ಎಸ್.ಸಿ. ಅಮೃತ

**47** ಮೋಡಿ ಲಿಪಿಯ ಪರಿಣಿತ ಡಾ. ಎಂ. ವೈ. ಸಾವಂತ್
• ಮಂಜುನಾಥ ಡಿ. ಡೊಳ್ಳಿನ

**50** ಪದಬಂಧ-29


ಪ್ರಧಾನ ಸಂಪಾದಕರು
**ಡಾ॥ ಪಿ. ಎಸ್. ಹರ್ಷ, ಐಪಿಎಸ್**
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಸಂಪಾದಕೀಯ ಸಲಹೆ
**ಡಿ.ಪಿ. ಮುರಳೀಧರ್**
ಜಂಟಿ ನಿರ್ದೇಶಕರು

**ಸಹನಾ ಎಂ.**
ಉಪ ನಿರ್ದೇಶಕರು

ಉಪ ಸಂಪಾದಕರು
**ಬಿ. ಜಿ. ಪೂರ್ಣಿಮ**

ಪ್ರಕಾಶಕರು
ಆಯುಕ್ತರು
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001
Ph : 080-22028103 / 22028023
email : varthajanapada@yahoo.co.in
https://dipr.karnataka.gov.in

ಮುದ್ರಕರು
ಲಾವಣ್ಯ ಮುದ್ರಣ
# 19, ವಿದ್ಯಾಪೀಠ ವೃತ್ತ, ಬನಶಂಕರಿ 1ನೇ ಹಂತ, ಬೆಂಗಳೂರು-50

ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

Downloaded From: www.kpscvaani.com

# ನಿಮ್ಮ ಅನಿಸಿಕೆ

ರಾಜ್ಯ ಸರ್ಕಾರವು ಗ್ರಾಮೀಣ ಜನರ ಅನುಕೂಲಕ್ಕಾಗಿ ಪ್ರತಿ ಗ್ರಾಮ ಪಂಚಾಯತಿಗಳಲ್ಲಿ ಗ್ರಾಮ ಒನ್ ಕೇಂದ್ರಗಳನ್ನು ಆರಂಭಿಸಿರುವುದಕ್ಕೆ ಅನಂತ ಧನ್ಯವಾದಗಳು. ಗ್ರಾಮೀಣ ಜನರು ಒಂದು ಸೇವೆಯನ್ನು ಪಡೆಯಲು ದೂರದ ತಾಲ್ಲೂಕು ಅಥವಾ ಜಿಲ್ಲಾ ಕಚೇರಿಗಳಿಗೆ ಹಲವಾರು ಬಾರಿ ಭೇಟಿ ನೀಡಬೇಕಾಗುತಿತ್ತು. ಈಗ ಸರ್ಕಾರವು ಗ್ರಾಮ ಪಂಚಾಯತಿಗಳಲ್ಲೇ ಬೆಂಗಳೂರು ಒನ್ ಮಾದರಿಯಲ್ಲಿ ಗ್ರಾಮ ಒನ್ ಕೇಂದ್ರಗಳನ್ನು ತೆರೆದಿರುವುದರಿಂದ ಗ್ರಾಮೀಣ ಜನರ ಸಮಯ ಮತ್ತು ಹಣ ಎರಡೂ ಉಳಿತಾಯವಾದಂತ್ತಾಗಿದೆ.

ಈ ಕೇಂದ್ರಗಳನ್ನು ತೆರೆದಿರುವುದರಿಂದ ಸ್ಥಳೀಯರಿಗೆ ಉದ್ಯೋಗ ದೊರಕಿದೆಯಲ್ಲದೆ, ಗ್ರಾಮೀಣ ಜನರು ವಿವಿಧ ಇಲಾಖೆಗಳ ಸೇವೆಗಳನ್ನು ಪಡೆದುಕೊಳ್ಳಲು ಅನುಕೂಲವಾಗಿದೆ. ಜನರ ಬಳಿಗೆ ಸರ್ಕಾರವನ್ನು ಕೊಂಡೊಯ್ಯುವಂತಹ ಈ ಮಾಹಾತ್ವಾಕಾಂಕ್ಷಿ ಗ್ರಾಮ ಒನ್ ಯೋಜನೆಯು ಯಶಸ್ವಿಯಾಗಿ ಮುಂದುವರೆಯಲಿ ಎಂದು ಆಶಿಸುವೆ.

**–ಎಸ್.ಕೆ. ಮೀನಾಕ್ಷಿ, ಶಿಕಾರಿಪುರ**

* * *

ಮಾರ್ಚ್ ಸಂಚಿಕೆಯ ವಾರ್ತಾ ಜನಪದ ಓದಿ ತುಂಬಾ ಸಂತೋಷವಾಯಿತು. ಬೆಂಗಳೂರು ಒನ್ ಮಾದರಿಯಲ್ಲಿ ಗ್ರಾಮ ಪಂಚಾಯಿತಿಗಳಲ್ಲಿ ಗ್ರಾಮ ಒನ್ ಕೇಂದ್ರಗಳನ್ನು ಪ್ರಾರಂಭಿಸಿ, ಸುಮಾರು 750 ಸೇವೆಗಳನ್ನು ನೀಡಲಾಗುತ್ತಿರುವುದು ಶ್ಲಾಘನೀಯ ವಿಚಾರ. ಸರ್ಕಾರ ಗ್ರಾಮೀಣ ಜನರ ಪರವಾಗಿಯೂ ಕೆಲಸ ಮಾಡುತ್ತಿದೆ ಎಂಬುದಕ್ಕೆ ಇಂತಹ ಯೋಜನೆಗಳೇ ಸಾಕ್ಷಿ.

ಗ್ರಾಮೀಣ ಭಾಗದ ಕಾರ್ಯಚಟುವಟಿಕೆಗೆ ಅನುಗುಣವಾಗಿಯೇ ಕೇಂದ್ರದ ಕಾರ್ಯಚಟುವಟಿಕೆಯ ಸಮಯವನ್ನು ನಿಗದಿ ಪಡಿಸಿರುವುದು ಸರಿಯಾದ ಕ್ರಮವಾಗಿದೆ. ಇನ್ನು ಮುಂದೆಯೂ ಕೂಡ ಗ್ರಾಮೀಣ ಜನರಿಗೆ ಅನುಕೂಲವಾಗುವಂತಹ ಯೋಜನೆಗಳನ್ನು ಸರ್ಕಾರ ನೀಡುವಂತ್ತಾಗಲಿ.

**–ಎಂ.ಬಿ.ತಿಮ್ಮಯ್ಯ, ವಿರಾಜಪೇಟೆ**

* * *

ವಾರ್ತಾ ಜನಪದ ಪತ್ರಿಕೆಯಲ್ಲಿ ಪ್ರಕಟವಾಗಿರುವ ಫ್ರೂಟ್ಸ್ ತಂತ್ರಾಂಶದ ಲೇಖನವು ರೈತರಿಗೆ ಉತ್ತಮ ಮಾಹಿತಿಯನ್ನು ಒದಗಿಸಿದೆ. ಯಾವುದೇ ಸರ್ಕಾರಿ ಸೌಲಭ್ಯವನ್ನು ಪಡೆಯುವಾಗಲೂ ರೈತರು ಪ್ರತಿ ಬಾರಿ ಜಮೀನಿನ ಪಹಣಿ, ಆಧಾರ್, ಬ್ಯಾಂಕ್ ಖಾತೆ ವಿವರಗಳನ್ನು ಒದಗಿಸಬೇಕಾಗಿತ್ತು. ಆದರೆ ಈ ಫ್ರೂಟ್ಸ್ ತಂತ್ರಾಂಶದಲ್ಲಿ ಒಮ್ಮೆ ರೈತರು ತಮ್ಮೆಲ್ಲಾ ದಾಖಲೆಗಳನ್ನು ನೀಡಿ ನೋಂದಣಿ ಮಾಡಿಸಿಕೊಂಡರೆ ಇನ್ನು ಮುಂದೆ




ಯಾವುದೇ ಸೌಲಭ್ಯವನ್ನು ಪಡೆಯುವಾಗಲೂ ದಾಖಲೆಗಳನ್ನು ಕೊಡುವ ಅವಶ್ಯಕತೆ ಇರುವುದಿಲ್ಲ ಎಂದು ತಿಳಿದು ಸಂತೋಷವಾಯಿತು.

**–ವೀರೇಗೌಡ, ಕೆ.ಎಂ.ದೊಡ್ಡಿ**

* * *

ಮಾರ್ಚ್ 2022 ರ ವಾರ್ತಾ ಜನಪದ ಸಂಚಿಕೆಯು ಅತ್ಯುತ್ತಮ ಮಾಹಿತಿಯುಳ್ಳ ಲೇಖನಗಳೊಂದಿಗೆ ಪ್ರಕಟವಾಗಿದೆ. ಗ್ರಾಮ ಒನ್, ಫ್ರೂಟ್ಸ್ ತಂತ್ರಾಂಶ, ಮಹಿಳೆಯರು ಉತ್ಪಾದಿಸುವ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸಲು ಅಮೆಜಾನ್‌ನೊಂದಿಗೆ ಒಪ್ಪಂದ, ಸರ್ಕಾರದಿಂದ ಹೆಣ್ಣುಮಕ್ಕಳಿಗೆ ಓಬವ್ವ ಆತ್ಮರಕ್ಷಣೆ ಕಲೆ ತರಬೇತಿ, ರಾಜ್ಯದ ಪದ್ಮಶ್ರೀ ಪುರಸ್ಕೃತರು, ಲತಾದೀದಿ, ಇಬ್ರಾಹಿಂ ಸುತಾರ್, ಕರ್ನಾಟಕ ರಾಜ್ಯದ ಸ್ತಬ್ಧಚಿತ್ರ ಇವೇ ಮುಂತಾದ ವಿಚಾರಗಳ ಕುರಿತಂತೆ ಪ್ರಕಟವಾಗಿರುವ ಲೇಖನಗಳು ಬಹು ಉಪಯುಕ್ತ ಮಾಹಿತಿಯನ್ನು ಒದಗಿಸಿತು. ಒಟ್ಟಾರೆ ಪತ್ರಿಕೆಯು ಸಂಗ್ರಹ ಯೋಗ್ಯವಾಗಿದೆ.

**–ಬೀರಪ್ಪ ನಾಯ್ಕ, ಮುದ್ದೇಬಿಹಾಳ**

* * *

ಹಾಡುಗಳು ಮತ್ತು ಭಜನೆಗಳ ಮೂಲಕ ಸಾಮಾಜಿಕ ಮತ್ತು ಕೋಮುಸೌಹಾರ್ದ ಸಂದೇಶ ಸಾರುತ್ತಾ ಸಮಾಜಸೇವೆಗೆ ತಮ್ಮ ಜೀವನವನ್ನೇ ಮುಡುಪಾಗಿಟ್ಟ ಭಾವೈಕ್ಯದ ಶರಣ ಇಬ್ರಾಹಿಂ ಸುತಾರ್ ಅವರ ಸ್ಮರಣೆಗಾಗಿ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಲಾಗಿರುವ ಲೇಖನ ಇಂದಿನ ದಿನಗಳಿಗೆ ಹೆಚ್ಚು ಸೂಕ್ತವಾಗಿತ್ತು. ಇಂತಹ ಶರಣರ ನುಡಿಗಳು ವಿವಿಧ ಧರ್ಮದ ಜನರು ಸೌಹಾರ್ದಯುತವಾಗಿ ಇರಲು ಪ್ರೇರಣೆ ನೀಡುತ್ತದೆ. ಇಂತಹ ಲೇಖನ ಪ್ರಕಟಿಸಿದ ಸಂಪಾದಕ ವೃಂದಕ್ಕೆ ಧನ್ಯವಾದಗಳು.

**–ಎಂ.ಎಸ್.ಮಮತ, ಮೈಸೂರು**

ಮುಖ್ಯಮಂತ್ರಿಗಳು ಹೆಣ್ಣುಮಕ್ಕಳಿಗೆ ಓಬವ್ವ ಆತ್ಮರಕ್ಷಣೆ ಕಲೆ ತರಬೇತಿಗೆ ಚಾಲನೆ ನೀಡಿದ ಸಂದರ್ಭದ ಛಾಯಾಚಿತ್ರ ಮುಖಪುಟವು ತುಂಬಾ ಸೊಗಸಾಗಿ ಮೂಡಿಬಂದಿದೆ. ಮುಖ್ಯಮಂತ್ರಿಗಳು ಹೆಣ್ಣುಮಕ್ಕಳು ಮತ್ತು ಮಹಿಳೆಯರ ಅಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ಹಮ್ಮಿಕೊಳ್ಳುತ್ತಿದ್ದಾರೆ. ಇದು ಅವರಿಗೆ ಹೆಣ್ಣುಮಕ್ಕಳ ಮೇಲಿರುವ ಮಮತೆಯನ್ನು ತೋರಿಸುತ್ತದೆ. ಮಹಿಳೆಯರು ತಯಾರಿಸುವ ಉತ್ಪನ್ನಗಳಿಗೆ ಮಾರುಕಟ್ಟೆಯನ್ನು ಒದಗಿಸುವ ಸಲುವಾಗಿ ಅಮೆಜಾನ್‌ನೊಂದಿಗೆ ಒಡಂಬಡಿಕೆ ಮಾಡಿಕೊಂಡಿರುವುದು ನಿಜಕ್ಕೂ ಕಿರು ಉದ್ದಮೆಯಲ್ಲಿ ತೊಡಗಿರುವ ಮಹಿಳೆಯರನ್ನು ಆರ್ಥಿಕವಾಗಿ ಸದೃಢರನ್ನಾಗಿಸುತ್ತದೆ.

**–ಕೆ.ಎಸ್.ಭಾಗ್ಯ, ಕಿರುಗಾವಲು**

'ವಾರ್ತಾ ಜನಪದ' ಮಾಸಿಕ ಈಗ **www.kanaja.in**ನಲ್ಲಿ ಲಭ್ಯ

ವಾರ್ತಾ ಜನಪದ ಮಾಸಿಕಕ್ಕೆ ಚಂದಾದಾರರಾಗಲು ಬಯಸುವವರು ರೂ 25/- ಅನ್ನು ಪಾವತಿಸಲು ಕಡ್ಡಾಯವಾಗಿ ಸೇವಾಸಿಂಧುವಿನ **https://sevasindhu.karnataka.gov.in** ಮೂಲಕ ಆನ್ ಲೈನ್ ಅರ್ಜಿಯನ್ನು ಸಲ್ಲಿಸಬೇಕು.

**ವಾರ್ತಾ ಜನಪದ ಪತ್ರಿಕೆಯ ಸಾಫ್ಟ್ ಕಾಪಿಯನ್ನು ಇ-ಮೇಲ್ ಮೂಲಕ ಉಚಿತವಾಗಿ ಚಂದಾದಾರರಾಗಲು ಇಚ್ಛಿಸುವವರು ತಮ್ಮ ಇ-ಮೇಲ್ ವಿಳಾಸವನ್ನು 9480841210 ಗೆ ಕಳುಹಿಸಿ ನೋಂದಾಯಿಸಿ ಕೊಳ್ಳಬಹುದು.**

**Downloaded From: www.kpscvaani.com**



# ಸಂಪಾದಕೀಯ...

### ಅಸಮಾನತೆ ನಿವಾರಣೆಗೆ ಪೂರಕವಾದ ಆಯವ್ಯಯ

ಕೋವಿಡ್ ಸಂಕಷ್ಟದಿಂದಾಗಿ ಕಳೆದ ಸಾಲಿನ ಆಯವ್ಯಯದಲ್ಲಿ ನಾಗರಿಕರಿಗೆ ಯಾವುದೇ ತೆರಿಗೆಯನ್ನು ಹಾಕಿರಲಿಲ್ಲ. ಕೋವಿಡ್ ಸಾಂಕ್ರಾಮಿಕ ರೋಗವು ಸತತವಾಗಿ ಎರಡು ವರ್ಷಗಳಿಂದ ಬಾಧಿಸಿದ ಕಾರಣ ಆರ್ಥಿಕವಾಗಿ ನಷ್ಟದಲ್ಲಿ ಇದ್ದ ಜನಸಮುದಾಯವು ಸದ್ಯ ಚೇತರಿಸಿಕೊಳ್ಳುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ ಅವರು ಮಾರ್ಚ್ 4 ರಂದು ಮಂಡಿಸಿದ 2022–23 ನೇ ಸಾಲಿನ ಬಜೆಟ್‌ನಲ್ಲೂ ಕೂಡ ನಾಗರಿಕರ ಮೇಲೆ ಯಾವುದೇ ತೆರಿಗೆಯನ್ನು ವಿಧಿಸಿಲ್ಲ.

ರಾಜ್ಯದ ಸರ್ವರೂ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯನ್ನು ಹೊಂದುವಂತೆ ಮಾಡವುದು, ಎಲ್ಲರೂ ಸ್ವಾಭಿಮಾನದ ಬದುಕು ನಡೆಸಲು ಅನುಕೂಲವಾಗುವಂತೆ ಶಿಕ್ಷಣ, ಉದ್ಯೋಗ ಮತ್ತು ಸಬಲೀಕರಣಕ್ಕಾಗಿ ಮತ್ತು ಉತ್ತಮ ಆರೋಗ್ಯ ಸೇವೆಯನ್ನು ಒದಗಿಸುವ ಕಾರ್ಯಕ್ರಮಗಳನ್ನು ರೂಪಿಸುವುದು, ಹಿಂದುಳಿದ ಪ್ರದೇಶಗಳನ್ನು ವೈಜ್ಞಾನಿಕವಾಗಿ ಅಭಿವೃದ್ಧಿ ಮಾಡುವ ಮೂಲಕ ಅಲ್ಲಿನ ಮಾನವ ಅಭಿವೃದ್ಧಿ ಸೂಚ್ಯಂಕವನ್ನು ರಾಜ್ಯದ ಸರಾಸರಿಗೆ ಸಮನಾಗಿ ತರುವುದು, ಕೃಷಿ, ಕೈಗಾರಿಕೆ ಹಾಗೂ ಸೇವಾ ವಲಯದಲ್ಲಿ ಹೆಚ್ಚಿನ ಜನ ಪಾಲುದಾರಿಕೆಯೊಂದಿಗೆ ಹೆಚ್ಚಿನ ಅಭಿವೃದ್ಧಿ ಸಾಧಿಸುವುದು ಮತ್ತು ಹೊಸ ಚಿಂತನೆ, ಹೊಸ ಚೈತನ್ಯ ಹಾಗೂ ಹೊಸ ಮುನ್ನೋಟದೊಂದಿಗೆ ನವ ಭಾರತಕ್ಕಾಗಿ ನವ ಕರ್ನಾಟಕ ನಿರ್ಮಾಣ ಮಾಡುವುದು, ಇವು ರಾಜ್ಯದ ಅಭಿವೃದ್ಧಿಗಾಗಿ ಆಯವ್ಯಯದಲ್ಲಿ ಅಳವಡಿಸಿಕೊಳ್ಳಲಾಗಿರುವ ಪಂಚಸೂತ್ರಗಳು.

ರೈತರ ಆದಾಯವನ್ನು ದ್ವಿಗುಣಗೊಳಿಸಲು ಬಜೆಟ್‌ನಲ್ಲಿ ಅನೇಕ ಉಪಕ್ರಮಗಳನ್ನು ಜಾರಿಗೊಳಿಸುವ ಜೊತೆಗೆ **'ರೈತ ಶಕ್ತಿ'** ಎಂಬ ನೂತನ ಯೋಜನೆಯಡಿ ಕೃಷಿ ಯಂತ್ರೋಪಕರಣಗಳ ಬಳಕೆಯ ಉತ್ತೇಜನಕ್ಕೆ ಪ್ರತಿ ಎಕರೆಗೆ 250 ರೂ ಗಳಂತೆ ಡೀಸೆಲ್ ಸಹಾಯಧನ ನೀಡುವುದಕ್ಕಾಗಿ 600 ಕೋಟಿ ರೂ ಅನುದಾನವನ್ನು ಒದಗಿಸಲಾಗಿದೆ.

ಇನ್ನು ಮಹಿಳೆಯರು ಮತ್ತು ಮಕ್ಕಳ ಅಭ್ಯುದಯಕ್ಕೆ ಆಯವ್ಯಯದಲ್ಲಿ 40 ಕೋಟಿಗೂ ಹೆಚ್ಚಿನ ಅನುದಾನವನ್ನು ಒದಗಿಸಿಸಲಾಗಿದ್ದು, ಸ್ವಸಹಾಯ ಸಂಘಗಳ ಮೂಲಕ ಮಹಿಳೆಯರಿಗೆ ಉದ್ಯೋಗ ಸೃಜನೆಗೆ ಒತ್ತು ನೀಡುವ ಸಮಗ್ರ ಉದ್ಯೋಗ ನೀತಿ ಜಾರಿಗೆ ಕ್ರಮವಹಿಸಲಾಗಿದೆ. ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶದಿಂದ ಶಾಲಾ ಕಾಲೇಜುಗಳಲ್ಲಿ ಮೂಲಭೂತ ಸೌಕರ್ಯವನ್ನು ಉನ್ನತೀಕರಿಸುವ ಜೊತೆಗೆ ರಾಷ್ಟ್ರೀಯ ಶಿಕ್ಷಣ ನೀತಿ–2020 ರ ಮಾರ್ಗಸೂಚಿಯಂತೆ ಪ್ರಾಥಮಿಕ ವಿಭಾಗದಿಂದ ವಯಸ್ಕರ ಶಿಕ್ಷಣದವರೆಗೂ ನೂತನ ಪಠ್ಯಕ್ರಮ ರಚನೆ ಮಾಡಲಾಗುತ್ತಿದೆ. ಇನ್ನು ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿಗಾಗಿ **'ಮುಖ್ಯಮಂತ್ರಿಗಳ ವಿದ್ಯಾರ್ಥಿ ಮಾರ್ಗದರ್ಶಿನಿ'** ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ.

ಸರ್ಕಾರದಿಂದ ವಿವಿಧ ವರ್ಗದವರಿಗೆ ನೀಡಲಾಗುತ್ತಿರುವ ಮಾಸಾಶನ ಮತ್ತು ಗೌರಧನವನ್ನು ಆಯವ್ಯಯದಲ್ಲಿ ಹೆಚ್ಚಿಸಲಾಗಿದೆ. ಆಶಾ ಕಾರ್ಯಕರ್ತೆಯರು, ಗ್ರಾಮ ಸಹಾಯಕರು, ಬಿಸಿಯೂಟ ತಯಾರಕರು ಮತ್ತು ಸಹಾಯಕರಿಗೆ, ಅಂಗನವಾಡಿ ಕಾರ್ಯಕರ್ತೆಯರಿಗೆ ಗೌರವಧನವನ್ನು, ವಿವಾಹಿತ, ವಿಚ್ಛೇದಿತ ಮಹಿಳೆಯರು, ಹಾಗೂ ಲಿಂಗತ್ವ ಅಲ್ಪಸಂಖ್ಯಾತರಿಗೆ ನೀಡಲಾಗುತ್ತಿರುವ ಮಾಸಾಶವನ್ನು, ಆಸಿಡ್ ದಾಳಿಯ ಸಂತ್ರಸ್ತ ಮಹಿಳೆಯ ಮಾಸಾಶನವನ್ನು ಹೆಚ್ಚಳ ಮಾಡುವ ಜೊತೆಗೆ ಮಾಸಿಕವಾಗಿ ಎರಡು ಸಾವಿರರೂಗಳಂತೆ ಪೌರಕಾರ್ಮಿಕರಿಗೆ ಸಂಕಷ್ಟ ಭತ್ಯೆಯನ್ನು ಮತ್ತು ಪ್ರವಾಸಿ ಗೈಡ್‌ಗಳಿಗೆ ಪ್ರೋತ್ಸಾಹಕಧನವನ್ನು ನೀಡಲಾಗಿದೆ.

ಬಡ ಜನರ ಆರೋಗ್ಯ ಕಾಪಾಡುವ ದಿಶೆಯಲ್ಲಿ ಬಜೆಟ್‌ನಲ್ಲಿ ಯಶಸ್ವಿನಿ ಯೋಜನೆಯನ್ನು ಪುನರಾರಂಭ ಮಾಡಲಾಗಿದೆಯಲ್ಲದೆ, ಅಸಾಂಕ್ರಾಮಿಕ ರೋಗಗಳ ತಪಾಸಣೆಗಾಗಿ ಪ್ರಮುಖ ನಗರಗಳಲ್ಲಿ 438 **'ನಮ್ಮ ಕ್ಲಿನಿಕ್'** ಸ್ಥಾಪನೆ ಮಾಡಲು ನಿರ್ಧರಿಸಲಾಗಿದೆ. ತೆರಿಗೆ ಸಂಗ್ರಹ ಮಾಡುವ ಇಲಾಖೆಗಳ ಆಡಳಿತದಲ್ಲಿ ದಕ್ಷತೆಯನ್ನು ತರುವ ಮೂಲಕ ಸಂಪನ್ಮೂಲ ಸಂಗ್ರಹಣಾ ಗುರಿಯನ್ನು ಸಾಧಿಸಲು ಉದ್ದೇಶಿಸಲಾಗಿದೆ. ಮುಖ್ಯಮಂತ್ರಿ ಅವರು ಸಂಪನ್ಮೂಲ ಸಂಗ್ರಹದ ಪರಿಮಿತಿಯೊಳಗೆ **'ನವ ಕರ್ನಾಟಕ'**ದ ಕನಸನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ 2022–23ರ ಆಯವ್ಯಯದಲ್ಲಿ ಹೆಚ್ಚಿನ ಆರ್ಥಿಕ ಪ್ರಗತಿಯನ್ನು ಸಾಧಿಸಿ ವಿತ್ತೀಯ ಶಿಸ್ತನ್ನು ಕಾಪಾಡಿಕೊಂಡು ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ತಮ್ಮ ಚೊಚ್ಚಲ ಆಯವ್ಯಯದಲ್ಲಿ ಕಾರ್ಯಕ್ರಮಗಳನ್ನು ರೂಪಿಸಿದ್ದಾರೆ.

**ಓದುಗರೆಲ್ಲರಿಗೂ ಯುಗಾದಿ ಹಬ್ಬದ ಹಾರ್ದಿಕ ಶುಭಾಶಯಗಳು.**

ಡಾ|| ಪಿ. ಎಸ್. ಹರ್ಷ, ಐಪಿಎಸ್
ಪ್ರಧಾನ ಸಂಪಾದಕರು

**ಪ್ರಧಾನ ಸಂಪಾದಕರು, ವಾರ್ತಾ ಜನಪದ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,**
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001. email : feedbackjanapada@gmail.com



Downloaded From: www.kpscvaani.com




## ಕರ್ನಾಟಕ ಆಯವ್ಯಯ 2022–23:

# ರಾಜ್ಯದ ಸಮಗ್ರ ಅಭಿವೃದ್ಧಿಗೆ ಸಮರ್ಥ ನೀಲನಕ್ಷೆ

**ಜನಸಾಮಾನ್ಯರ ಹಿತಚಿಂತನೆ ಹಾಗೂ ದೂರದರ್ಶಿತ್ವ ಜತೆಯಾದಾಗ ಎಂತಹ ಯೋಜನೆಗಳು ರೂಪುಗೊಳ್ಳುತ್ತವೆ ಎಂಬುದಕ್ಕೆ 2022-23ರ ರಾಜ್ಯ ಬಜೆಟ್ ಒಂದು ಉತ್ತಮ ಉದಾಹರಣೆಯಾಗಿದೆ.**

ಕೆ. ವಿ. ಸಿಬಂತಿ ಪದ್ಮನಾಭ

ರಾಜ್ಯದ ಒಟ್ಟಾರೆ ಅಭಿವೃದ್ಧಿಯೇ ಸ್ಥೂಲ ಉದ್ದೇಶವಾದರೂ, ಅದು ಸಾಧ್ಯವಾಗಬೇಕಾದರೆ ವಿವಿಧ ಕ್ಷೇತ್ರಗಳ ಸಮತೋಲಿತ ಪ್ರಗತಿಗೆ ಸಮಾನ ಒತ್ತು ಸಿಗಬೇಕು ಎಂಬ ಅಂಶವನ್ನು ಸರ್ಕಾರ ಚೆನ್ನಾಗಿಯೇ ಅರ್ಥಮಾಡಿಕೊಂಡಿದೆ ಎಂಬುದನ್ನು ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ ಅವರು ಮಂಡಿಸಿರುವ  ಬಜೆಟ್ ತೋರಿಸಿಕೊಟ್ಟಿದೆ.

ಇಡೀ ಆರ್ಥಿಕ ವರ್ಷದ ಸಂಭಾವ್ಯ ಯೋಜನೆಗಳನ್ನು ವಿವಿಧ ವಲಯಗಳಾಗಿ ವಿಂಗಡಿಸಿ, ಅನುದಾನ ಹಂಚಿಕೆ ಮಾಡಿರುವುದೇ ಇದಕ್ಕೆ ನಿದರ್ಶನ. ಇಡೀ ಆಯವ್ಯಯವನ್ನು ಆರು ಪ್ರಮುಖ ವಿಭಾಗಗಳನ್ನಾಗಿ ವಿಂಗಡಿಸಿಕೊಂಡಿರುವ ಮುಖ್ಯಮಂತ್ರಿಗಳು, ಅವುಗಳಿಗೆ ಪ್ರತ್ಯೇಕ ಅನುದಾನವನ್ನು ತೋರಿಸುವ ಮೂಲಕ ವಿವಿಧ ವಲಯ, ವರ್ಗ ಹಾಗೂ ಪ್ರದೇಶಗಳ ಸರ್ವತೋಮುಖ ಅಭ್ಯುದಯಕ್ಕೆ ತಮ್ಮ ಬದ್ಧತೆಯೇನು ಎಂಬುದನ್ನು ಶ್ರುತಪಡಿಸಿದ್ದಾರೆ.

ಕೃಷಿ ಮತ್ತು ಪೂರಕ ಚಟುವಟಿಕೆಗಳ ವಲಯಕ್ಕೆ ರೂ. 33,700 ಕೋಟಿ, ಸರ್ವೋದಯ ಮತ್ತು ಕ್ಷೇಮಾಭಿವೃದ್ಧಿ ವಲಯಕ್ಕೆ ರೂ. 68,479 ಕೋಟಿ, ಆರ್ಥಿಕ ಅಭಿವೃದ್ಧಿಗೆ



Downloaded From: www.kpscvaani.com

ಉತ್ತೇಜನಕ್ಕಾಗಿ ರೂ. 55,657 ಕೋಟಿ, ಬೆಂಗಳೂರು ನಗರದ ಸಮಗ್ರ ಅಭಿವೃದ್ಧಿಗೆ ರೂ. 8,409 ಕೋಟಿ, ಸಂಸ್ಕೃತಿ, ಪರಂಪರೆ ಮತ್ತು ನೈಸರ್ಗಿಕ ಸಂಪನ್ಮೂಲಗಳ ರಕ್ಷಣೆಗಾಗಿ ರೂ. 3,012 ಕೋಟಿ, ಆಡಳಿತ ಸುಧಾರಣೆ ಮತ್ತು ಸಾರ್ವಜನಿಕ ಸೇವಾ ವಲಯಕ್ಕೆ ರೂ. 56,710 ಕೋಟಿ ಅನುದಾನ ಹಂಚಿಕೆ ಮಾಡಿರುವುದು ಈ ಬಾರಿಯ ಬಜೆಟ್‌ನ ವೈಶಿಷ್ಟ್ಯ. ಅವುಗಳನ್ನು ವಿಸ್ತೃತವಾಗಿ ಅವಲೋಕಿಸೋಣ.

## ವಲಯ 1: ಕೃಷಿ ಮತ್ತು ಪೂರಕ ಚಟುವಟಿಕೆಗಳು

ಬಜೆಟ್‌ನ ಮೊದಲ ಭಾಗವನ್ನು ಕೃಷಿ ಮತ್ತು ಪೂರಕ ಚಟುವಟಿಕೆಗಳಿಗೆ ಮೀಸಲಿರಿಸಿರುವುದು ಒಂದು ಪ್ರಶಂಸಾರ್ಹ ಉಪಕ್ರಮವಾಗಿದೆ. ರೈತರ ಆದಾಯವನ್ನು ದ್ವಿಗುಣಗೊಳಿಸುವ ನಿಟ್ಟಿನಲ್ಲಿ ಬಜೆಟ್‌ನಲ್ಲಿ ನಿರ್ದಿಷ್ಟ ಕ್ರಮಗಳನ್ನು ಪ್ರಸ್ತಾಪಿಸಲಾಗಿದೆ. ರೈತರ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್, ನೀರಾವರಿ ಸೌಲಭ್ಯ, ರಿಯಾಯಿತಿ ದರದಲ್ಲಿ ಬೀಜ, ಗೊಬ್ಬರ, ಕೃಷಿ ಯಂತ್ರೋಪಕರಣಗಳಿಗೆ ಸಹಾಯಧನ, ಪಿ.ಎಂ. ಕಿಸಾನ್ ಸಹಾಯಧನ ಇತ್ಯಾದಿ ರೈತಸ್ನೇಹಿ ಯೋಜನೆಗಳು ಮುಂದುವರಿಯಲಿರುವುದು ಕೋವಿಡ್‌ನಿಂದ ಕಷ್ಟನಷ್ಟಗಳಿಗೆ ಒಳಗಾಗಿರುವ ರೈತರಿಗೆ ಸಮಾಧಾನ ತರುವ ವಿಷಯವಾಗಿದೆ.

ಕೃಷಿ ಉತ್ಪಾದಕತೆಯನ್ನು ಹೆಚ್ಚಿಸುವಲ್ಲಿ ಕೃಷಿ ಯಾಂತ್ರೀಕರಣದ ಪಾತ್ರ ಬಹುಮುಖ್ಯ ಎಂದು ಹೇಳಿರುವ ಮುಖ್ಯಮಂತ್ರಿಗಳು ಕೃಷಿ ಯಂತ್ರೋಪಕರಣಗಳ ಬಳಕೆಯನ್ನು ಪ್ರೋತ್ಸಾಹಿಸಲು ಹಾಗೂ ಇಂಧನ ವೆಚ್ಚದ ಹೊರೆಯನ್ನು ಕಡಿಮೆ ಮಾಡಲು ರಾಜ್ಯದಲ್ಲಿಯೇ ಮೊಟ್ಟಮೊದಲ ಬಾರಿಗೆ ರೂ. 500 ಕೋಟಿ ಮೊತ್ತದ 'ರೈತಶಕ್ತಿ' ಎಂಬ ಯೋಜನೆಯನ್ನು ಘೋಷಿಸಿರುವುದು ಒಂದು ವಿಶಿಷ್ಟ ಹೆಜ್ಜೆಯಾಗಿದೆ. ರೈತರಿಗೆ ಪ್ರತಿ ಎಕರೆಗೆ ರೂ. 250 ರಂತೆ ಗರಿಷ್ಠ ಐದು ಎಕರೆಗೆ ಡಿ.ಬಿ.ಟಿ ಮೂಲಕ ಡೀಸೆಲ್‌ಗೆ ಸಹಾಯಧನವನ್ನು ಒದಗಿಸುವುದು ಈ ಯೋಜನೆಯ ಉದ್ದೇಶ.

ರಾಜ್ಯದ ಸಣ್ಣ ಮತ್ತು ಅತಿಸಣ್ಣ ರೈತರಿಗೆ ಕೃಷಿ ಯಂತ್ರೋಪಕರಣಗಳನ್ನು ಕೈಗೆಟುಕುವಂತೆ ಮಾಡಲು ಹಾಗೂ ಕೃಷಿ ಉತ್ಪಾದಕತೆಯನ್ನು ಹೆಚ್ಚಿಸಲು ಈಗಾಗಲೇ ಸ್ಥಾಪಿಸಿರುವ ಕೃಷಿಯಂತ್ರಧಾರೆ ಕೇಂದ್ರಗಳನ್ನು ರಾಜ್ಯದ ಎಲ್ಲಾ ಹೋಬಳಿಗಳಿಗೆ ವಿಸ್ತರಿಸುವುದಾಗಿ ಬಜೆಟ್ ತಿಳಿಸಿದೆ.



'ಕೆಪೆಕ್' ಮುಖಾಂತರ ರೈತ ಉತ್ಪಾದಕರ ಸಂಸ್ಥೆಗಳಿಗೆ ಸಾಮಾನ್ಯ ಕೇಂದ್ರಗಳನ್ನು ಅಭಿವೃದ್ಧಿಪಡಿಸಿ, ಕೊಯ್ಲಿನೋತ್ತರ ನಿರ್ವಹಣೆಯನ್ನು ಕೈಗೊಂಡು, ಅವುಗಳ ಉತ್ಪನ್ನಗಳನ್ನು ಮಾರಾಟ ಮತ್ತು ರಫ್ತು ಮಾಡಲು 50 ಕೋಟಿ ರೂ.ಗಳಲ್ಲಿ ಯೋಜನೆ ರೂಪಿಸುವುದಾಗಿಯೂ ಬಜೆಟ್ ಹೇಳಿದೆ.

ಕೃಷಿ/ತೋಟಗಾರಿಕೆ ಉತ್ಪನ್ನಗಳು ಪೋಲಾಗುವುದನ್ನು ತಪ್ಪಿಸಿ, ಮೌಲ್ಯವರ್ಧನೆಯನ್ನು ಉತ್ತೇಜಿಸಲು ಮತ್ತು ಸರಬರಾಜು ಸರಪಳಿಯನ್ನು ಸದೃಢಗೊಳಿಸಲು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಮಿನಿ ಆಹಾರ ಪಾರ್ಕ್‌ಗಳನ್ನು ಹಂತ ಹಂತವಾಗಿ ಖಾಸಗಿ–ಸಾರ್ವಜನಿಕ ಸಹಭಾಗಿತ್ವದಲ್ಲಿ ಸ್ಥಾಪಿಸುವ ಪ್ರಸ್ತಾಪ ರೈತರಲ್ಲಿ ಹೊಸ ವಿಶ್ವಾಸ ಮೂಡಿಸುವುದರಲ್ಲಿ ಅನುಮಾನವಿಲ್ಲ.

ಎಲ್ಲಾ ಕೃಷಿ/ತೋಟಗಾರಿಕಾ ವಿಶ್ವವಿದ್ಯಾಲಯಗಳ ಮುಖಾಂತರ ತಲಾ 1,000 ಎಕರೆ ಪ್ರದೇಶದಲ್ಲಿ ನೈಸರ್ಗಿಕ ಕೃಷಿ ಪದ್ಧತಿಯಲ್ಲಿ ಸಾರಜನಕ ಸ್ಥಿರೀಕರಣ, ಜೈವಿಕ ವಿಶ್ಲೇಷಣೆ ಅಧ್ಯಯನಗಳನ್ನು

**2022–23 ನೇ ಸಾಲಿನಲ್ಲಿ ಒಟ್ಟು ಜಮೆಗಳು 2,61,977 ಕೋಟಿ ರೂಗಳಾಗುತ್ತದೆಂದು ಅಂದಾಜು ಮಾಡಲಾಗಿದೆ. ಇದರಲ್ಲಿ 1,89,88 ಕೋಟಿ ರೂ. ರಾಜಸ್ವ ಜಮೆಗಳು ಹಾಗೂ 72,000 ಕೋಟಿ ರೂ.ಗಳ ಸಾಲ ಸೇರಿದಂತೆ 72,089 ಕೋಟಿ ರೂ.ಗಳ ಬಂಡವಾಳ ಜಮೆಗಳು ಒಳಗೊಂಡಿರುತ್ತದೆ. 2,04,587 ಕೋಟಿ ರೂಗಳ ರಾಜಸ್ವ ವೆಚ್ಚ, 46,955 ಕೋಟಿ ರೂಗಳ ಬಂಡವಾಳ ವೆಚ್ಚ ಹಾಗೂ ಸಾಲದ ಮರುಪಾವತಿ 14,179 ಕೋಟಿ ರೂಗಳ ವೆಚ್ಚವನ್ನು ಒಳಗೊಂಡು, ಒಟ್ಟು ವೆಚ್ಚವು 2,65,720 ಕೋಟಿ ರೂ.ಗಳಾಗುತ್ತದೆಂದು ಅಂದಾಜು ಮಾಡಲಾಗಿದೆ.**



Downloaded From: www.kpscvaani.com



ಕೈಗೊಳ್ಳುವ ಯೋಜನೆಯನ್ನು ಬಜೆಟ್ ಪ್ರಕಟಿಸಿದ್ದು, ನೈಸರ್ಗಿಕ ಕೃಷಿಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಪ್ರಮುಖ ಹೆಜ್ಜೆಯೆನಿಸಲಿದೆ. ಮಹಿಳೆಯರಿಗಾಗಿ ಪ್ರತ್ಯೇಕ ಕೃಷಿ ಪ್ರಶಸ್ತಿ ಹಾಗೂ ಕೃಷಿ ಪಂಡಿತ ಪ್ರಶಸ್ತಿಯನ್ನು ನೀಡುವ ಘೋಷಣೆಯಂತೂ ಕೃಷಿಯಲ್ಲಿ ರೈತ ಮಹಿಳೆಯರನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಒಂದು ಅಭಿನಂದನಾರ್ಹ ನಡೆಯಾಗಿದೆ.

ಬಳ್ಳಾರಿ ಜಿಲ್ಲೆಯ ಹಗರಿ ಹಾಗೂ ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನಲ್ಲಿ ಹೊಸ ಕೃಷಿ ಕಾಲೇಜುಗಳ ಸ್ಥಾಪನೆ, ಹಿರೇಕೆರೂರಿನಲ್ಲಿ ಗೋವಿನ ಜೋಳ ಸಂಶೋಧನಾ ಕೇಂದ್ರ, ಧಾರವಾಡದ ಕೃಷಿ ವಿಶ್ವವಿದ್ಯಾಲಯದಲ್ಲಿ ಡಾ.ಎಸ್.ವಿ.ಪಾಟೀಲ್ ಕೃಷಿ ಸಂಶೋಧನೆ, ತರಬೇತಿ ಹಾಗೂ ರೈತರ ಶ್ರೇಯೋಭಿವೃದ್ಧಿ ಪೀಠ ಸ್ಥಾಪನೆ ಬಜೆಟ್‌ನ ಪ್ರಮುಖ ಅಂಶಗಳಾಗಿವೆ.

ಯಲಹಂಕ ಬಳಿಯ ಜಾರಕಬಂಡೆ ಕಾವಲ್ ಪ್ರದೇಶದ 350 ಎಕರೆ ಸರ್ಕಾರಿ ಜಮೀನಿನಲ್ಲಿ ಲಾಲ್‌ಬಾಗ್-ಕಬ್ಬನ್ ಪಾರ್ಕ್‌ಗಳ ಮಾದರಿಯಲ್ಲಿ ವಿವಿಧೋದ್ದೇಶ ಅಟಲ್ ಬಿಹಾರಿ ವಾಜಪೇಯಿ ಉದ್ಯಾನವನವನ್ನು ಅಭಿವೃದ್ಧಿಗೊಳಿಸುವ ಬಜೆಟ್ ಪ್ರಸ್ತಾವನೆ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಬೆಂಗಳೂರು ನಗರದಲ್ಲಿ ಹಸಿರು ವಲಯ ಹೆಚ್ಚಿಸುವತ್ತ ಒಂದು ಪ್ರಮುಖ ನಡೆಯಾಗಿದೆ.

ತೋಟಗಾರಿಕೆ ಬೆಳೆಗಳಿಗೆ ಹನಿ ನೀರಾವರಿ ಅಳವಡಿಸಲು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಶೇ.90ರಷ್ಟು ಹಾಗೂ ಇತರೆ ವರ್ಗದ ರೈತರಿಗೆ ಶೇ.75ರಷ್ಟು ಸಹಾಯಧನ ನೀಡುವುದು, ರಾಜ್ಯದಲ್ಲೇ ಅತಿಹೆಚ್ಚು ದ್ರಾಕ್ಷಿ ಬೆಳೆಯುವ ವಿಜಯಪುರ ಜಿಲ್ಲೆಯಲ್ಲಿ ಅತ್ಯಾಧುನಿಕ ಶೈತ್ಯಾಗಾರದ ನಿರ್ಮಾಣ, ರಾಷ್ಟ್ರೀಯ ಖಾದ್ಯ ತೈಲಗಳ ಅಭಿಯಾನಕ್ಕೆ ರೂ. 35 ಕೋಟಿ ಅನುದಾನ, ತೋಟಗಾರಿಕೆಯಲ್ಲಿ ವಿನೂತನ ತಂತ್ರಜ್ಞಾನ ಹಾಗೂ ಯಂತ್ರೋಪಕರಣಗಳನ್ನು ಅಳವಡಿಸಲು ರೂ. 25 ಕೋಟಿ ಅನುದಾನ, ಮೆಣಸು ಮತ್ತು ಇತರ ಸಾಂಬಾರ ಪದಾರ್ಥಗಳ ಗುಣಮಟ್ಟ ಹೆಚ್ಚಿಸಲು ಬ್ಯಾಡಗಿಯಲ್ಲಿ ಸಂಶೋಧನ ಕೇಂದ್ರ ಸ್ಥಾಪನೆ, ಹಾನಗಲ್‌ನಲ್ಲಿ ಮಾವು ಸಂಸ್ಕರಣಾ ಘಟಕ ಸ್ಥಾಪನೆ ಮುಂತಾದ ಹೊಸ ಪ್ರಸ್ತಾಪಗಳು ತೋಟಗಾರಿಕೆ ಅಭಿವೃದ್ಧಿಗೆ ಸರ್ಕಾರ ತೋರಿಸಿರುವ ಬದ್ಧತೆಯನ್ನು ದೃಢಪಡಿಸಿವೆ.

ರೇಷ್ಮೆ ಉತ್ಪಾದನೆಯಲ್ಲಿ ನಮ್ಮ ರಾಜ್ಯವು ರಾಷ್ಟ್ರದಲ್ಲಿಯೇ ಪ್ರಥಮ ಸ್ಥಾನದಲ್ಲಿದ್ದು, ಇದನ್ನು ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಬಜೆಟ್‌ನಲ್ಲಿ ಅನೇಕ ಹೊಸ ಯೋಜನೆಗಳನ್ನು ಪ್ರಸ್ತಾಪಿಸಿರುವುದು ಗಮನಾರ್ಹ. ಸರ್ಕಾರಿ ರೇಷ್ಮೆಗೂಡು ಮಾರುಕಟ್ಟೆಯಲ್ಲಿ ಮಾರಾಟ ಮಾಡುವ ಪ್ರತಿ ಟನ್ ದ್ವಿತಳಿ ರೇಷ್ಮೆಗೂಡಿಗೆ 10 ಸಾವಿರ ರೂ.ಗಳಂತೆ ಪ್ರೋತ್ಸಾಹ ಧನ ನೀಡುವ ಘೋಷಣೆ, ದ್ವಿತಳಿ ಮೊಟ್ಟೆ ಉತ್ಪಾದಿಸಿ ಶೈತ್ಯೀಕರಿಸಲು ಮದ್ದೂರು, ರಾಣೆಬೆನ್ನೂರು ಮತ್ತು ದೇವನಹಳ್ಳಿಯಲ್ಲಿ ರೂ. 15 ಕೋಟಿ ವೆಚ್ಚದಲ್ಲಿ ಶೈತ್ಯಾಗಾರಗಳ ಸ್ಥಾಪನೆ, ಕಲಬುರಗಿ ಮತ್ತು ಹಾವೇರಿ ಜಿಲ್ಲೆಯಲ್ಲಿ ನಬಾರ್ಡ್ ನೆರವಿನೊಂದಿಗೆ ರೂ. 30 ಕೋಟಿ ವೆಚ್ಚದಲ್ಲಿ ಹೈಟೆಕ್ ಸರ್ಕಾರಿ ರೇಷ್ಮೆ ಗೂಡು ಮಾರುಕಟ್ಟೆಯ ನಿರ್ಮಾಣ, ದ್ವಿತಳಿ ಬಿತ್ತನೆ ಗೂಡಿಗೆ ನೀಡುತ್ತಿರುವ ಪ್ರೋತ್ಸಾಹಧನವನ್ನು ಪ್ರತಿ ಕೆಜಿಗೆ ರೂ. 50ರಷ್ಟು ಹೆಚ್ಚಿಸುವುದು, ಮಂಡ್ಯ ಜಿಲ್ಲೆಯ ಕೆ.ಆರ್. ಪೇಟೆಯಲ್ಲಿ ರೇಷ್ಮೆ ಕೃಷಿಗೆ ಸಂಬಂಧಿಸಿದ ತರಬೇತಿ







Downloaded From: www.kpscvaani.com

ಕೇಂದ್ರ ಸ್ಥಾಪನೆ ಇವೇ ಮುಂತಾದ ಬಜೆಟ್ ಪ್ರಸ್ತಾಪಗಳು ರೇಷ್ಮೆಕೃಷಿಯಲ್ಲಿ ರೈತರು ಮಾಡಿರುವ ಸಾಧನೆಗೆ ದೊರೆತಿರುವ ವಿಶಿಷ್ಟ ಪ್ರತಿಫಲಗಳೆಂದು ನಿಶ್ಚಿತವಾಗಿ ಹೇಳಬಹುದು.

ಗ್ರಾಮೀಣ ಪ್ರದೇಶಗಳಲ್ಲಿ ಹೊಸ 100 ಪಶುಚಿಕಿತ್ಸಾಲಯಗಳ ಸ್ಥಾಪನೆ, ರಾಜ್ಯದಲ್ಲೇ ಮೊದಲ ಬಾರಿಗೆ ಕ್ಷೀರ ಸಮೃದ್ಧಿ ಸಹಕಾರ ಬ್ಯಾಂಕ್ ಸ್ಥಾಪನೆ, ಹಾವೇರಿ ಜಿಲ್ಲೆಯಲ್ಲಿ ಒಂದು ಲಕ್ಷ ಲೀಟರ್ ಸಾಮರ್ಥ್ಯದ ಮೆಗಾಡೈರಿ, ಶಿವಮೊಗ್ಗ, ದಾವಣಗೆರೆ-ಚಿತ್ರದುರ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಪ್ರತ್ಯೇಕ ಜಿಲ್ಲಾ ಹಾಲು ಒಕ್ಕೂಟ, ರಾಜ್ಯದಲ್ಲಿರುವ ಗೋಶಾಲೆಗಳನ್ನು 100ಕ್ಕೆ ಹೆಚ್ಚಿಸಲು ರೂ. 50 ಕೋಟಿ ಅನುದಾನ, ಗೋವುಗಳನ್ನು ದತ್ತು ತೆಗೆದುಕೊಳ್ಳುವುದನ್ನು ಪ್ರೋತ್ಸಾಹಿಸಲು ಪುಣ್ಯಕೋಟಿ ದತ್ತು ಯೋಜನೆ, ಕೆ.ಎಂ.ಎಫ್. ಮೂಲಕ ರೈತರಿಗೆ 2,000 ಗೋತಳಿಗಳ ಹಂಚಿಕೆ, ಗೋಶಾಲೆಗಳಲ್ಲಿನ ತ್ಯಾಜ್ಯಗಳನ್ನು ಪರಿಸರ ಸ್ನೇಹಿ ಉತ್ಪನ್ನಗಳಾಗಿಸಲು ಆರ್ಥಿಕ ನೆರವು, ಗೋಉತ್ಪನ್ನಗಳ ಮಾರಾಟಕ್ಕಾಗಿ 'ಗೋಮಾತಾ ಸಹಕಾರ ಸಂಘ'ದ ಸ್ಥಾಪನೆ, ಜೊತೆಗೆ ಗೋ ಉತ್ಪನ್ನಗಳ ತಾಂತ್ರಿಕತೆ ಮತ್ತು ಪ್ರಮಾಣೀಕರಣದ ಅಭಿವೃದ್ಧಿಗಾಗಿ ಪಶುವಿಶ್ವವಿದ್ಯಾಲಯದಲ್ಲಿ ಹೊಸ ಸಂಶೋಧನಾ ಕೋಶ ಸ್ಥಾಪನೆ ಮುಂತಾದವನ್ನು ಮುಖ್ಯಮಂತ್ರಿಗಳು ಪ್ರಸ್ತಾಪಿಸಿದ್ದು, ಹೈನುಗಾರಿಕೆಯ ರಕ್ಷಣೆ ಹಾಗೂ ಅಭಿವೃದ್ಧಿಯ ಕಡೆಗೆ ಸರ್ಕಾರಕ್ಕಿರುವ ಬದ್ಧತೆಯನ್ನು ಸಾಬೀತು ಪಡಿಸುತ್ತದೆ.

300 ಕಿ.ಮೀ.ಗೂ ಹೆಚ್ಚು ಉದ್ದದ ಕರಾವಳಿ ತೀರವನ್ನು ಹೊಂದಿರುವ ಕರ್ನಾಟಕದಲ್ಲಿ ಆಳಸಮುದ್ರ ಮೀನುಗಾರಿಕೆಗೆ ಇರುವ ವಿಫುಲ ಅವಕಾಶವನ್ನು ಸರ್ಕಾರ ಗುರುತಿಸಿರುವುದು ಪ್ರಸಕ್ತ ಬಜೆಟ್‌ನಲ್ಲಿ ಎದ್ದುಕಾಣುತ್ತದೆ. ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆಯೊಂದಿಗೆ ಸಂಯೋಜಿಸಿ 'ಮತ್ಸ್ಯ ಸಿರಿ' ಎಂಬ ವಿಶೇಷ ಯೋಜನೆಯನ್ನು ಮೊತ್ತಮೊದಲ ಬಾರಿಗೆ ರೂಪಿಸುವ ಪ್ರಸ್ತಾಪವನ್ನು ಸರ್ಕಾರ ಮಾಡಿದ್ದು, ಇದರಿಂದ 100 ಆಳ ಸಮುದ್ರ ಮೀನುಗಾರಿಕಾ ದೋಣಿಗಳಿಗೆ ವಿಶೇಷ ಪ್ರೋತ್ಸಾಹ ಲಭ್ಯವಾಗಲಿದೆ. 5,000 ವಸತಿರಹಿತ ಮೀನುಗಾರರಿಗೆ ರಾಜೀವ್ ಗಾಂಧಿ ವಸತಿ ನಿಗಮದ ಮೂಲಕ ಮನೆಗಳ ನಿರ್ಮಾಣ, ಮೀನುಗಾರಿಕಾ ಚಾನೆಲ್‌ಗಳ ಹೂಳೆತ್ತುವಿಕೆಗೆ ಆದ್ಯತೆ ಇನ್ನಿತರ ಪ್ರಮುಖ ಹೆಜ್ಜೆಗಳಾಗಿವೆ.

**ಕೃಷಿ ವಲಯದ ಪ್ರಮುಖ ಅಂಶಗಳು**

- ಡೀಸೆಲ್ ಸಹಾಯಧನಕ್ಕೆ ರೂ. 500 ಕೋಟಿಗಳ 'ರೈತಶಕ್ತಿ'
- ಪ್ರತೀ ಜಿಲ್ಲೆಗೂ ಮಿನಿ ಆಹಾರ ಪಾರ್ಕ್
- ಬಳ್ಳಾರಿ, ಬೆಳಗಾವಿಗೆ ಹೊಸ ಕೃಷಿ ಕಾಲೇಜುಗಳು
- ತೋಟಗಾರಿಕಾ ಬೆಳೆಗಳಿಗೆ ವಿಶೇಷ ಉತ್ತೇಜನ
- ಹಾಲು ಉತ್ಪಾದಕರಿಗೆ ಕ್ಷೀರ ಸಮೃದ್ಧಿ ಸಹಕಾರ ಬ್ಯಾಂಕ್
- ಗೋಶಾಲೆಗಳ ಹೆಚ್ಚಳ, ಪುಣ್ಯಕೋಟಿ ದತ್ತು ಯೋಜನೆ
- ಗೋಮಾತಾ ಸಹಕಾರ ಸಂಘ ಸ್ಥಾಪನೆ
- ಆಳಸಮುದ್ರ ಮೀನುಗಾರಿಕೆ ದೋಣಿಗಳಿಗೆ 'ಮತ್ಸ್ಯಸಿರಿ'

## ವಲಯ 2: ಸರ್ವೋದಯ ಮತ್ತು ಕ್ಷೇಮಾಭಿವೃದ್ಧಿ

ವಿವಿಧ ಅಭಿವೃದ್ಧಿ ಸೂಚಕಗಳಲ್ಲಿ ರಾಜ್ಯ ಸರಾಸರಿಗಿಂತ ಕಡಿಮೆ ಸಾಧನೆ ಮಾಡುತ್ತಿರುವ ತಾಲ್ಲೂಕುಗಳನ್ನು ಅಭಿವೃದ್ಧಿ ಆಕಾಂಕ್ಷಿ ತಾಲ್ಲೂಕುಗಳೆಂದು ಗುರುತಿಸಿ, ಅವುಗಳ ಸಮಗ್ರ ಅಭಿವೃದ್ಧಿಗೆ ಒತ್ತು ನೀಡುವ ಘೋಷಣೆ ಮಾಡಿರುವುದು ಬಜೆಟ್‌ನ ಧನಾತ್ಮಕ ಅಂಶಗಳಲ್ಲೊಂದು. ಇದರನ್ವಯ 93 ತಾಲೂಕುಗಳಲ್ಲಿ ಶಿಕ್ಷಣದ ಗುಣಮಟ್ಟವನ್ನು ವೃದ್ಧಿಸಲು, 100 ತಾಲ್ಲೂಕುಗಳಲ್ಲಿ ಆರೋಗ್ಯ ಸೇವೆಯನ್ನು ಬಲಪಡಿಸಲು ಮತ್ತು 102 ತಾಲೂಕುಗಳಲ್ಲಿ ಮಕ್ಕಳ ಅಪೌಷ್ಟಿಕತೆ ನಿವಾರಿಸಲು ಒಟ್ಟಾರೆ 3,000 ಕೋಟಿ ರೂ. ವೆಚ್ಚದಲ್ಲಿ ಫಲಿತಾಂಶ ಕೇಂದ್ರಿತ ಪ್ರಯತ್ನಗಳನ್ನು ಮಾಡಲಾಗುವುದು ಎಂದು ಬಜೆಟ್ ಪ್ರಸ್ತಾಪಿಸಿದೆ.

ಲೋಕೋಪಯೋಗಿ ಇಲಾಖೆಯ ಮುಖಾಂತರ ನೂರು ಡಾ.ಬಿ.ಆರ್.ಅಂಬೇಡ್ಕರ್ ವಿದ್ಯಾರ್ಥಿನಿಲಯಗಳನ್ನು ಹಾಗೂ 10 ಕ್ರೈಸ್ ವಸತಿ ಶಾಲೆಗಳ ಕಟ್ಟಡಗಳನ್ನು 750 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸುವುದು, ಬಾಡಿಗೆ ಕಟ್ಟಡಗಳಲ್ಲಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ 50 ಕನಕದಾಸ ವಿದ್ಯಾರ್ಥಿನಿಲಯಗಳಿಗೆ 165 ಕೋಟಿ ರೂ.ಗಳ ವೆಚ್ಚದಲ್ಲಿ ಸುಸಜ್ಜಿತ ಕಟ್ಟಡಗಳನ್ನು ನಿರ್ಮಾಣ ಮಾಡುವುದು, ಅಪೌಷ್ಟಿಕ ಮಕ್ಕಳಿಗೆ ಆರೈಕೆಯನ್ನು ಒದಗಿಸಲು ಹೆಚ್ಚುವರಿಯಾಗಿ 37 ಪೌಷ್ಟಿಕ ಪುನರ್ವಸತಿ ಕೇಂದ್ರಗಳನ್ನು ಸ್ಥಾಪಿಸುವುದು, ಸ್ವಂತ ಕಟ್ಟಡಗಳಿಲ್ಲದಿರುವ 1,000 ಅಂಗನವಾಡಿಗಳಿಗೆ ಮಹಾತ್ಮ ಗಾಂಧಿ ನರೇಗಾ ಯೋಜನೆಯೊಂದಿಗೆ ಸಂಯೋಜಿಸಿ ರೂ. 50 ವೆಚ್ಚದಲ್ಲಿ ಕಟ್ಟಡಗಳನ್ನು ನಿರ್ಮಿಸುವುದು, ರಾಜ್ಯದ ಸರ್ಕಾರಿ ಶಾಲೆಗಳಲ್ಲಿನ ಮೂಲಸೌಕರ್ಯ ಅಭಿವೃದ್ಧಿಗೆ 500 ಕೋಟಿ ರೂ.ಗಳನ್ನು ಒದಗಿಸುವುದು ಶಿಕ್ಷಣ ಕ್ಷೇತ್ರದ ಅಭ್ಯುದಯ ದೃಷ್ಟಿಯಿಂದ ಬಜೆಟ್‌ನಲ್ಲಿ ಮಾಡಿರುವ ಪ್ರಮುಖ ಘೋಷಣೆಗಳಾಗಿವೆ.

ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೊಳಿಸುವಲ್ಲಿ ಕರ್ನಾಟಕವು ಇಡೀ ದೇಶದಲ್ಲೇ ಮುಂಚೂಣಿಯಲ್ಲಿದೆ. ಈ ಶ್ರೇಷ್ಠ ಉಪಕ್ರಮದ ಮುಂದಿನ ಹೆಜ್ಜೆಗಳನ್ನು ಅನುಷ್ಠಾಗೊಳಿಸುವುದಕ್ಕಾಗಿ ಬಜೆಟ್‌ನಲ್ಲಿ ವಿಶೇಷ ಒಲವು ತೋರಿರುವುದು ಪ್ರಶಂಸನೀಯವಾಗಿದೆ. ಈಗಾಗಲೇ ಪದವಿ ಹಂತದಲ್ಲಿ ನೂತನ ಪಠ್ಯಕ್ರಮ ಜಾರಿಮಾಡಿದ್ದು, ಹೊಸ ಆರ್ಥಿಕ ವರ್ಷದಲ್ಲಿ ಪೂರ್ವ ಪ್ರಾಥಮಿಕ, ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢ ಶಿಕ್ಷಣ, ಶಿಕ್ಷಕರ ಶಿಕ್ಷಣ ಹಾಗೂ ವಯಸ್ಕರ ಶಿಕ್ಷಣ ಕ್ಷೇತ್ರಗಳಿಗೂ ನೂತನ ಪಠ್ಯಕ್ರಮವನ್ನು ರಚಿಸುವ ಪ್ರಸ್ತಾಪನ್ನು ಬಜೆಟ್ ಮಾಡಿದೆ.

ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣದ ಮಟ್ಟವನ್ನು ಉತ್ತಮಪಡಿಸಲು ಹೋಬಳಿ ಮಟ್ಟದಲ್ಲಿ ಮೂಲಭೂತ ಸೌಕರ್ಯವಿರುವ ಶಾಲೆಗಳನ್ನು ಮಾದರಿ ಶಾಲೆಗಳಾಗಿ ಉನ್ನತೀಕರಿಸುವುದು, ಎಲ್ಲಾ 3 ರಿಂದ 6ನೇ ವಯೋಮಾನದ ಮಕ್ಕಳಿಗೆ ಗುಣಮಟ್ಟದ ಪೂರ್ವ ಪ್ರಾಥಮಿಕ ಶಿಕ್ಷಣ ಮತ್ತು ಆರೈಕೆ ನೀಡಲು ರಾಜ್ಯದ 20,000 ಅಂಗನವಾಡಿಗಳಲ್ಲಿ 30 ಕೋಟಿ ರೂ.ಗಳ ವೆಚ್ಚದಲ್ಲಿ ನೂತನ ಪಠ್ಯಕ್ರಮವನ್ನು ಜಾರಿಗೊಳಿಸುವುದು, ಸಾರ್ವಜನಿಕ



Downloaded From: www.kpscvaani.com



ಗ್ರಂಥಾಲಯ ಇಲಾಖೆ ವತಿಯಿಂದ ರಾಜ್ಯಾದ್ಯಂತ ಡಿಜಿಟಲ್ ಗ್ರಂಥಾಲಯಗಳನ್ನು ಸ್ಥಾಪಿಸುವುದು, ಕೆ.ಪಿ.ಎಸ್.ಸಿ., ಯು.ಪಿ.ಎಸ್.ಸಿ., ಎಸ್.ಎಸ್.ಸಿ., ಬ್ಯಾಂಕಿಂಗ್, ರೈಲ್ವೆ, ಸಿ.ಡಿ.ಎಸ್., ನೀಟ್, ಜೆಇಇ ಮುಂತಾದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಮುಖ್ಯಮಂತ್ರಿ ವಿದ್ಯಾರ್ಥಿ ಮಾರ್ಗದರ್ಶಿನಿ ಎಂಬ ಹೊಸ ಯೋಜನೆಯಡಿ ಉಚಿತ ಆನ್‌ಲೈನ್ ತರಬೇತಿ ಒದಗಿಸುವುದು, ಅಕ್ಷರ ದಾಸೋಹ ಯೋಜನೆಯಡಿ ಬಿಸಿಯೂಟ ಕಾರ್ಯಕರ್ತರ ಗೌರವಧನವನ್ನು ರೂ. 1,000ಗಳಷ್ಟು ಹೆಚ್ಚಿಸುವುದು, ಅತ್ಯುನ್ನತ ಗುಣಮಟ್ಟದ ತಾಂತ್ರಿಕ ಬೋಧನೆ-ಕಲಿಕೆ ಹಾಗೂ ಸಂಶೋಧನೆಯನ್ನು ಉತ್ತೇಜಿಸಲು ರಾಜ್ಯದ ಏಳು ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳನ್ನು ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಗಳನ್ನಾಗಿ ಉನ್ನತೀಕರಿಸಿ, ಪ್ರತಿಷ್ಠಿತ ವಿದೇಶಿ ವಿಶ್ವವಿದ್ಯಾಲಯಗಳೊಂದಿಗೆ ಒಪ್ಪಂದ ಮಾಡಿಕೊಳ್ಳುವುದು - ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದ ಇತರ ಉಪಕ್ರಮಗಳಾಗಿವೆ.

ಇಷ್ಟಲ್ಲದೆ, ಶೈಕ್ಷಣಿಕವಾಗಿ ಹಿಂದುಳಿದಿರುವ ಚಾಮರಾಜನಗರ, ಬೀದರ್, ಹಾವೇರಿ, ಹಾಸನ, ಕೊಡಗು, ಕೊಪ್ಪಳ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ವಿನೂತನ ಮಾದರಿಯ ಏಳು ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವ ಘೋಷಣೆಯನ್ನು ಬಜೆಟ್‌ನಲ್ಲಿ ಮಾಡಿರುವುದು ಸ್ವಾಗತಾರ್ಹವಾಗಿದೆ. ಈ ವಿಶ್ವವಿದ್ಯಾಲಯಗಳು ಸಾಂಪ್ರದಾಯಿಕ ವಿಶ್ವವಿದ್ಯಾಲಯಗಳಿಗಿಂತ ಭಿನ್ನವಾಗಿ ತಂತ್ರಜ್ಞಾನದ ಗರಿಷ್ಠ ಬಳಕೆಯೊಂದಿಗೆ ಹೆಚ್ಚುವರಿ ಮಾನವ ಸಂಪನ್ಮೂಲ ಉಪಯೋಗಿಸದೆ ಕಾರ್ಯನಿರ್ವಹಿಸಲಿವೆ. ಸ್ನಾತಕೋತ್ತರ ಕೇಂದ್ರಗಳಲ್ಲಿ ಲಭ್ಯವಿರುವ ಸೌಲಭ್ಯಗಳನ್ನು ಬಳಸಲಿರುವ ಈ ವಿಶ್ವವಿದ್ಯಾಲಯಗಳಿಗೆ ವಾರ್ಷಿಕ ತಲಾ 2 ಕೋಟಿ ರೂ.ಗಳ ಆವರ್ತಕ ವೆಚ್ಚ ನೀಡುವ ಭರವಸೆಯನ್ನು ಸರ್ಕಾರ ನೀಡಿದೆ.

ಆರೋಗ್ಯ ಕ್ಷೇತ್ರದ ಅಭಿವೃದ್ಧಿಗೂ ಬಜೆಟ್‌ನಲ್ಲಿ ಸಾಕಷ್ಟು ಒತ್ತು ನೀಡಲಾಗಿದೆ. ರಾಜ್ಯದ ಪ್ರಮುಖ ನಗರಗಳಲ್ಲಿ ಸಾಂಕ್ರಾಮಿಕ ರೋಗಗಳ ಪತ್ತೆ ಮತ್ತು ಚಿಕಿತ್ಸೆಗಾಗಿ 438 'ನಮ್ಮ ಕ್ಲಿನಿಕ್'ಗಳನ್ನು ಸ್ಥಾಪಿಸುವುದು, ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ 300 ಮಹಿಳಾ ಸ್ವಾಸ್ಥ್ಯ ಕೇಂದ್ರಗಳನ್ನು ಸ್ಥಾಪಿಸುವುದು, ತಾಲ್ಲೂಕು ಮಟ್ಟದಲ್ಲಿ ಸುಸಜ್ಜಿತ ವೈದ್ಯಕೀಯ ಸೇವೆಗಳನ್ನು ಒದಗಿಸಲು ರಾಜ್ಯದ ಏಳು ತಾಲ್ಲೂಕು ಆಸ್ಪತ್ರೆಗಳನ್ನು 100 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸುವುದು, ಸ್ನಾತಕೋತ್ತರ ವೈದ್ಯಕೀಯ ಕೋರ್ಸ್‌ಗಳನ್ನು ಜಿಲ್ಲಾ ಮಟ್ಟದಲ್ಲಿ ಪ್ರಾರಂಭಿಸಲು ಅನುವಾಗುವಂತೆ 200ಕ್ಕೂ ಹೆಚ್ಚು ಹಾಸಿಗೆಗಳ ಸಾಮರ್ಥ್ಯವಿರುವ ಸರ್ಕಾರಿ ಆಸ್ಪತ್ರೆಗಳನ್ನು ಬೋಧನಾ ಆಸ್ಪತ್ರೆಗಳನ್ನಾಗಿ ಪರಿವರ್ತಿಸುವುದು, ತುಮಕೂರು ಜಿಲ್ಲಾ ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯಕೀಯ ಸ್ನಾತಕೋತ್ತರ ಕೋರ್ಸ್‌ಗಳನ್ನು ಪ್ರಾರಂಭಿಸುವುದು ಈ ನಿಟ್ಟಿನಲ್ಲಿ ನೀಡಿರುವ ಪ್ರಮುಖ ಭರವಸೆಗಳಾಗಿವೆ.

ಗ್ರಾಮೀಣ ಪ್ರದೇಶಗಳಲ್ಲಿ ಮನೆ ಬಾಗಿಲಿಗೆ ಅತ್ಯುತ್ತಮ ವೈದ್ಯಕೀಯ ಸೇವೆ ಒದಗಿಸುವ ಉದ್ದೇಶದಿಂದ ಬೀದರ್, ಚಾಮರಾಜನಗರ, ಹಾವೇರಿ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಮುಖ್ಯಮಂತ್ರಿ ಆರೋಗ್ಯ ವಾಹಿನಿ ಎಂಬ ಹೊಸ ಯೋಜನೆಯಡಿ 11 ಕೋಟಿ ರೂ. ವೆಚ್ಚದಲ್ಲಿ ಸಂಚಾರಿ ಕ್ಲಿನಿಕ್‌ಗಳನ್ನು ಸ್ಥಾಪಿಸುವುದು, ಹಾವೇರಿ ಜಿಲ್ಲೆ ಸವಣೂರು ತಾಲ್ಲೂಕಿನಲ್ಲಿ ಹೊಸ ಆಯುರ್ವೇದ ಕಾಲೇಜು ಸ್ಥಾಪಿಸುವುದು, ಆಶಾ ಕಾರ್ಯಕರ್ತೆಯರು ಹಾಗೂ ಅಂಗನವಾಡಿ ಕಾರ್ಯಕರ್ತೆಯರ ಮಾಸಿಕ ಗೌರವಧನವನ್ನು ಹೆಚ್ಚಿಸುವುದು, ಅಪೌಷ್ಟಿಕತೆಯ ನಿವಾರಣೆಗಾಗಿ 'ಪೌಷ್ಟಿಕ ಕರ್ನಾಟಕ' ಯೋಜನೆ ಮುಂತಾದ ಪ್ರಸ್ತಾಪಗಳು ಆರೋಗ್ಯ ಕ್ಷೇತ್ರಕ್ಕೆ ಹೊಸ ಭರವಸೆ ಮೂಡಿಸಬಹುದೆಂದು ನಿರೀಕ್ಷಿಸಲಾಗಿದೆ.

ಮಹಿಳೆಯರ ರಕ್ಷಣೆ, ಆರ್ಥಿಕ ಸ್ವಾವಲಂಬನೆಗೆ ಒತ್ತು ನೀಡುವ ಹೆಜ್ಜೆಯಾಗಿ, ಮಹಿಳಾ ಉದ್ದೇಶಿತ ಯೋಜನೆಗಳಿಗೆ 2022-23ನೇ ಸಾಲಿನಲ್ಲಿ 43,188 ಕೋಟಿ ರೂ. ಅನುದಾನ ಒದಗಿಸಿರುವುದು ವಿಶೇಷವಾಗಿದೆ.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ,



Downloaded From: www.kpscvaani.com



**ಸರ್ವೋದಯ ಮತ್ತು ಕ್ಷೇಮಾಭಿವೃದ್ಧಿ ವಲಯದ ಪ್ರಮುಖ ಅಂಶಗಳು**

- ಅಭಿವೃದ್ಧಿ ಆಕಾಂಕ್ಷಿ ತಾಲೂಕುಗಳಿಗೆ ರೂ. 3000 ಕೋಟಿ ಅನುದಾನ
- ವಿದ್ಯಾರ್ಥಿನಿಯಲಗಳ ಸ್ಥಾಪನೆ, ಉನ್ನತೀಕರಣಕ್ಕೆ ಆದ್ಯತೆ
- ಏಳು ಹೊಸ ವಿಶ್ವವಿದ್ಯಾನಿಲಯಗಳ ಸ್ಥಾಪನೆ
- ಪೂರ್ವಪ್ರಾಥಮಿಕ ಹಂತದಿಂದಲೇ ನೂತನ ಪಠ್ಯಕ್ರಮ
- ರಾಜ್ಯಾದ್ಯಂತ ಡಿಜಿಟಲ್ ಗ್ರಂಥಾಲಯಗಳ ಸ್ಥಾಪನೆ
- ಸಾಂಕ್ರಾಮಿಕ ರೋಗಗಳ ಪತ್ತೆಗೆ **'ನಮ್ಮ ಕ್ಲಿನಿಕ್'**
- ಮಹಿಳಾ ಉದ್ದೇಶಿತ ಯೋಜನೆಗಳಿಗೆ 43,188 ಕೋಟಿ ರೂ. ಅನುದಾನ

ಹಿಂದುಳಿದ, ಅಲ್ಪಸಂಖ್ಯಾತ ಮತ್ತು ಇತರೆ ವರ್ಗದ ಮಕ್ಕಳಲ್ಲಿ ಉನ್ನತ ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸಲು, ಸರ್ಕಾರವು ಮೊಟ್ಟಮೊದಲ ಬಾರಿಗೆ 'ದೀನದಯಾಳ್ ಉಪಾಧ್ಯಾಯ ಸೌಹಾರ್ದ ವಿದ್ಯಾರ್ಥಿನಿಲಯ' ಎಂಬ ಹೊಸ ಯೋಜನೆಯನ್ನು ಪ್ರಸ್ತಾಪಿಸಿದ್ದು ರಾಜ್ಯದ ಶೈಕ್ಷಣಿಕ ಕೇಂದ್ರಗಳಾದ ಬೆಳಗಾವಿ, ಹುಬ್ಬಳ್ಳಿ–ಧಾರವಾಡ, ಕಲಬುರಗಿ, ಮಂಗಳೂರು ಮತ್ತು ಮೈಸೂರಿನಲ್ಲಿ ತಲಾ 1,000 ಸಾಮರ್ಥ್ಯದ ಬಹುಮಹಡಿಯ ವಿದ್ಯಾರ್ಥಿನಿಲಯ ಸಮುಚ್ಚಯಗಳನ್ನು 250 ಕೋಟಿ ರೂ.ಗಳ ಮೊತ್ತದಲ್ಲಿ ನಿರ್ಮಿಸುವುದಾಗಿ ಘೋಷಿಸಿದೆ. ಎಸ್.ಸಿ./ಎಸ್.ಟಿ. ಮಹಿಳೆಯರಲ್ಲಿ ಉದ್ಯಮಶೀಲತೆಯನ್ನು ಉತ್ತೇಜಿಸಲು ಇಲಾಖೆಗಳ ಅಡಿಯಲ್ಲಿರುವ ಎಲ್ಲಾ ಅಭಿವೃದ್ಧಿ ನಿಗಮಗಳ ಸ್ವಯಂ ಉದ್ಯೋಗ ಮತ್ತು ಇತರೆ ಕಾರ್ಯಕ್ರಮಗಳಲ್ಲಿನ ಗುರಿಯಲ್ಲಿ ಎಸ್.ಸಿ./ಎಸ್.ಟಿ. ಮಹಿಳೆಯರಿಗೆ ಶೇ.25ರಷ್ಟನ್ನು ಕಾಯ್ದಿರಿಸಲಿದೆ. ಸಮಾಜ ಕಲ್ಯಾಣ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಗಳ ವ್ಯಾಪ್ತಿಗೆ ಬರುವ ವಿವಿಧ ಅಭಿವೃದ್ಧಿ ನಿಗಮಗಳಿಂದ ಒಟ್ಟಾರೆ 800 ಕೋಟಿ ರೂ.ಗಳ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುವುದೆಂದು ಮುಖ್ಯಮಂತ್ರಿಗಳು ಬಜೆಟ್‌ನಲ್ಲಿ ತಿಳಿಸಿದ್ದಾರೆ. ಹಾಗೆಯೇ, ಸಮಾನತೆಯ ಹರಿಕಾರ ಶ್ರೀ ನಾರಾಯಣ ಗುರುಗಳ ಸ್ಮರಣಾರ್ಥ ಉಡುಪಿ, ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ತಲಾ ಒಂದು ಶ್ರೀ ನಾರಾಯಣ ಗುರು ವಸತಿ ಶಾಲೆಯನ್ನು ಪ್ರಾರಂಭಿಸಲಾಗುವುದು ಎಂದೂ ತಿಳಿಸಿದ್ದಾರೆ.

## ವಲಯ 3: ಆರ್ಥಿಕ ಅಭಿವೃದ್ಧಿಗೆ ಉತ್ತೇಜನ

ಆರ್ಥಿಕ ಅಭಿವೃದ್ಧಿಗೆ ಉತ್ತೇಜನ ನೀಡುವ ವಿವಿಧ ಯೋಜನೆಗಳನ್ನು ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ. 2024ರೊಳಗೆ ದೇಶದ ಎಲ್ಲಾ ಗ್ರಾಮೀಣ ಮನೆಗಳಿಗೆ ನಳ ಸಂಪರ್ಕದ ಮೂಲಕ ಕುಡಿಯುವ ನೀರನ್ನು ಒದಗಿಸಲು ಆರಂಭವಾಗಿರುವ ಜಲಜೀವನ್ ಮಿಷನ್ ಯೋಜನೆಯ ಸಮರ್ಪಕ ಮುಂದುವರಿಕೆಗಾಗಿ ಸದರಿ ಬಜೆಟ್‌ನಲ್ಲಿ ರೂ. 7000 ಕೋಟಿ ಮೀಸಲಿರಿಸಲಾಗಿದೆ.

ಕಲ್ಯಾಣ ಕರ್ನಾಟಕದ ಅಮೃತ ಮಹೋತ್ಸವದ ಹಿನ್ನೆಲೆಯಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ 3,000 ಕೋಟಿ ರೂ.ಗಳ 'ಅಮೃತ ಆಯವ್ಯಯ'ವನ್ನು ಬಜೆಟ್‌ನಲ್ಲಿ ಘೋಷಿಸಿರುವುದು ಸ್ತುತ್ಯರ್ಹ. ಇದರಲ್ಲಿ ಶಿಕ್ಷಣ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಸಂಬಂಧಿಸಿದ ಯೋಜನೆಗಳಿಗೆ 1,500 ಕೋಟಿ ರೂ. ಹಾಗೂ ಮೈಕ್ರೋ ಯೋಜನೆಗಳಿಗೆ 1,500 ಕೋಟಿ ರೂ. ಸೇರಿದೆ.

ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿನ ಮೂಲಭೂತ ಸೌಕರ್ಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಮುಖ್ಯಮಂತ್ರಿಗಳ ಅಮೃತ್ ನಗರೋತ್ಥಾನ ಯೋಜನೆಯನ್ನು ಒಟ್ಟು 3,885 ಕೋಟಿ ರೂ.ಗಳ ಮೊತ್ತದಲ್ಲಿ 2022–23ನೇ ಸಾಲಿನಿಂದ 2024–25ನೇ ಸಾಲಿನ ಅವಧಿಯಲ್ಲಿ ಅನುಷ್ಠಾನ ಗೊಳಿಸಲಾಗುವುದು ಎಂದೂ ಬಜೆಟ್ ತಿಳಿಸಿದೆ.

ಕೇಂದ್ರ ಪುರಸ್ಕೃತ ಯೋಜನೆಯಾದ ಸ್ವಚ್ಛ ಭಾರತ ಮಿಷನ್–2.0 ಅನ್ನು ಮುಂದಿನ ಐದು ವರ್ಷಗಳ ಅವಧಿಯಲ್ಲಿ 2,245 ಕೋಟಿ ರೂ.ಗಳ ಕೇಂದ್ರದ ನೆರವಿನೊಂದಿಗೆ ಅನುಷ್ಠಾನ ಮಾಡುವ ಭರವಸೆಯನ್ನು ಮುಖ್ಯಮಂತ್ರಿಗಳು ನೀಡಿದ್ದಾರೆ.

ಹಾಗೆಯೇ, ಭಾರತ ಸರ್ಕಾರದ ನೆರವಿನೊಂದಿಗೆ 350 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಮಂಗಳೂರು ಬಂದರಿನ ವಿಸ್ತರಣೆ, ಲಕ್ಷದ್ವೀಪ ಕೇಂದ್ರಾಡಳಿತ ಪ್ರದೇಶಕ್ಕೆ ಮೀಸಲಾದ ಜೆಟ್ಟಿ ಮತ್ತು ಇತರ ಸಂಬಂಧಿತ ಮೂಲಸೌಕರ್ಯ ಸೌಲಭ್ಯಗಳನ್ನು ಸ್ಥಾಪಿಸಲು ಆದ್ಯತೆ. ಮೊಟ್ಟಮೊದಲ ಬಾರಿಗೆ ರಾಜ್ಯ ಮತ್ತು ಕೇಂದ್ರದ ಸಂಬಂಧಿತ ಸಂಸ್ಥೆಗಳ ಸಹಯೋಗದೊಂದಿಗೆ ಕಾರವಾರದಲ್ಲಿ ಜಲಸಾರಿಗೆ ಮತ್ತು ಮೀನುಗಾರಿಕೆ ತರಬೇತಿ ಸಂಸ್ಥೆ ಸ್ಥಾಪನೆ, ಕರಾವಳಿ ಭಾಗದಲ್ಲಿ ಕಡಲು ಕೊರೆತವನ್ನು ತಡೆಗಟ್ಟಲು ಹೊಸ ತಂತ್ರಜ್ಞಾನ, 'ನವಕರ್ನಾಟಕದಿಂದ ನವಭಾರತ ನಿರ್ಮಾಣ' ಧ್ಯೇಯದಡಿಯಲ್ಲಿ ಪರಿಸರ ಸ್ನೇಹಿ ನವನಗರಗಳ ನಿರ್ಮಾಣ ಬಜೆಟ್‌ನ ಇತರ ಪ್ರಸ್ತಾಪಗಳಾಗಿವೆ.

ಕಲಬುರಗಿ ಮತ್ತು ವಿಜಯಪುರದಲ್ಲಿ ಮೆಗಾ–ಟೆಕ್ಸ್‌ಟೈಲ್ ಪಾರ್ಕ್, ಬಳ್ಳಾರಿಯಲ್ಲಿ ಜೀನ್ಸ್ ಮತ್ತು ಉಡುಪುಗಳನ್ನು ಉತ್ತೇಜಿಸಲು ಟೆಕ್ಸ್‌ಟೈಲ್ ಪಾರ್ಕ್, ಧಾರವಾಡ ಜಿಲ್ಲೆಯ ನವಲಗುಂದದಲ್ಲಿ ಹಾಗೂ ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲ್ಲೂಕಿನಲ್ಲಿ ನೂತನ ಜವಳಿ ಪಾರ್ಕ್ ಸ್ಥಾಪಿಸುವ ಉದ್ದೇಶ ಸರ್ಕಾರದ ಮುಂದಿದ್ದು, ಇದರಿಂದ ಸಾಕಷ್ಟು ಉದ್ಯೋಗ ಸೃಷ್ಟಿಸುವ ಆಶಯವನ್ನು ಇರಿಸಿಕೊಳ್ಳಲಾಗಿದೆ.



Downloaded From: www.kpscvaani.com

**ಆರ್ಥಿಕ ಅಭಿವೃದ್ಧಿಗೆ ಉತ್ತೇಜನ ವಲಯದ ಪ್ರಮುಖ ಅಂಶಗಳು**

- ಜಲಜೀವನ್ ಅನುಷ್ಠಾನಕ್ಕೆ ರೂ. 7000 ಕೋಟಿ
- ಕಲ್ಯಾಣ ಕರ್ನಾಟಕ ಅಭಿವೃದ್ಧಿಗೆ 3,000 ಕೋಟಿ ರೂ.ಗಳ ಅನುದಾನ
- ಅಮೃತ್ ನಗರೋತ್ಥಾನ ಯೋಜನೆಗೆ 3,885 ಕೋಟಿ ರೂ.
- ಮಂಗಳೂರು ಬಂದರು ವಿಸ್ತರಣೆ, ಕಡಲ್ಕೊರೆತ ತಡೆಗೆ ಹೊಸ ಯೋಜನೆ
- ರಾಜ್ಯದ ವಿವಿಧೆಡೆ ಅತ್ಯಾಧುನಿಕ ಟೆಕ್ಸ್‌ಟೈಲ್ ಪಾರ್ಕ್‌ಗಳ ಸ್ಥಾಪನೆ

## ವಲಯ-4: ಬೆಂಗಳೂರು ಸಮಗ್ರ ಅಭಿವೃದ್ಧಿ

ರಾಜ್ಯದ ರಾಜಧಾನಿ ಬೆಂಗಳೂರು ಸಮಗ್ರ ಅಭಿವೃದ್ಧಿಗಾಗಿ ಪ್ರತ್ಯೇಕ ಯೋಜನೆಗಳನ್ನು ಕೈಗೆತ್ತಿಕೊಂಡಿರುವುದು ಈ ಬಾರಿಯ ಆಯವ್ಯಯದ ಒಂದು ವಿಶೇಷ ಉಪಕ್ರಮವಾಗಿದೆ. ಬೆಂಗಳೂರು ನಗರದಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು 6,000 ಕೋಟಿ ರೂ.ಗಳ ವೆಚ್ಚದಲ್ಲಿ 'ಅಮೃತ್ ನಗರೋತ್ಥಾನ' ಯೋಜನೆಯನ್ನು ಮುಂದಿನ 3 ವರ್ಷಗಳಲ್ಲಿ ಅನುಷ್ಠಾನಗೊಳಿಸಲಾಗುವುದೆಂದು ಬಜೆಟ್ ಸೂಚಿಸಿದೆ. ಈ ಯೋಜನೆಯಡಿಯಲ್ಲಿ ಪಾಲಿಕೆ ವ್ಯಾಪ್ತಿಯ ರಸ್ತೆ ಅಭಿವೃದ್ಧಿ, ಗ್ರೇಡ್ ಸೆಪರೇಟರ್, ಕೆರೆ ಅಭಿವೃದ್ಧಿ, ಬೃಹತ್ ನೀರುಗಾಲುವೆ ಅಭಿವೃದ್ಧಿ, ಉದ್ಯಾನವನಗಳ ಅಭಿವೃದ್ಧಿ, ಕಟ್ಟಡಗಳು, ಘನತ್ಯಾಜ್ಯ ನಿರ್ವಹಣೆ, ಬೀದಿ ದೀಪಗಳು, ಕೊಳಚೆ ಪ್ರದೇಶ ಅಭಿವೃದ್ಧಿ ಇತ್ಯಾದಿಗಳನ್ನು ಕೈಗೆತ್ತಿಕೊಳ್ಳುವುದಾಗಿ ಸರ್ಕಾರ ತಿಳಿಸಿದೆ.

ಬೆಂಗಳೂರು ಮೆಟ್ರೊ ಹಂತ-3 ಯೋಜನೆಯನ್ನು ಅಂದಾಜು 11,250 ಕೋಟಿ ರೂ.ಗಳ ವೆಚ್ಚದಲ್ಲಿ ಕೈಗೊಳ್ಳಲು ವಿಸ್ತೃತ ಯೋಜನಾ ವರದಿಯನ್ನು ಕೇಂದ್ರ ಸರ್ಕಾರದ ಅನುಮೋದನೆಗೆ ಸಲ್ಲಿಸಲು ಪ್ರಸ್ತಾಪಿಸಿದ್ದು, ಇದು ಹೆಬ್ಬಾಳದಿಂದ ಜೆ.ಪಿ. ನಗರದವರೆಗೆ 32 ಕಿ.ಮೀ.ಗಳ ಹೊರವರ್ತುಲ ರಸ್ತೆ ಮಾರ್ಗ ಹಾಗೂ ಹೊಸಹಳ್ಳಿಯಿಂದ ಕಡಬಗೆರೆವರೆಗೆ 13 ಕಿ.ಮೀ.ಗಳ ಮಾರ್ಗವನ್ನು ಒಳಗೊಂಡಿದೆ.

ಬೆಂಗಳೂರಿಗೆ ಮಳೆಗಾಲ ಒಂದು ದೊಡ್ಡ ಸವಾಲು. ಪ್ರತೀ ಮಳೆಗಾಲದಲ್ಲೂ ರಸ್ತೆಗಳು ನೀರಿನಿಂದ ಮುಚ್ಚಿ ಸಂಚಾರಕ್ಕೆ ತೀವ್ರ ಅಡಚಣೆಯಾಗುವುದು, ಅಂಗಡಿ–ಮುಂಗಟ್ಟುಗಳು ಹಾಗೂ ವಸತಿಪ್ರದೇಶಗಳು ಹಾನಿಗೀಡಾಗುವುದು ಸಾಮಾನ್ಯ. ಇಂತಹ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲೂ ಆಯವ್ಯಯದಲ್ಲಿ ಆಶಾದಾಯಕ ಯೋಜನೆಗಳನ್ನು ಪ್ರಸ್ತಾಪಿಸಲಾಗಿದೆ. ಬೆಂಗಳೂರಿನ ರಾಜಕಾಲುವೆಗಳ ಅಭಿವೃದ್ಧಿಗಾಗಿ 1,500 ಕೋಟಿ ರೂ.ಗಳ ಮೊತ್ತದಲ್ಲಿ ಯೋಜನೆ ರೂಪಿಸುವುದಾಗಿ ಮುಖ್ಯಮಂತ್ರಿಗಳು ತಿಳಿಸಿದ್ದಾರೆ.

ದಿನೇ ದಿನೇ ಹೆಚ್ಚುತ್ತಿರುವ ಬೆಂಗಳೂರಿನ ಜನಸಂಖ್ಯೆಗೆ ಅನುಗುಣವಾಗಿ ನಗರದ ನಾಲ್ಕು ಭಾಗಗಳಲ್ಲಿ 500 ಹಾಸಿಗೆ ಸಾಮರ್ಥ್ಯವುಳ್ಳ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳನ್ನು ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ ನಿರ್ಮಾಣ ಮಾಡುವುದು, ಬೆಂಗಳೂರಿನ ಆಯ್ದ ಸರ್ಕಾರಿ ಶಾಲೆಗಳಲ್ಲಿ ಅಗತ್ಯ ಮೂಲಸೌಕರ್ಯ ಹಾಗೂ ಗುಣಮಟ್ಟದ ಶಿಕ್ಷಣ ಒದಗಿಸಲು ಪ್ರತ್ಯೇಕ ಯೋಜನೆ, 89 ಕೋಟಿ ರೂ.ಗಳ ವೆಚ್ಚದಲ್ಲಿ ಬೆಂಗಳೂರಿನ ಆಯ್ದ 20 ಶಾಲೆಗಳನ್ನು ಬೆಂಗಳೂರು ಪಬ್ಲಿಕ್ ಶಾಲೆಗಳಾಗಿ ಅಭಿವೃದ್ಧಿಪಡಿಸುವುದು ಸೇರಿದಂತೆ ಬೆಂಗಳೂರನ್ನೇ ಗುರಿಯಾಗಿಸಿಕೊಂಡ ಅನೇಕ ಯೋಜನೆಗಳಿವೆ.

## ವಲಯ-5: ಸಂಸ್ಕೃತಿ, ಪರಂಪರೆ ಮತ್ತು ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ

ಹಾವೇರಿಯಲ್ಲಿ ನಡೆಯಲಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕಾಗಿ ಬಜೆಟ್‌ನಲ್ಲಿ 20 ಕೋಟಿ ರೂ.ಗಳನ್ನು ಒದಗಿಸಲಾಗಿದೆ. ಯಕ್ಷಗಾನ ಕಲೆಯ ಸಮಗ್ರ ಆಯಾಮಗಳ ಅಧ್ಯಯನಕ್ಕಾಗಿ ರಾಜ್ಯಮಟ್ಟದ ಪ್ರತ್ಯೇಕ ಸಮ್ಮೇಳನವೊಂದನ್ನು ಹಮ್ಮಿಕೊಳ್ಳಲು ತೀರ್ಮಾನಿಸಿರುವುದು ಒಂದು ವಿಶಿಷ್ಟ ಉಪಕ್ರಮವಾಗಿದೆ. ಇದು ಯಕ್ಷಗಾನ ಕಲಾವಿದರು, ವಿದ್ವಾಂಸರು ಹಾಗೂ ಸಂಶೋಧಕರ ಬಹುಕಾಲದ ಬೇಡಿಕೆಯಾಗಿತ್ತು.

ಕರ್ನಾಟಕದ ಹೆಸರಾಂತ ಸಾಹಿತಿಗಳಾದ ಡಾ.ಸಿದ್ಧಲಿಂಗಯ್ಯ, ಡಾ. ಎಂ. ಚಿದಾನಂದಮೂರ್ತಿ, ಡಾ. ಚಂದ್ರಶೇಖರ ಪಾಟೀಲ್, ಶ್ರೀ ಚೆನ್ನವೀರ ಕಣವಿಯವರ ಅಮೂಲ್ಯ ಸಾಹಿತ್ಯಕೃತಿಗಳನ್ನು ಬೆಂಬಲಿಸಲು ವಿಶೇಷ ಯೋಜನೆ ರೂಪಿಸಲಾಗುವುದೆಂದು ಮುಖ್ಯಮಂತ್ರಿಗಳು ಘೋಷಿಸಿದ್ದಾರೆ. ಮಂಗಳೂರು ವಿಶ್ವವಿದ್ಯಾಲಯದಲ್ಲಿ ಅರೆಭಾಷೆ ಸಂಶೋಧನಾ ಕೇಂದ್ರದ



ನಮ್ಮ ಸರ್ಕಾರವು ಸಂವೇದನಾಶೀಲ ಸರ್ಕಾರವಾಗಿರುವ ಕಾರಣ ಸರ್ವರ ಅಭಿವೃದ್ಧಿಯನ್ನು ಒಳಗೊಂಡಂತಹ ಬಜೆಟ್ ಅನ್ನು ಮಂಡಿಸಲಾಗಿದೆ. ರಾಜ್ಯದಲ್ಲಿನ ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆ ನಿವಾರಣೆಗೆ ಪೂರಕವಾಗುವಂತೆ ವಾಸ್ತವಿಕ ನೆಲೆಗಟ್ಟಿನಲ್ಲಿ ಬಜೆಟ್ ಅನ್ನು ರೂಪಿಸಲಾಗಿದೆ. ಯಾವ ಸರ್ಕಾರವು ಪರಿಸರವನ್ನು ಕಾಪಾಡುವ ನಿಟ್ಟಿನಲ್ಲಿ ಬಜೆಟ್ ನೀಡಿರಲಿಲ್ಲ. ನೈಸರ್ಗಿಕ ಅಸಮತೋಲನ ನಿವಾರಣೆಗಾಗಿ ಇದೇ ಮೊದಲ ಬಾರಿಗೆ ನಮ್ಮ ಸರ್ಕಾರ ಪರಿಸರ ಬಜೆಟ್ ಅನ್ನು ಸಿದ್ಧಪಡಿಸಿದೆಯಲ್ಲದೆ, ಬಜೆಟ್ ಅನ್ನು ಸಂಪೂರ್ಣವಾಗಿ ವಾಸ್ತವಿಕ ನೆಲೆಗಟ್ಟಿನಲ್ಲಿ ರೂಪಿಸಲಾಗಿದೆ.

**–ಬಸವರಾಜ ಎಸ್ ಬೊಮ್ಮಾಯಿ**, ಮುಖ್ಯಮಂತ್ರಿಗಳು



Downloaded From: www.kpscvaani.com



ಸ್ಥಾಪನೆ. ಗೋವಾದಲ್ಲಿ ಕನ್ನಡ ಭವನ ಸ್ಥಾಪನೆ. ಕಾಸರಗೋಡಿನಲ್ಲಿ ಕಯ್ಯಾರ ಕಿಂಞಣ್ಣ ರೈ ಅವರ ಹೆಸರಿನಲ್ಲಿ, ಅಕ್ಕಲಕೋಟೆಯಲ್ಲಿ ಜಯದೇವಿತಾಯಿ ಲಿಗಾಡೆ ಅವರ ಹೆಸರಿನಲ್ಲಿ ಭವನಗಳನ್ನು ನಿರ್ಮಿಸಲು ಉದ್ದೇಶಿಸಿರುವುದು ಸ್ತುತ್ಯರ್ಹವಾಗಿದೆ

ಖೇಲೋ ಇಂಡಿಯಾ ಯೂನಿವರ್ಸಿಟಿ ಗೇಮ್ಸ್ ಅನ್ನು ಪ್ರಸಕ್ತ ಸಾಲಿನಲ್ಲಿ ಬೆಂಗಳೂರಿನಲ್ಲಿ ಆಯೋಜಿಸುವುದಾಗಿಯೂ, ಇದರಲ್ಲಿ 8,000ಕ್ಕೂ ಅಧಿಕ ಕ್ರೀಡಾಪಟುಗಳಿಗೆ ಅವಕಾಶ ನೀಡುವುದಾಗಿಯೂ ಘೋಷಿಸಿರುವುದು ಗಮನಾರ್ಹ. 2024ರ ಒಲಿಂಪಿಕ್ಸ್ ಮತ್ತು ಪ್ಯಾರಾಲಂಪಿಕ್ಸ್‌ಗೆ ರಾಜ್ಯದಿಂದ ಕನಿಷ್ಠ 75 ಕ್ರೀಡಾಪಟುಗಳನ್ನು ಸಿದ್ಧಪಡಿಸಲು 'ಅಮೃತ ಕ್ರೀಡಾ ದತ್ತು ಯೋಜನೆ' ರೂಪಿಸಿರುವುದು, 50 ವರ್ಷ ಮೇಲ್ಪಟ್ಟ ಕಷ್ಟದ ಪರಿಸ್ಥಿತಿಯಲ್ಲಿರುವ ಕುಸ್ತಿಪಟುಗಳಿಗೆ ನೀಡುತ್ತಿರುವ ಮಾಸಾಶನವನ್ನು 1,000 ರೂ.ನಂತೆ ಹೆಚ್ಚಿಸಿರುವುದು ಅಭಿನಂದನೀಯವಾಗಿದೆ.

ಪ್ರವಾಸೋದ್ಯಮವನ್ನು ಉತ್ತೇಜಿಸುವ ನಿಟ್ಟಿನಲ್ಲಿ ಹಂಪಿ–ಬಾದಾಮಿ–ಐಹೊಳೆ–ಪಟ್ಟದಕಲ್ಲು–ವಿಜಯಪುರ ಪ್ರವಾಸಿ ವೃತ್ತವನ್ನು ಮತ್ತು ಮೈಸೂರು–ಶ್ರೀರಂಗಪಟ್ಟಣ–ಹಾಸನ–ಬೇಲೂರು–ಹಳೇಬೀಡು ಪ್ರವಾಸಿ ವೃತ್ತವನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿ ಪಡಿಸಲು ಉದ್ದೇಶಿಸಲಾಗಿದೆ.

ಕಳೆದ ಐದು ವರ್ಷಗಳ ಅವಧಿಯಲ್ಲಿ ರಾಜ್ಯದಲ್ಲಿ ಅರಣ್ಯ ಜೀವಿಶಾಸ್ತ್ರ ವ್ಯವಸ್ಥೆಯ ಮೇಲೆ ಪ್ರಾಕೃತಿಕ ಮತ್ತು ಮಾನವ ನಿರ್ಮಿತ ಒತ್ತಡಗಳಿಂದ ಉಂಟಾದ ದುಷ್ಪರಿಣಾಮವನ್ನು ಸರಿದೂಗಿಸುವ ಉದ್ದೇಶಕ್ಕಾಗಿ ಹಸಿರು ಆಯವ್ಯಯವನ್ನು ರೂಪಿಸಿ, 100 ಕೋಟಿ ರೂ. ಅನುದಾನವನ್ನು ಹಂಚಿಕೆ ಮಾಡಲಾಗುವುದು ಎಂದೂ ಬಜೆಟ್ ತಿಳಿಸಿದೆ.  ಕರಾವಳಿ ಭಾಗದ ಜಲಮೂಲಗಳನ್ನು ಕಲುಷಿತಗೊಳಿಸುತ್ತಿರುವ ಪ್ಲಾಸ್ಟಿಕ್ ಮಾಲಿನ್ಯವನ್ನು ನಿರ್ವಹಿಸಲು ವಿಶ್ವಬ್ಯಾಂಕ್ ನೆರವಿನೊಂದಿಗೆ ವಿನೂತನವಾದ 'ಬ್ಲೂ–ಪ್ಲಾಸ್ಟಿಕ್ ನಿರ್ವಹಣೆ ಯೋಜನೆ' ಯನ್ನು ಮುಂದಿನ 5 ವರ್ಷಗಳ ಅವಧಿಗೆ ಒಟ್ಟು 840 ಕೋಟಿ ರೂ.ಗಳ ವೆಚ್ಚದಲ್ಲಿ ಜಾರಿಗೆ ತರುವುದಾಗಿ ಬಜೆಟ್ ಘೋಷಿಸಿದೆ. ಇದು ದೇಶದಲ್ಲೇ ಪ್ರಥಮವೆನಿಸುವ ಪ್ರಯತ್ನವಾಗಿದೆ.

## ವಲಯ-6: ಆಡಳಿತ ಸುಧಾರಣೆ ಮತ್ತು ಸಾರ್ವಜನಿಕ ಸೇವೆ

ಅವಿವಾಹಿತ, ವಿಚ್ಛೇದಿತ ಮಹಿಳೆಯರಿಗೆ ಹಾಗೂ ಲಿಂಗತ್ವ ಅಲ್ಪಸಂಖ್ಯಾತರಿಗೆ ನೀಡಲಾಗುತ್ತಿರುವ ಮಾಸಿಕ ಪಿಂಚಣಿ ಮೊತ್ತವನ್ನು 600 ರೂ.ಗಳಿಂದ 800 ರೂ.ಗಳಿಗೆ ಹೆಚ್ಚಿಸಲಾಗುವುದೆಂದು ಬಜೆಟ್‌ನಲ್ಲಿ ತಿಳಿಸಲಾಗಿದ್ದು, ಇದರಿಂದ 1.32 ಲಕ್ಷ ಫಲಾನುಭವಿಗಳಿಗೆ ಅನುಕೂಲವಾಗಲಿದೆ.

ಆಸಿಡ್ ದಾಳಿಗೊಳಗಾದ ಮಹಿಳೆಯರಿಗೆ ಪ್ರಸ್ತುತ ನೀಡಲಾಗುತ್ತಿರುವ ಮಾಸಿಕ ಪಿಂಚಣಿ ಮೊತ್ತವನ್ನು 3,000 ರೂ.ಗಳಿಂದ 10,000 ರೂ.ಗಳಿಗೆ ಹೆಚ್ಚಿಸುವುದಲ್ಲದೇ, ಆಸಿಡ್ ದಾಳಿಗೊಳಗಾದ ಮಹಿಳೆಯರಿಗಾಗಿ ಹೊಸ ಕಾರ್ಯಕ್ರಮವನ್ನು ರೂಪಿಸಲಾಗುವುದು ಎಂದು ಬಜೆಟ್ ತಿಳಿಸಿದೆ.

ಇ–ಆಡಳಿತದ ಮೂಲಕ ಸಾರ್ವಜನಿಕ ಸೇವೆಗಳ ವಿತರಣೆಯಲ್ಲಿ ಉತ್ತೇಜನ, ಐಟಿ ನೀತಿಗಳ ಸುಧಾರಣೆ, ಸಾಮರ್ಥ್ಯ ಹೆಚ್ಚಳ, ಬಿಗ್ ಡೇಟಾ ಮತ್ತು ಸೈಬರ್ ಸೆಕ್ಯುರಿಟಿ ಬಲವರ್ಧನೆ ಮಾಡಲು ಐಐಐಟಿ–ಬೆಂಗಳೂರು ಜೊತೆಗೆ ಪಾಲುದಾರಿಕೆಯಲ್ಲಿ ಸೆಂಟರ್ ಫಾರ್ ಟೆಕ್ನಾಲಜಿ ರಿಸರ್ಚ್ ಇನ್ ಡಿಜಿಟಲ್ ಗವರ್ನೆನ್ಸ್ ಅನ್ನು ಸ್ಥಾಪಿಸಲು ಸರ್ಕಾರವು ನಿರ್ಧರಿಸಿರುವುದು ಹೊಸ ಕಾಲದ ಅವಶ್ಯಕತೆಗಳಿಗೆ ಅದರ ಪ್ರತಿಸ್ಪಂದನೆಯನ್ನು ಸೂಚಿಸುತ್ತದೆ.

ಪತ್ರಿಕೋದ್ಯಮವನ್ನು ಉತ್ತೇಜಿಸಲು ಕೆಲವು ವಿಶೇಷ ಯೋಜನೆಗಳನ್ನು ಕೈಗೆತ್ತಿಕೊಂಡಿರುವುದು ಈ ಬಾರಿಯ ಬಜೆಟ್‌ನ ಇನ್ನೊಂದು ವಿಶೇಷವಾಗಿದೆ. ನಿಯಮಿತವಾಗಿ 8 ಪುಟಗಳಲ್ಲಿ ಪ್ರಕಟಗೊಳ್ಳುವ ಪ್ರಾದೇಶಿಕ ಪತ್ರಿಕೆಗಳಿಗೆ ಪ್ರೋತ್ಸಾಹ, 20 ಸಾವಿರಕ್ಕೂ ಹೆಚ್ಚು ಪ್ರಸಾರ ಹೊಂದಿದ ವರ್ಣ ಪುಟಗಳಲ್ಲಿ ಪ್ರಕಟಗೊಳ್ಳುವ ಪ್ರಾದೇಶಿಕ ಪತ್ರಿಕೆಗಳನ್ನು ಸಧೃಡಗೊಳಿಸಲು ಹೊಸ ಯೋಜನೆಯನ್ನು ರೂಪಿಸುವುದು, ಹಿಂದುಳಿದ ವರ್ಗಗಳ ಮಾನ್ಯತೆ ಪಡೆದ ಪತ್ರಕರ್ತರಿಗೆ ಮಾಧ್ಯಮ ಕಿಟ್ ಹಾಗೂ ಹಿಂದುಳಿದ ವರ್ಗಗಳ ಒಡೆತನದ ಪತ್ರಿಕೆಗಳಿಗೆ ಪ್ರತೀ ತಿಂಗಳು ಎರಡು ಪುಟ ಜಾಹೀರಾತು ನೀಡುವುದು, ಕನ್ನಡ ಚಲನಚಿತ್ರಗಳಿಗೆ ನೀಡುತ್ತಿರುವ ಸಹಾಯಧನವನ್ನು 200 ಚಲನಚಿತ್ರಗಳಿಗೆ ಹೆಚ್ಚಿಸುವುದು ಈ ನಿಟ್ಟಿನಲ್ಲಿ ಕೆಲವು ಪ್ರಮುಖ ಹೆಜ್ಜೆಗಳಾಗಿವೆ.

**"ಇರುವೆಲ್ಲವನು ಎಲ್ಲಾ ಜನಕೆ ತೆರವಾಗಿಸುವ/ ಸಮಬಗೆಯ ಸಮಸುಖದ ಸಮದುಃಖದ/ ಸಾಮರಸ್ಯದ ಸಾಮಗಾನಲಹರಿಯ ಮೇಲೆ/ ತೇಲಿ ಬರಲಿದೆ ನೋಡು, ನಮ್ಮ ನಾಡು!"** ಎಂಬ ಕವಿ ಎಂ. ಗೋಪಾಲಕೃಷ್ಣ ಅಡಿಗರ ಸಾಲುಗಳನ್ನು ತಮ್ಮ ಬಜೆಟ್ ಭಾಷಣದ ಆರಂಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಉಲ್ಲೇಖಿಸಿದ್ದರು. ಅವರು ಮಂಡಿಸಿರುವ ಆಯವ್ಯಯದಲ್ಲೂ ಈ ಆಶಯ ಸ್ಪಷ್ಟವಾಗಿ ವ್ಯಕ್ತವಾಗಿರುವುದು ಅದರ ಸಮಗ್ರ ಅವಲೋಕನದಿಂದ ವೇದ್ಯವಾಗುತ್ತದೆ. ಬಜೆಟ್‌ನಲ್ಲಿ ಪ್ರಸ್ತಾಪಿಸಿರುವ ಯೋಜನೆಗಳು ಪರಿಣಾಮಕಾರಿಯಾಗಿ ಹಾಗೂ ಪಾರದರ್ಶಕವಾಗಿ ಜಾರಿಯಾದರೆ ಅದು ನೈಜ ಅಭಿವೃದ್ಧಿಗೆ ಮುನ್ನುಡಿ ಬರೆಯುವುದರಲ್ಲಿ ಸಂಶಯವಿಲ್ಲ. ■



Downloaded From: www.kpscvaani.com



# ಸಾವಿರಾರು ಜೀವಗಳ ಉಳಿಸಿದ ಆಪರೇಷನ್ ಗಂಗಾ

ಡಿ. ಪಿ. ಮುರಳೀಧರ್



"ಕೊಡಗಿನ ತಲಕಾವೇರಿಯಲ್ಲಿ ಹುಲಿಗಳನ್ನು ಬೇಟೆಯಾಡಿ ಕೊಂದರೆ, ಬೆಂಗಳೂರು ಮಹಾ ಜನತೆಗೆ ಕುಡಿಯಲು ನೀರು ದೊರೆಯುವುದಿಲ್ಲ ! "

ಸರಿ ಸುಮಾರು ನಲವತ್ತು ವರ್ಷಗಳ ಹಿಂದೆ, ಬೆಂಗಳೂರು ಆಕಾಶವಾಣಿಯಲ್ಲಿ ಬಿತ್ತರಗೊಂಡ ಪರಿಸರ ಕುರಿತ ಸರಣಿ ಕಾರ್ಯಕ್ರಮದಲ್ಲಿ ಹೊರಹೊಮ್ಮಿದ ರೋಚಕ ಸಂಗತಿ ಇದು.

" ಅದು ಹೇಗೆ ? " ಎಂಬ ಶ್ರೋತೃಗಳ ಸಹಜವಾದ ಪ್ರಶ್ನೆಗೆ ಆ ಕಾರ್ಯಕ್ರಮದಲ್ಲಿ ದೊರೆತ ಸ್ವಾರಸ್ಯಕರ ಉತ್ತರ ಹೀಗಿದೆ :

ತಲಕಾವೇರಿಯಲ್ಲಿ ಹುಲಿಗಳನ್ನು ಕೊಂದರೆ, ಆ ಪ್ರದೇಶದಲ್ಲಿ ಜಿಂಕೆಗಳ ಸಂಖ್ಯೆ ಹೆಚ್ಚಾಗುತ್ತದೆ. ಜಿಂಕೆಗಳ ಸಂಖ್ಯೆ ಹೆಚ್ಚಾದರೆ, ಜಿಂಕೆಗಳು ಆ ಪ್ರದೇಶದಲ್ಲಿ ಯಥೇಚ್ಛವಾಗಿ ಹುಲ್ಲು ತಿನ್ನುವುದರಿಂದ ಭೂಮಿಯ ಮೇಲಿನ ಹಸಿರು ಪದರವೇ ಮಾಯವಾಗುತ್ತದೆ. ಹಸಿರು ಪದರ ಕಣ್ಮರೆಯಾಗುವುದರಿಂದ ಇಳೆಗೆ ಮಳೆ ಬಿದ್ದಾಗ, ಮಳೆಯ ನೀರನ್ನು ಭೂಮಿ ಹೀರಿಕೊಳ್ಳಲು ಸಾಧ್ಯವಾಗುವುದಿಲ್ಲ.



Downloaded From: www.kpscvaani.com



ಭೂಮಿಯಲ್ಲಿ ನೀರಿನ ಪ್ರಮಾಣ ತೀವ್ರವಾಗಿ ಕುಸಿದು ಅಂತರ್ಜಲದ ಪ್ರಮಾಣ ಕಡಿಮೆಯಾಗುತ್ತದೆ. ದಕ್ಷಿಣದ ಗಂಗೆ ಕಾವೇರಿ ಮಾತೆಯ ಜನ್ಮಸ್ಥಳ ತಲಕಾವೇರಿಯಲ್ಲಿಯೇ ನೀರು ಇಲ್ಲದಾಗ, ಮಂಡ್ಯ ಜಿಲ್ಲೆಯ ಕೃಷ್ಣರಾಜಸಾಗರ ಅಣೆಕಟ್ಟೆಗೆ ನೀರು ಬರುವುದೇ? ಕೃಷ್ಣರಾಜಸಾಗರ ಜಲಾಶಯದಲ್ಲಿ ನೀರು ಸಂಗ್ರಹಣೆಯಾಗದಿದ್ದಲ್ಲಿ, ರಾಜ್ಯದ ರಾಜಧಾನಿಗೆ ನೀರು ಸರಬರಾಜು ಮಾಡಲು ಸಾಧ್ಯವೇ ? ಕಾವೇರಿ ನದಿ ನೀರು ಪೂರೈಕೆಯಾಗದೆ, ಬೆಂಗಳೂರಿನ ಮಹಾ ಜನತೆ ನೀರು ಕುಡಿಯುವುದು ಹೇಗೆ ?

**ವಿಶ್ವಕ್ಕೆ ಪರಿಚಯವಾದ ಭಾರತದ ಶಕ್ತಿ-ಸಾಮರ್ಥ್ಯ !**

ಕ್ರೀಡೆಗಳಲ್ಲಿ, ಪರೀಕ್ಷೆಗಳಲ್ಲಿ ಹಾಗೂ ಚುನಾವಣೆಗಳಲ್ಲಿ ಗೆದ್ದವರು ಬೀಗುತ್ತಾರೆ. ಸೋತವರು ಬಾಗುತ್ತಾರೆ. ಆದರೆ, ಯದ್ಧಗಳಲ್ಲಿ ಹಾಗಲ್ಲ ಸೋತವರು ಮಾತ್ರವಲ್ಲ, ಗೆದ್ದವರೂ ಬಾಗುತ್ತಾರೆ. ನೆಲ ಕಚ್ಚುತ್ತಾರೆ. ಹೌದು ! ಯುದ್ಧಗಳಲ್ಲಿ ಗೆಲುವು ವಿಜೃಂಭಿಸುವುದಿಲ್ಲ. ಯುದ್ಧಗಳಲ್ಲಿ ನೆತ್ತರು ಹರಿಯುತ್ತದೆ. ಸಾವು-ನೋವು ಮೆರೆಯುತ್ತವೆ. ಎಲ್ಲೋ ಯುದ್ಧ ನಡೆದರೂ, ಮತ್ತೆಲ್ಲೋ ಅದರ ಕರಾಳ ಛಾಯೆ ಮೂಡುತ್ತದೆ.

ಎತ್ತಣ ಮಾಮರ ? ಎತ್ತಣ ಕೋಗಿಲೆ ? ಎಂಬ ನಾಣ್ಣುಡಿಯಂತೆ ಕೆಲವೊಮ್ಮೆ ಒಂದಕ್ಕೊಂದು ಇರುವ ಸಂಪರ್ಕಗಳು ಹಾಗೂ ಸಂಬಂಧಗಳು ಗೊತ್ತಾಗುವುದೇ ಇಲ್ಲ. ಕೆಲವು ಘಟನೆಗಳು ಘಟಿಸಿದ ನಂತರವೇ ಅದರ ಸಾಧಕ-ಬಾಧಕಗಳು ಗೋಚರಿಸುತ್ತವೆ.

ರಷ್ಯಾ ಮತ್ತು ಉಕ್ರೇನ್ ದೇಶಗಳ ನಡುವೆ ಫೆಬ್ರವರಿ 24 ರಂದು ಬೆಳಿಗ್ಗೆ 8-12 ಗಂಟೆಗೆ ಯುದ್ಧ ಪ್ರಾರಂಭವಾಯಿತು ಎಂಬ ಸುದ್ದಿ ಹೊರಬಿದ್ದಾಗ, ಈ ಯುದ್ಧಕ್ಕೂ ನಮ್ಮ ಭಾರತಕ್ಕೂ, ಅದರಲ್ಲೂ ನಮ್ಮ ಕರ್ನಾಟಕಕ್ಕೂ, ಏನು ಸಂಬಂಧ ? ಎಂದು ಅಲಕ್ಷಿಸಿ, ನಿರ್ಲಕ್ಷಿಸಿದವರೇ ಹೆಚ್ಚು. ಈ ಯುದ್ಧದಿಂದ ನಮ್ಮ ದೇಶ ಮತ್ತು ನಮ್ಮ ರಾಜ್ಯ ಕೆಲ ಕಹಿ ಘಟನೆಗಳಿಗೆ ಸಾಕ್ಷಿಯಾದದ್ದು ನಿಜ. ಆದರೆ, ಇದೀಗ ಈ ಯುದ್ಧದ ಪರಿಣಾಮ ಭಾರತದ ಶಕ್ತಿ-ಸಾಮರ್ಥ್ಯ ಏನೆಂಬುದು ಇಡೀ ವಿಶ್ವಕ್ಕೇ ಪರಿಚಯವಾಗಿದೆ ಎಂಬುದಂತೂ ಸತ್ಯ !

**ಅದೃಷ್ಟದ ದಿನ**

ಉಕ್ರೇನ್ ಮೇಲೆ ರಷ್ಯಾ ದಾಳಿ ನಡೆಸುವ ಸಾಧ್ಯತೆಗಳಿವೆ ಎಂಬುದನ್ನು ಮನಗಂಡ ಭಾರತದ ರಾಜತಾಂತ್ರಿಕ ಕಚೇರಿ ತನ್ನೆಲ್ಲಾ ನಾಗರೀಕರಿಗೆ ತಾಯ್ನಾಡಿಗೆ ಮರಳುವಂತೆ ಫೆಬ್ರವರಿ 15 ರಂದು ಸೂಚನೆ ನೀಡಿತು. ಆ ಸಲಹೆಯನ್ನು ಸ್ವೀಕರಿಸಿದ ಹಲವರು ವಿಮಾನಗಳಲ್ಲಿ ತಮ್ಮ ಆಸನಗಳನ್ನು ಕಾಯ್ದಿರಿಸಿದರು. ಭಾರತಕ್ಕೆ ಮರು ಪ್ರಯಾಣ ಬೆಳೆಸಿದರು.

ಆ ದಿನವನ್ನು ( ದಿನಾಂಕ : 22-02-2022 ) ಅದೃಷ್ಟದ ದಿನ ಎಂದೇ ಬಣ್ಣಿಸಬಹುದು. ಉಕ್ರೇನ್‌ನಿಂದ ಭಾರತಕ್ಕೆ ಸುಮಾರು ಎರಡು ನೂರು ವಿದ್ಯಾರ್ಥಿಗಳು ಆಗಮಿಸಿದರು. ಅದರಲ್ಲಿ ನವದೆಹಲಿಯ ಮಾರ್ಗವಾಗಿ ಬೆಂಗಳೂರಿಗೆ ಬಂದ ಹತ್ತಾರು ಕನ್ನಡಿಗರಲ್ಲಿ ರಾಜ್ಯ ರಾಜಧಾನಿಯ ಹೊರ ವಲಯದ ಕುಂಬಳಗೋಡು ಹೋಬಳಿಯ ಗೇರುಪಾಳ್ಯದ ನಿವಾಸಿ ಜಿ.ಎಸ್ ಚೈತ್ರಾ ಅವರೂ ಒಬ್ಬರು.

ಒಂದು ದಿನದ ನಂತರ, ಅಂದರೆ ಫೆಬ್ರವರಿ 24 ರಂದು ವಿಮಾನದ ಟಿಕೇಟ್ ಕಾಯ್ದಿರಿಸಿದವರಿಗೆ ಎಲ್ಲಿಲ್ಲದ ಆತಂಕ. ಏಕೆಂದರೆ, ಯುಕ್ರೇನ್ ಮೇಲೆ ರಷ್ಯಾದ ದಾಳಿ ಪ್ರಾರಂಭವಾಯಿತು. ಗಗನದಲ್ಲಿ ಯುದ್ಧ ವಿಮಾನಗಳು ಹಾರಾಡಿದವು. ನಾಗರೀಕ ವಿಮಾನಗಳು ನಿಂತಲ್ಲೇ ನಿಂತವು. ಎಲ್ಲವೂ ಅಯೋಮಯ ಸ್ಥಿತಿಗೆ ತಲುಪಿದವು.

**ಆಪರೇಷನ್ ಗಂಗಾ !.**

ಯುಕ್ರೇನ್‌ನಲ್ಲಿ ಭಾರತೀಯರ ಆತಂಕವನ್ನು ಮನಗಂಡ ಭಾರತದ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಒಂದೆಡೆ ಉಕ್ರೇನ್‌ನ ಅಧ್ಯಕ್ಷ ವ್ಲಾಡಿಮೀರ್ ಝೆಲೆನ್ಸ್ಕಿ ಮತ್ತೊಂದೆಡೆ ರಷ್ಯಾದ ಅಧ್ಯಕ್ಷ ವ್ಲಾಡಿಮೀರ್ ಪುಟಿನ್ ಅವರೊಡನೆ ದೂರವಾಣಿ ಮೂಲಕ ಭಾರತೀಯ ನಾಗರೀಕರ ಸುರಕ್ಷತೆ ಕುರಿತು ಮಾತುಕತೆ ನಡೆಸಿದರು. ಉಕ್ರೇನ್‌ನಲ್ಲಿದ್ದ ಭಾರತದ ನಾಗರೀಕರನ್ನು ಫೆಬ್ರವರಿ 26 ರಿಂದಲೇ ಭಾರತಕ್ಕೆ ಕರೆತರುವ ಪ್ರಾಮಾಣಿಕ ಪ್ರಯತ್ನಕ್ಕೆ ಚಾಲನೆ ನೀಡಿದರು. ಉಕ್ರೇನ್‌ನಿಂದ ರೊಮೇನಿಯಾದ ರಾಜಧಾನಿ ಬುಕಾರೆಸ್ಟ್ ಮೂಲಕ 249 ಭಾರತೀಯರು ಫೆಬ್ರವರಿ 27 ರಂದು ಭಾರತಕ್ಕೆ ಬಂದಿಳಿದರು. ಈ ವಿಶೇಷ ಕಾರ್ಯಾಚರಣೆಯೇ ಆಪರೇಷನ್ ಗಂಗಾ !.

ಉಕ್ರೇನ್‌ನಲ್ಲಿನ ಭಾರತೀಯರನ್ನು ಸುರಕ್ಷಿತವಾಗಿ ತಾಯ್ನಾಡಿಗೆ ಕರೆತರಲು, ಉಕ್ರೇನ್ ಗಡಿಯಲ್ಲಿ ಸುತ್ತುವರೆದಿರುವ ರೊಮೇನಿಯಾ, ಪೋಲ್ಯಾಂಡ್, ಹಂಗೇರಿ ಮತ್ತು ಸ್ಲೋವ್ಯಾಕಿಯಾ ದೇಶಗಳಲ್ಲಿನ ಭಾರತೀಯ ರಾಜತಾಂತ್ರಿಕ ಕಚೇರಿಗಳಿಗೆ ಸೂಚನೆ ನೀಡಿದ ಪ್ರಧಾನ ಮಂತ್ರಿಯವರು, ಉಕ್ರೇನ್‌ನಲ್ಲಿ ಸಂಕಷ್ಟದಲ್ಲಿ ಸಿಲುಕಿಕೊಂಡಿರುವ ಎಲ್ಲಾ



Downloaded From: www.kpscvaani.com



ಭಾರತೀಯರನ್ನೂ ಪ್ರೀತಿ ಮತ್ತು ಗೌರವಗಳಿಂದ ತಾಯ್ನಾಡಿಗೆ ಕಳುಹಿಸಿಕೊಡಲು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಿದರು.

ಅಲ್ಲದೆ, ಮಾರ್ಚ್ 1 ರಂದು ಕೇಂದ್ರ ನಾಗರೀಕ ವಿಮಾನಯಾನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಅವರನ್ನು ರೊಮೇನಿಯಾ ಮತ್ತು ಮಾಲ್ಡೋವಿಯಾ, ಕೇಂದ್ರ ಕಾನೂನು ಮತ್ತು ನ್ಯಾಯ ಸಚಿವ ಕಿರಣ್ ರಿಜುಜು ಅವರನ್ನು ಸ್ಲೊವಾಕಿಯಾ, ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳು ಹಾಗೂ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್‌ದೀಪ್‌ಸಿಂಗ್ ಪುರಿ ಅವರನ್ನು ಹಂಗೇರಿ ಹಾಗೂ ಕೇಂದ್ರ ರಸ್ತೆ ಸಾರಿಗೆ ಮತ್ತು ರಾಷ್ಟ್ರೀಯ ಹೆದ್ದಾರಿಗಳ ಖಾತೆಯ ರಾಜ್ಯ ಸಚಿವ ಜನರಲ್ ವಿಜಯ್ ಕುಮಾರ್ ಸಿಂಗ್ ಅವರನ್ನು ಪೋಲ್ಯಾಂಡ್ ದೇಶದ ಜೊತೆಯಲ್ಲಿ ಸಮನ್ವಯ ಸಾಧಿಸಲು ನಿಯೋಜಿಸಿದ ನರೇಂದ್ರ ಮೋದಿ ಅವರು ಉಕ್ರೇನ್‌ನಲ್ಲಿನ ಭಾರತೀಯರನ್ನು ಸುರಕ್ಷಿತವಾಗಿ ಹಾಗೂ ಕ್ಷಿಪ್ರವಾಗಿ ತಾಯ್ನಾಡಿಗೆ ಕರೆತರಲು ಪ್ರಥಮಾದ್ಯತೆ ಹಾಗೂ ಪರಮಾದ್ಯತೆ ನೀಡಲು ಎಲ್ಲಾ ರೀತಿಯ ಕ್ರಮಗಳನ್ನು ಹಾಗೂ ಉಪ ಕ್ರಮಗಳನ್ನು ಕೈಗೊಳ್ಳುವಂತೆ ಆದೇಶಿಸಿದರು.

### ಉಕ್ರೇನ್‌ನಲ್ಲಿದ್ದ ಭಾರತೀಯರು ಯಾರು ?

ಉಕ್ರೇನ್‌ನಲ್ಲಿದ್ದ 20,000 ಭಾರತೀಯ ನಾಗರೀಕರಲ್ಲಿ 18,000 ಮಂದಿ ವಿದ್ಯಾರ್ಥಿಗಳು. ಅದರಲ್ಲೂ ಬಹುತೇಕರು ವೈದ್ಯಕೀಯ ವಿದ್ಯಾರ್ಥಿಗಳು. ಇವರಲ್ಲಿ ನಮ್ಮ ಕನ್ನಡಿಗರ ಸಂಖ್ಯೆ ಸಿಂಹಪಾಲು. ಮತ್ತೊಂದು ಗಮನಾರ್ಹ ಅಂಶ ಎಂದರೆ ಇದರಲ್ಲಿ ಹೆಣ್ಣು ಮಕ್ಕಳ ಸಂಖ್ಯೆಯೇ ಹೆಚ್ಚು !

ಯುದ್ಧ ಪ್ರಾರಂಭವಾಗುವ ಸೂಚನೆ ಗೋಚರಿಸುತ್ತಿದ್ದಂತೆ ನಾಲ್ಕು ಸಾವಿರ ಮಂದಿ ಗಡಿ ದಾಟಿ ಸುರಕ್ಷಿತ ಸ್ಥಳಕ್ಕೆ ತೆರಳಿದ್ದರು. ಅಲ್ಲೇ ಉಳಿದವರ ರಕ್ಷಣೆ ಭಾರತ ಸರ್ಕಾರಕ್ಕೆ ದೊಡ್ಡ ಸವಾಲಾಗಿ ಪರಿಣಮಿಸಿತ್ತು. ಕನ್ನಡಿಗ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿದ್ದ ಹಿನ್ನೆಲೆಯಲ್ಲಿ ಕನ್ನಡಿಗರ ರಕ್ಷಣೆಯ ವಿಚಾರವೂ ಕರ್ನಾಟಕ ಸರ್ಕಾರಕ್ಕೆ ಆತಂಕ ಮೂಡಿಸಿತ್ತು.

ತನ್ನ ನಾಗರೀಕರ ರಕ್ಷಣೆಗಾಗಿ ಭಾರತದ ರಾಜತಾಂತ್ರಿಕ ಕಚೇರಿಗಳು ದಿನದ 24 ಗಂಟೆಗಳೂ ಕಾರ್ಯ ನಿರ್ವಹಿಸಿದವು. ಸಮೀಪದ ಗಡಿ ತಲುಪುವಂತೆ ಉಕ್ರೇನ್‌ನಲ್ಲಿರುವ ಭಾರತೀಯ ನಾಗರೀಕರಿಗೆ ಲಭ್ಯವಿದ್ದ ಎಲ್ಲಾ ಸಾಮಾಜಿಕ ಜಾಲತಾಣಗಳ ಮೂಲಕ ಭಾರತೀಯ ರಾಯಭಾರ ಕಚೇರಿಗಳು, ಭಾರತೀಯ ಧೂತಾವಾಸ ಕಚೇರಿಗಳು ಮಾಹಿತಿ ರವಾನಿಸಿದವು.

ಉಕ್ರೇನ್‌ನ ನೆರೆಯ ಎಲ್ಲಾ ದೇಶಗಳಲ್ಲಿದ್ದ ಭಾರತೀಯ ರಾಜತಾಂತ್ರಿಕ ಕಚೇರಿಗಳಲ್ಲಿ ಸಹಾಯವಾಣಿಗಳು ಸ್ಥಾಪಿತವಾಗಿದ್ದವು. ದೂರವಾಣಿ ಕರೆ, ಮಿಂಚಂಚೆ ಹಾಗೂ ವಾಟ್ಸ್ ಆ್ಯಪ್ ಮೂಲಕ ಸಂದೇಶಗಳನ್ನು ವಿನಿಮಯ ಮಾಡಿಕೊಂಡು ನೆರವು ಪಡೆಯಲು ಭಾರತೀಯ ನಾಗರೀಕರಿಗೆ ಅವಕಾಶ ಕಲ್ಪಿಸಲಾಗಿತ್ತು. ಉಕ್ರೇನ್‌ನ ಖೀವ್, ಖಾಕೀವ್ ಹಾಗೂ ಸುಮೀ ಪ್ರದೇಶಗಳಲ್ಲಿದ್ದ ಭಾರತೀಯ ವಿದ್ಯಾರ್ಥಿಗಳು ಟ್ಯಾಕ್ಸಿ, ಬಸ್ಸು, ರೈಲು ಮಾತ್ರವಲ್ಲದೆ, ಕಿಲೋ ಮೀಟರ್‌ಗಟ್ಟಲೆ ಕಾಲ್ನಡಿಗೆಯಲ್ಲಿಯೇ ಪಯಣಿಸಿ ಗಡಿ ತಲುಪಿದರು.

### ಗಡಿಯಲ್ಲಿ ರೋಮಾಂಚನ !

ಒಂದೆಡೆ ಊಟವಿಲ್ಲ, ಮತ್ತೊಂದೆಡೆ ನೀರೂ ಇಲ್ಲ. ಮಗದೊಂದೆಡೆ ಹಣವೂ ಇಲ್ಲ. ದುರ್ಭಿಕ್ಷದಲ್ಲಿ ಅಧಿಕ ಮಾಸ ಎಂಬಂತೆ ಗಗನದಲ್ಲಿ ಯುದ್ಧ ವಿಮಾನಗಳ ಹಾರಾಟ, ನೆಲದಲ್ಲಿ ಭಯಗ್ರಸ್ಥ ಜನರ ಚೀರಾಟ, ಅಲ್ಲಲ್ಲಿ ಬಾಂಬ್ ಸ್ಫೋಟಗಳ ಶಬ್ದಗಳು, ಕ್ಷಿಪಣಿ ದಾಳಿಗಳ ಸದ್ದುಗಳು ಮಾತ್ರವಲ್ಲದೆ ಕೊರೆಯುವ ಚಳಿ. ಇಂತಹ ಕಷ್ಟಕರ ಹಾಗೂ ಕ್ಲಿಷ್ಟಕರ ಪರಿಸ್ಥಿತಿಯನ್ನು ಎದುರಿಸಿ, ಮೈಲಿಗಟ್ಟಲೆ ನಡೆದ ಭಾರತೀಯ ವಿದ್ಯಾರ್ಥಿಗಳು ಗಡಿಯಲ್ಲಿ ತಮಗಾಗಿ ಕಾದಿದ್ದ ಬಸ್ಸುಗಳ ಮೇಲೆ ತ್ರಿ-ವರ್ಣ ಧ್ವಜವನ್ನು ಕಂಡು ರೋಮಾಂಚನಗೊಂಡರು.

" ನಮ್ಮ ರಾಷ್ಟ್ರಧ್ವಜವನ್ನು ಕಂಡೊಡನೆಯೇ ನಡೆಯಲಾರದ ಸ್ಥಿತಿ





Downloaded From: www.kpscvaani.com




ತಲುಪಿದ್ದ ನಾವು ಬಸ್ಸಿನತ್ತ ಓಡಿದೆವು. ಆಹಾ ! ತ್ರಿ-ವರ್ಣ ಧ್ವಜವನ್ನು ಕಂಡ ಕ್ಷಣ ಇಡೀ ಭಾರತವೇ ನಮ್ಮ ಜೊತೆಗಿದೆ ಎಂಬ ಭಾವನೆ ನಮ್ಮಲ್ಲಿ ಮೂಡಿಸಿತು. ನಮ್ಮಲ್ಲಿ ಮತ್ತೆ ಬದುಕಿನ ಭರವಸೆ ಚಿಗುರೊಡೆಯಿತು" ಎಂಬ ವಿದ್ಯಾರ್ಥಿಗಳ ಮಾತನ್ನು ಕೇಳಿದಾಗ ನಾವೂ ಕೂಡಾ ಭಾವುಕರಾಗಿ ಪುಳಕಿತಗೊಳ್ಳುವುದು ಸಹಜ.

ಗಡಿ ತಲುಪಿದ ನಮ್ಮ ಮಕ್ಕಳನ್ನು ಕೇಂದ್ರ ಸಚಿವರೇ ಅಕ್ಕರೆ ಮತ್ತು ಆತ್ಮೀಯತೆಯಿಂದ ಸ್ವಾಗತಿಸಿದ್ದು, ಭಾರತೀಯ ಆಹಾರದ ಪೊಟ್ಟಣಗಳನ್ನು ನೀಡಿದ್ದು, ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಿದ್ದು, ಉಪಚಾರದ ಮಾತುಗಳನ್ನಾಡಿದ್ದು, ವಿಮಾನದಲ್ಲಿ ಕೂರಿಸಿ ಶುಭ ಕೋರಿದ್ದು ಎಲ್ಲವೂ ಮರೆಯಲಾರದ ಕ್ಷಣಗಳು ಎಂದು ಉಕ್ರೇನ್‌ನಿಂದ ಬೆಂಗಳೂರಿಗೆ ಹಿಂದಿರುಗಿದ ಓರ್ವ ವೈದ್ಯಕೀಯ ವಿದ್ಯಾರ್ಥಿನಿ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ತನ್ನ ಪೋಷಕರ ಎದುರಿನಲ್ಲಿ ಬಣ್ಣಿಸಿದಾಗ ಆಕೆಯ ಕಣ್ಣಾಲೆಗಳಲ್ಲಿ ನೀರು ತುಂಬಿದ್ದವು. ಆಕೆಯ ಪೋಷಕರ ಕಣ್ಣುಗಳ ಅಂಚಲ್ಲೂ ನೀರಿತ್ತು.

**ಭಾರತದ ತ್ರಿವರ್ಣ ಧ್ವಜಕ್ಕೆ ಎಲ್ಲೆಡೆ ಮಾನ್ಯತೆ !**

ಉಕ್ರೇನ್‌ನಲ್ಲಿದ್ದ ಭಾರತೀಯ ವಿದ್ಯಾರ್ಥಿಗಳು ತಾವಿದ್ದ ಸ್ಥಳದಿಂದ ಗಡಿ ತಲುಪಲು ಹಲವು ಕಷ್ಟಗಳನ್ನು ಅನುಭವಿಸಿದ್ದು ದಿಟ. ಆದರೆ, ಆ ಮಕ್ಕಳಗೆ ಇಲ್ಲೂ ಒಂದು ಅವಿಸ್ಮರಣೀಯ ಅನುಭವವಾಗಿದೆ. ಗಡಿಯತ್ತ ಪ್ರಯಾಣಿಸುವಾಗ ಕೆಲವೆಡೆ ಎದುರಾದ ಉಕ್ರೇನ್ ಸೈನಿಕರು ಮತ್ತೆ ಕೆಲವೆಡೆ ಎದುರಾದ ರಷ್ಯಾದ ಸೈನಿಕರು ವಿದ್ಯಾರ್ಥಿಗಳ ಬಳಿ ಇದ್ದ ಭಾರತೀಯ ಪಾಸ್‌ಪೋರ್ಟ್ ಹಾಗೂ ತ್ರಿವರ್ಣ ಧ್ವಜವನ್ನು ಕಂಡು ಪ್ರಯಾಣ ಮುಂದುವರೆಸಲು ಅನುವು ಮಾಡಿಕೊಟ್ಟಿದ್ದು ಮಕ್ಕಳಲ್ಲಿ ಅಚ್ಚರಿಯನ್ನು ಉಂಟು ಮಾಡಿದೆ.

ಈ ವಿಷಯವು ಕಾಡ್ಗಿಚ್ಚಿನಂತೆ ವ್ಯಾಪಿಸಿ, ಓರ್ವ ಪಾಕಿಸ್ತಾನಿ ವಿದ್ಯಾರ್ಥಿ ಕೂಡಾ ತನ್ನಲ್ಲಿದ್ದ ಸ್ಕೆಚ್ ಪೆನ್ ಬಳಸಿ, ಬಿಳಿಯ ಹಾಳೆಯ ಮೇಲೆ ತ್ರಿವರ್ಣ ಧ್ವಜದ ಚಿತ್ರವನ್ನು ಬಿಡಿಸಿ, ತಾನೂ ಕೂಡಾ ಗಡಿ ತಲುಪಿದಾಗಿ ಹೇಳಿಕೊಂಡಿದ್ದಾನೆ. ಇದು ನಮ್ಮ ಭಾರತದ ತ್ರಿವರ್ಣ ಧ್ವಜಕ್ಕೆ ಎಲ್ಲೆಡೆ ಮಾನ್ಯತೆ ಇದೆ ಎಂಬುದನ್ನು ಸಾಬೀತು ಪಡಿಸುತ್ತದೆ.

**ದಟ್ಸ್ ಗಟ್ಸ್ !**

ಗಡಿ ತಲುಪಿದೊಡನೆಯೇ ಪರಿಶೀಲನಾ ವೇಳೆಯಲ್ಲಿ ವಿಳಂಬ ಉಂಟಾಗಿ ಕೆಲವು ಮಕ್ಕಳಿಗೆ ಅನಾನುಕೂಲವಾಗಿರುವುದು ನಿಜ. ಆದರೆ, ಇದನ್ನೇ ಕೆಲವರು ವೈಭವೀಕರಿಸ ಹೊರಟಿದ್ದು ಮಾತ್ರ ದುರದೃಷ್ಟಕರ. ತಾನು ವ್ಯಾಸಂಗ ಮಾಡುತ್ತಿದ್ದ ವೈದ್ಯಕೀಯ ಮಹಾವಿದ್ಯಾಲಯದ ವಸತಿ ನಿಲಯದಿಂದ ಗಡಿ ತಲುಪಿದ ಬೆಂಗಳೂರಿನ ನಿವಾಸಿಯೊಬ್ಬ ವಿಚಲಿತನಾಗಿ ತಾನಿದ್ದ ಸ್ಥಳದಿಂದಲೇ ತನ್ನನ್ನು ಕರೆತರಲಿಲ್ಲ ಎಂದು ಅ(ವಲ)ತ್ತುಕೊಂಡು ನಮ್ಮ ಸರ್ಕಾರಕ್ಕೆ ಗಟ್ಸ್ ( ಎದೆಗಾರಿಕೆ ) ಇಲ್ಲ ಎಂಬ ಹೊಣೆಗಾರಿಕೆ ಇಲ್ಲದ ಮಾತನಾಡಿ ಸಾಮಾಜಿಕ ಜಾಲತಾಣಗಳಲ್ಲಿ ಸಾರ್ವತ್ರಿಕ ಟೀಕೆಗೆ ಗುರಿಯಾದ.

ಕರ್ನಾಟಕದ ಹಾವೇರಿ ಜಿಲ್ಲೆಯ ರಾಣೇಬೆನ್ನೂರು ತಾಲೂಕಿನ ಚಳಗೇರಿಯ ನಿವಾಸಿ ನವೀನ್ ಗ್ಯಾನ ಗೌಡರ್ ಎಂಬ ವೈದ್ಯಕೀಯ ವಿದ್ಯಾರ್ಥಿ ತನ್ನ ಸಹಪಾಠಿಗಳಿಗಾಗಿ ಆಹಾರ ಮತ್ತು ನೀರು ತೆಗೆದು ಕೊಂಡು ಹೋಗಲು ಬಂದಾಗ ಖಾರ್ಕೀವ್‌ನಲ್ಲಿ ಕ್ಷಿಪಣಿದಾಳಿಗೆ ಬಲಿಯಾದ. ಆ ಸಂದರ್ಭದಲ್ಲಿ ಆತನ ಚಳಗೇರಿ ನಿವಾಸಕ್ಕೆ ಭೇಟಿ ನೀಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಉಕ್ರೇನ್‌ನ ರಣಭೂಮಿಯಿಂದ ನವೀನ್‌ನ ಪಾರ್ಥಿವ ಶರೀರವನ್ನು ತಾಯ್ನಾಡಿಗೆ ತರಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಆತನ ಪೋಷಕರಿಗೆ ಮಾತು ಕೊಟ್ಟಿದ್ದರು.

ಪ್ರಧಾನ ಮಂತ್ರಿ ನರೇಂದ್ರ ಮೋದಿ, ವಿದೇಶಾಂಗ ಸಚಿವ ಸುಬ್ರಮಣ್ಯಂ ಜಯಶಂಕರ್ ಅವರನ್ನೊಳಗೊಂಡಂತೆ ಎಲ್ಲರ ನೆರವಿನಿಂದ ಯುದ್ಧ ಭೂಮಿಯಿಂದ ಆ ಯುವಕನ ಪಾರ್ಥಿವ ಶರೀರವನ್ನು 27 ದಿನಗಳ ನಂತರ ತಾಯ್ನಾಡಿಗೆ ತರಿಸುವಲ್ಲಿ ಮುಖ್ಯಮಂತ್ರಿ ಯಶಸ್ವಿಯಾದರು. ನವೀನನ ಪಾರ್ಥಿವ ಶರೀರ ಬೆಂಗಳೂರಿಗೆ ಆಗಮಿಸಿದ ಸಂದರ್ಭದಲ್ಲಿ ವಿಮಾನ ನಿಲ್ದಾಣದಲ್ಲಿ ಖುದ್ದು ಹಾಜರಿದ್ದದ್ದು ಮಾತ್ರವಲ್ಲದೆ, ಚಳಗೇರಿಯ ಆತನ ಮನೆಗೇ ತೆರಳಿ ನವೀನ್‌ನ ಪಾರ್ಥಿವ ಶರೀರವನ್ನು ಕೊಟ್ಟ ಮಾತಿನಂತೆ ಆತನ ಪಾಲಕ-ಪೋಷಕರಿಗೆ ಗೌರವಯುತವಾಗಿ ಹಸ್ತಾಂತರಿಸಿದರು. ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರೂ ಕೂಡಾ ಚಳಗೇರಿಗೆ ಖುದ್ದು ತೆರಳಿ ನವೀನ್ ಕುಟುಂಬಸ್ಥರಿಗೆ ಸಾಂತ್ವನ ತಿಳಿಸಿದ್ದಾರೆ ಎಂಬುದೂ ಗಮನಾರ್ಹ. ದಟ್ಸ್ ನಮ್ಮ ಸರ್ಕಾರದ ಗಟ್ಸ್.

**ಹೊಸ ಇತಿಹಾಸ !**

ಉಕ್ರೇನ್‌ನ ಸುತ್ತಮುತ್ತಲ ದೇಶಗಳಲ್ಲಿನ ವಿಮಾನ ನಿಲ್ದಾಣಗಳ ಮೂಲಕ ಮಾರ್ಚ್ 1 ರಿಂದ 11 ರ ಅವಧಿಯಲ್ಲಿ ಏರ್ ಇಂಡಿಯಾ, ಇಂಡಿಗೋ, ಏರ್ ಇಂಡಿಯಾ ಎಕ್ಸ್‌ಪ್ರೆಸ್, ಸ್ಪೈಸ್ ಜೆಟ್, ಏರ್ ಏಷ್ಯಾ ಮತ್ತು ಗೋ ಫಸ್ಟ್ ಮಾತ್ರವಲ್ಲದೆ, ಅಂತಿಮವಾಗಿ ಭಾರತೀಯ ವಾಯು ಸೇನೆಯ ಸಿ-17 ಗ್ಲೋಬ್ ಮಾಸ್ಟರ್ ವಿಮಾನಗಳನ್ನು ನಿಯೋಜಿಸಿ ಸಂಕಷ್ಟಕ್ಕೆ ಸಿಲುಕಿದ್ದ 16,000 ಭಾರತೀಯರನ್ನು ಭಾರತಕ್ಕೆ ಕರೆತಂದ ಆಪರೇಷನ್ ಗಂಗಾ ಎಂಬ ಯಶಸ್ವೀ ಕಾರ್ಯಾಚರಣೆ ಒಂದು ವಿಶಿಷ್ಠ ದಾಖಲೆಯನ್ನು ನಿರ್ಮಿಸಿದೆ.

ಅಷ್ಟೇ ಅಲ್ಲ ! ಉಕ್ರೇನ್‌ನಲ್ಲಿ ಸಂಕಷ್ಟದಲ್ಲಿ ಸಿಲುಕಿದ್ದ ಭಾರತೀಯರ ರಕ್ಷಣೆಗೆ ಸಕಾಲದಲ್ಲಿ ಧಾವಿಸಿ ಮಾನವೀಯ ಸೇವಾ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಿ ಸಾವಿರಾರು ಜೀವಗಳ ಉಳಿಸುವಲ್ಲಿ ಅದ್ಭುತ ಸಾಧನೆ ಮಾಡಿದ ಆಪರೇಷನ್ ಗಂಗಾ ವಿಶ್ವದ ಇತರೆ ರಾಷ್ಟ್ರಗಳಿಗೂ ಮಾದರಿಯಾಗಿ ಒಂದು ಹೊಸ ಇತಿಹಾಸವನ್ನೇ ಸೃಷ್ಟಿಸಿದೆ.



Downloaded From: www.kpscvaani.com



# ರೈತರ ಮನೆ ಬಾಗಿಲಿಗೆ ಕಂದಾಯ ದಾಖಲೆ ಮುಟ್ಟಿಸಿದ ಸರ್ಕಾರ

**ಕಂದಾಯ ದಾಖಲೆಗಳನ್ನು ರೈತರ ಮನೆ ಬಾಗಿಲಿಗೆ ತಲುಪಿಸುವ ಕಾರ್ಯಕ್ರಮವನ್ನು ಮಾರ್ಚ್ 12 ರಂದು ಯಶಸ್ವಿಯಾಗಿ ರಾಜ್ಯದಾದ್ಯಂತ ಹಮ್ಮಿಕೊಳ್ಳಲಾಗಿತ್ತು.**

ಉಮೇಶ್ ಕೊಲಿಗೆರೆ

ರಾಜ್ಯ ಸರ್ಕಾರವು ಜನ ಸಾಮಾನ್ಯರಿಗೆ ಗರಿಷ್ಠ ಪ್ರಮಾಣದ ಸೇವೆಯನ್ನು ಒದಗಿಸುವ ಅಭಿಲಾಷೆಯೊಂದಿಗೆ ಕಾರ್ಯಕ್ರಮಗಳನ್ನು ರೂಪಿಸುತ್ತಿದೆ. ತನ್ನ ಇತಿಮಿತಿಯಲ್ಲಿ ಎಷ್ಟು ಸಾಧ್ಯವೋ ಅಷ್ಟು ಅನುಕೂಲ ಒದಗಿಸುವುದು ಆಡಳಿತ ವ್ಯವಸ್ಥೆಯ ಬದ್ಧತೆ. ಈವರೆಗೂ ನೂರಾರು ಯೋಜನೆಗಳು, ಕಾರ್ಯಕ್ರಮಗಳು ಜನರ ಜೀವಮಟ್ಟ ಸುಧಾರಣೆಗೆ ಶ್ರಮಿಸುತ್ತಿವೆ. ಆದರೂ ಮತ್ತಷ್ಟು ನಿರೀಕ್ಷೆಗಳು ವ್ಯಕ್ತವಾಗುತ್ತಲೆ ಇದೆ. ಆದರೆ ಯಾವುದೇ ನಿರೀಕ್ಷೆ, ಬೇಡಿಕೆ ಇಲ್ಲದೆ ಹುಟ್ಟಿಕೊಂಡಿದ್ದೇ ಕಂದಾಯ ದಾಖಲೆ ರೈತರ ಮನೆ ಬಾಗಿಲಿಗೆ ಎಂಬ ಯೋಜನೆ.

ಯಾವುದೇ ಬೇಡಿಕೆ ಇಲ್ಲದೆ ಇದ್ದರೂ ಕಂದಾಯ ಸಚಿವರ ಸೂಕ್ಷ್ಮತೆಯಿಂದ ಹುಟ್ಟಿಕೊಂಡ ವಿನೂತನ ಯೋಜನೆಯೊಂದು ನಾಡಿನ ಗ್ರಾಮೀಣ ಭಾಗದ 45 ಲಕ್ಷ ಕುಟುಂಬಗಳ ಮನೆ ಬಾಗಿಲಿಗೆ ಏಕಕಾಲಕ್ಕೆ ತಲುಪಿದೆ. ಕಂದಾಯ ಸಚಿವ ಆರ್.ಅಶೋಕ್ ಅವರು ಕಾರ್ಯಕ್ರಮವೊಂದರಲ್ಲಿ ಭಾಗವಹಿಸಲು ಹುಬ್ಬಳ್ಳಿ ಪ್ರವಾಸದಲ್ಲಿದ್ದಾಗ, ಸಚಿವರು ಜಿಲ್ಲಾಧಿಕಾರಿಗಳು ಮತ್ತು ಸ್ಥಳೀಯ ಇಲಾಖೆಯ ಅಧಿಕಾರಿಗಳ ಜೊತೆ ಔಪಚಾರಿಕ ಸಭೆ ನಡೆಸಿದರು. ಕಂದಾಯ ದಾಖಲೆಗಳು ನಿಗದಿತ ಸಮಯಕ್ಕೆ ಜನ ಸಾಮಾನ್ಯರಿಗೆ ತಲುಪದಿರುವ ಪರಾಮರ್ಶೆ ನಡೆಯುವ ವೇಳೆ ಕಂದಾಯ ನಿರೀಕ್ಷಕರೊಬ್ಬರು ಭೂ ಕಂದಾಯ ಅಧಿನಿಯಮದಲ್ಲಿ ಪ್ರತಿ ವರ್ಷವೂ ಕಂದಾಯ ಪಾವತಿಸುವ ಜನರಿಗೆ ಸರ್ಕಾರ ಉಚಿತ ದಾಖಲೆಗಳನ್ನು ಒದಗಿಸಬೇಕೆಂಬ ಬದ್ಧತೆ ಇರುವುದನ್ನು ತಿಳಿಸಿದ್ದಾರೆ. ಆ ಕ್ಷಣವೇ ಕಂದಾಯ ದಾಖಲೆ ಮನೆ ಬಾಗಿಲಿಗೆ ಎಂಬ ಯೋಜನೆಯು ಚಿಗುರೊಡೆಯಿತು.





Downloaded From: www.kpscvaani.com





ರಾಜ್ಯಮಟ್ಟದಲ್ಲಿ ಮುಖ್ಯಮಂತ್ರಿಗಳು ಮತ್ತು ಅಧಿಕಾರಿಗಳ ಜೊತೆ ಚರ್ಚಿಸಿದ ಬಳಿಕ ಮತ್ತಷ್ಟು ವಿಸ್ತೃತ ಸ್ವರೂಪ ಪಡೆದುಕೊಂಡಿದ್ದು, ಜನವರಿ 5ರಂದು ಸರ್ಕಾರ ಸುತ್ತೋಲೆ ಹೊರಡಿಸಿತು. ಜನವರಿ 25ರಂದು ಗಣರಾಜ್ಯೋತ್ಸವದಂದು ಯೋಜನೆಯನ್ನು ಉದ್ಘಾಟನೆ ಮಾಡುವ ಗುರಿ ಪ್ರಕಟಿಸಿತ್ತು. ಆದರೆ ತಾಂತ್ರಿಕ ಕಾರಣಗಳಿಂದ ಅದು ಸಾಧ್ಯವಾಗದೆ ಮುಂದೂಡಿಕೆಯಾಗಿತ್ತು. ಇದೇ ಮಾರ್ಚ್ 12ರಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಚಿಕ್ಕಬಳ್ಳಾಪುರ ಜಿಲ್ಲೆಯ ಗುಂಗಿರ್ಲಹಳ್ಳಿಯಲ್ಲಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದ್ದಾರೆ.

ದೇಶದಲ್ಲೇ ಮೊದಲ ಬಾರಿಗೆ ಕರ್ನಾಟಕ ಸರ್ಕಾರ ಸುಮಾರು 50 ಲಕ್ಷ ರೈತರ ಮನೆ ಬಾಗಿಲಿಗೆ ಪಹಣಿ (ಆರ್ ಟಿ ಸಿ) ಅಟ್ಲಾಸ್/ ಹಿಸ್ಸಾ ಸ್ಕೆಚ್, ಆದಾಯ ಪ್ರಮಾಣ ಪತ್ರ, ಜಾತಿ ಪ್ರಮಾಣ ಪತ್ರಗಳನ್ನು ಉಚಿತವಾಗಿ ತಲುಪಿಸುವ ಬದ್ಧತೆಯನ್ನು ಪ್ರದರ್ಶನ ಮಾಡುತ್ತಿದೆ. ಪಹಣಿ ನೀಡಲು ಸರ್ಕಾರ ಮೊದಲ ನಾಲ್ಕು ಪುಟಗಳವರೆಗೆ 15 ರೂಪಾಯಿ ಶುಲ್ಕ ವಿಧಿಸುತ್ತಿತ್ತು. ಆನಂತರದ ಪ್ರತಿ ಹೆಚ್ಚುವರಿ ಪುಟಕ್ಕೂ 2 ರೂ. ಶುಲ್ಕ ಪಡೆಯಲಾಗುತ್ತಿತ್ತು. ಕಳೆದ ಆರು ವರ್ಷದಲ್ಲಿ ಪಹಣಿ ಮತ್ತು ಮ್ಯುಟೇಷನ್ ದಾಖಲಾತಿ ನೀಡಿಕೆಯಿಂದಲೇ 173 ಕೋಟಿ ರೂಪಾಯಿ ಆದಾಯ ಸಂಗ್ರಹಿಸಲಾಗಿತ್ತು. ಕೋವಿಡ್‌ನಿಂದ ಸಂಕಷ್ಟದಲ್ಲಿರುವ ಜನಸಾಮಾನ್ಯರಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಉಚಿತವಾಗಿ ಅಗತ್ಯ ದಾಖಲೆಗಳನ್ನು ಒದಗಿಸುತ್ತಿದೆ.

ಮೊದಲ ಹಂತದಲ್ಲಿ ಮಾರ್ಚ್ 12 ಮತ್ತು 13ರಂದು ಎರಡು ದಿನಗಳ ಕಾಲ ಕ್ಷೇತ್ರದಲ್ಲಿರುವ ಗ್ರಾಮ ಸಹಾಯಕರು, ಗ್ರಾಮ ಲೆಕ್ಕಿಗರು, ರಾಜಸ್ವ ನಿರೀಕ್ಷಕರು, ಉಪ ತಹಶೀಲ್ದಾರ್, ತಹಶೀಲ್ದಾರ್, ಉಪವಿಭಾಗಾಧಿಕಾರಿಗಳು, ಅಪರ ಜಿಲ್ಲಾಧಿಕಾರಿಗಳು, ಇತರ ಇಲಾಖಾಧಿಕಾರಿಗಳನ್ನು ಬಳಸಿಕೊಂಡು ರೈತರ ಮನೆ ಮನೆ ಬಾಗಿಲಿಗೆ ದಾಖಲೆಗಳನ್ನು ತಲುಪಿಸಿದ್ದಾರೆ. ಎರಡು ದಿನಗಳ ಈ ಅಭಿಯಾನದಲ್ಲಿ ಬಹುತೇಕ ಎಲ್ಲರಿಗೂ ದಾಖಲೆಗಳು ತಲುಪಿವೆ. ಒಂದು ವೇಳೆ ತಲುಪದೇ ಇದ್ದ ರೈತರು ಮಾರ್ಚ್ 21 ರಿಂದ 25ರ ನಡುವೆ ಆಯಾ ನಾಡಕಚೇರಿಗಳಲ್ಲಿ ಉಚಿತವಾಗಿ ಪಡೆದುಕೊಳ್ಳಬಹುದಾಗಿದೆ.

ಹೊಸ ಶೈಕ್ಷಣಿಕ ವರ್ಷದಲ್ಲಿ ಶಾಲಾ ಕಾಲೇಜುಗಳ ದಾಖಲಾತಿಗಳಿಗೆ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳು ಅತ್ಯಂತ ಮಹತ್ವದ್ದಾಗಿವೆ. ಅವುಗಳಿಗಾಗಿ ತಹಸೀಲ್ದಾರ್ ಕಚೇರಿ ಅಥವಾ ನಾಡಕಚೇರಿಗಳಿಗೆ ಪ್ರತಿದಿನ ನೂರಾರು ಜನ ಭೇಟಿ ನೀಡುವುದು ಪ್ರತಿ ವರ್ಷ ಸಾಮಾನ್ಯವಾಗಿತ್ತು. ಇದು ಕಂದಾಯ ಇಲಾಖೆಯ ಕೆಲಸದೊತ್ತಡವನ್ನು ಹೆಚ್ಚಿಸಿ ಬಹಳಷ್ಟು ಕೆಲಸಗಳು ಏರುಪೇರುಗಳಾಗುತ್ತಿದ್ದವು. ಈ ಬಾರಿ ಅಂತಹ ಸಮಸ್ಯೆ ಕಾಡುವುದಿಲ್ಲ ಎಂಬ ವಿಶ್ವಾಸ ವ್ಯಕ್ತವಾಗಿದೆ.

**ಜನರ ಅಲೆದಾಟವನ್ನು ತಪ್ಪಿಸುವ ಸಲುವಾಗಿ ಸರ್ಕಾರ ಹಲವು ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಅದೇ ನಿಟ್ಟಿನಲ್ಲಿ ಕಂದಾಯ ದಾಖಲೆಗಳನ್ನು ರೈತರ ಮನೆ ಬಾಗಿಲಿಗೆ ಉಚಿತವಾಗಿ ತಲುಪಿಸುವ ಉದ್ದೇಶದಿಂದ ಒಂದೇ ದಿನದಲ್ಲಿ 5 ಕೋಟಿಗೂ ಹೆಚ್ಚು ದಾಖಲೆಯನ್ನು ರಾಜ್ಯಾದ್ಯಂತ ವಿತರಣೆ ಮಾಡಿರುವುದು ಕಂದಾಯ ಇಲಾಖೆಯ ಕ್ರಾಂತಿ.**

**–ಬಸವರಾಜ ಎಸ್ ಬೊಮ್ಮಾಯಿ,**
ಮುಖ್ಯಮಂತ್ರಿಗಳು

ರಾಜ್ಯದಲ್ಲಿ 4.93.30.889 ಜಾತಿ ಪ್ರಮಾಣ ಪತ್ರಗಳು, 2.76.56.058 ಆದಾಯ ಪತ್ರಗಳು ರೈತರ ಮನೆ ಬಾಗಿಲಿಗೆ ತಲುಪಿವೆ. 1.74.71.807 ಪಹಣಿ ಮತ್ತು ಪಹಣಿಯ ಶೇ.70ರಷ್ಟು ಅಂದರೆ 1.22.30.265 ಅಟ್ಲಾಸ್ ಪ್ರತಿಗಳು ಮಾಲೀಕರ ಕೈ ಸೇರಿವೆ. ಜಮೀನಿನ ದಾಖಲಾತಿಗಳ ಪೈಕಿ ಪಹಣಿ ಮತ್ತು ಅಟ್ಲಾಸ್ ಅತ್ಯಂತ ಪ್ರಮುಖವಾಗಿವೆ. ಕೃಷಿ ಸಾಲ ಪಡೆಯಲು, ಕೃಷಿ ಉತ್ಪನ್ನಗಳನ್ನು ಬೆಂಬಲ ಬೆಲೆಯಡಿ ಮಾರಾಟ ಮಾಡಲು, ಮುಖ್ಯಮಂತ್ರಿಯವರ ವಿದ್ಯಾನಿಧಿ ಸೌಲಭ್ಯ ಪಡೆಯಲು ಪಹಣಿ ಅತ್ಯಗತ್ಯ ದಾಖಲೆಯಾಗಿತ್ತು. ಅದಕ್ಕಾಗಿ ರೈತರು ಸಿರ್ಝನ್ ಕಾಲದಲ್ಲಿ ಸಾಲುಗಟ್ಟಿ ನಿಲ್ಲಬೇಕಾಗುತ್ತಿತ್ತು. ಈ ನಾಲ್ಕು ಪ್ರಮುಖ ದಾಖಲೆಗಳನ್ನು ಖುದ್ದು ಸರ್ಕಾರವೇ ಜನರ ಮನೆ ಬಾಗಿಲಿಗೆ ತಲುಪಿಸುವ ಮೂಲಕ ಜನಸ್ನೇಹಿ ಆಡಳಿತದ ಬದ್ಧತೆಯನ್ನು ಸಾಬೀತು ಮಾಡಿದೆ.

ಮನೆ ಬಾಗಿಲಿಗೆ ದಾಖಲೆಗಳನ್ನು ತಲುಪಿಸುವಾಗ ತಗಾದೆ ಇರುವ ಸ್ವತ್ತುಗಳ ಕುರಿತು ಗೊಂದಲ ಏರ್ಪಟ್ಟಿದೆ. ಆದರೆ ನ್ಯಾಯಾಲಯದ ತೀರ್ಪಿನ ಅನುಪಾಲನೆ ನಿಬಂಧನೆಗೆ ಒಳಪಟ್ಟು ಸದ್ಯಕ್ಕೆ ಯಾರ ಹೆಸರಿನಲ್ಲಿ ದಾಖಲಾತಿಗಳಿವೆಯೋ ಅವರಿಗೆ ದಸ್ತಾವೇಜುಗಳನ್ನು ತಲುಪಿಸಲಾಗುತ್ತಿದೆ. ರಾಜ್ಯದಲ್ಲಿ ಒಟ್ಟು 93 ಲಕ್ಷ ಕುಟುಂಬಗಳಿದ್ದು, ಅದರಲ್ಲಿ ಗ್ರಾಮೀಣ ಭಾಗದ 62.85.819 ರೈತರ ಪೈಕಿ 50 ಲಕ್ಷ ಕುಟುಂಬಗಳಿಗೆ ಸರ್ಕಾರದ ಸೇವೆ ಮನೆ ಬಾಗಿಲಿಗೆ ತಲುಪಿದೆ. ಇದಕ್ಕಾಗಿ ಪ್ರತಿ ಹಂತದಲ್ಲೂ ಸರ್ಕಾರ



Downloaded From: www.kpscvaani.com



ಯೋಜಿತ ಸಿದ್ಧತೆಗಳನ್ನು ಮಾಡಿಕೊಂಡಿತ್ತು.

ಭೂಮಿ ತಂತ್ರಾಂಶದಲ್ಲಿ ಲಭ್ಯ ಇದ್ದ ಆಸ್ತಿ ದಾಖಲಾತಿಗಳನ್ನು, ನಾಡಕಚೇರಿಯಲ್ಲಿ ಲಭ್ಯ ಇದ್ದ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳ ಮಾಹಿತಿಯನ್ನು ಖುದ್ದು ಪರಿಶೀಲಿಸಿ ಪಿಡಿಎಫ್ ಪ್ರತಿಗಳ ಮೂಲಕ ಪ್ರಿಂಟ್ ತೆಗೆದುಕೊಳ್ಳಲಾಗಿದೆ. ಗೊಂದಲಗಳಾಗದಂತೆ ಗ್ರಾಮ ಸಹಾಯಕರು ಕವರ್ ಮೇಲೆ ಫಲಾನುಭವಿಗಳ ಹೆಸರು ಮತ್ತು ವಿಳಾಸ ನಮೂದಿಸಿದ್ದಾರೆ. ದಾಖಲಾತಿಗಳು ಮನೆ ಬಾಗಿಲಿಗೆ ತಲುಪಿದ ಬಳಿಕ ಫಲಾನುಭವಿಗಳ ಸಹಿ ಮತ್ತು ದೂರವಾಣಿ ಸಂಖ್ಯೆಯನ್ನು ಪಡೆಯಲಾಗುತ್ತಿದ್ದು, ಇದು ಮತ್ತೊಂದು ರೀತಿಯಲ್ಲಿ ಖಚಿತವಾದ ದತ್ತಾಂಶ ಸಂಗ್ರಹಕ್ಕೆ ನೆರವಾಗಿದೆ. ಮುಂದಿನ ದಿನಗಳಲ್ಲಿ ಸರ್ಕಾರದಿಂದ ಸೌಲಭ್ಯಗಳನ್ನು ಒದಗಿಸಲು, ಮಾಹಿತಿ ನೀಡಲು ಸುಲಭ ಸಾಧ್ಯವಾಗಲಿದೆ.

ಆಧುನಿಕ ತಂತ್ರಜ್ಞಾನವನ್ನು ಬಳಕೆ ಮಾಡಿಕೊಂಡು ಜನಜೀವನ ಮಟ್ಟ ಸುಧಾರಣೆಗೆ ಸರ್ಕಾರ ಸಾಕಷ್ಟು ಪ್ರಯತ್ನಿಸುತ್ತಲೇ ಇದೆ. ರಾಜ್ಯಾದ್ಯಂತ 769 ಅಟಲ್ ಜನಸ್ನೇಹಿ ಕೇಂದ್ರಗಳ ಮೂಲಕ ಜನ ಸಾಮಾನ್ಯರಿಗೆ ತಮ್ಮ ಸಮೀಪದಲ್ಲೇ ಸರ್ಕಾರಿ ದಾಖಲೆಗಳನ್ನು ಒದಗಿಸಲಾಗುತ್ತಿದೆ. ಹಿಂದೆಲ್ಲಾ ಜಾತಿ, ಆದಾಯ ಸೇರಿದಂತೆ ಯಾವುದೇ ದಾಖಲಾತಿಗಳು ಬೇಕಾದರೂ ತಹಶೀಲ್ದಾರ್ ಕಚೇರಿ ಅಥವಾ ತಾಲ್ಲೂಕು ಕೇಂದ್ರಗಳಿಗೆ ಭೇಟಿ ನೀಡುವುದು ಅನಿವಾರ್ಯವಾಗಿತ್ತು. ಅಲ್ಲಿಯೂ ಒಂದೇ ದಿನಕ್ಕೆ ಕೆಲಸ ಮುಗಿಯುತ್ತಿರಲಿಲ್ಲ. ಸಣ್ಣಪುಟ್ಟ ದಾಖಲೆಗಳಿಗೂ ಎರಡು ಮೂರು ದಿನ ಕೆಲಸ ಬಿಟ್ಟು ಅಲೆಯಬೇಕಾದ ಪರಿಸ್ಥಿತಿ ಇತ್ತು. ಹೊಸ ವ್ಯವಸ್ಥೆಯಲ್ಲಿ ಬಹುತೇಕ ಮಾಹಿತಿಗಳು ಬೆರಳ ತುದಿಯಲ್ಲೇ ಇವೆ. ಆಧಾರ್ ಸಂಖ್ಯೆ ನಮೂದಿಸಿದರೆ ಅಥವಾ ಬೆರಳಚ್ಚು ಒತ್ತಿದರೆ ಎಲ್ಲಾ ದತ್ತಾಂಶಗಳು ಪ್ರತ್ಯಕ್ಷವಾಗುತ್ತವೆ. ಅವುಗಳನ್ನು ದೃಢೀಕರಿಸಿ ಪ್ರಮಾಣ ಪತ್ರ ವಿತರಣೆ ಮಾಡುವುದು ಸರಳವಾಗಿದೆ.

ಸರ್ಕಾರವೇ ಮನೆ ಬಾಗಿಲಿಗೆ ದಾಖಲೆಗಳನ್ನು ತಲುಪಿಸುತ್ತಿರುವುದರಿಂದ ಅನಗತ್ಯ ಸಮಯ, ಹಣ ಉಳಿತಾಯವಾಗುತ್ತಿದ್ದು, ಮಧ್ಯವರ್ತಿಗಳ ಉಪಟಳ ನಿವಾರಣೆಯಾಗಿದೆ. ನಮ್ಮ ಜಮೀನು ನಮ್ಮ ದಾಖಲೆ ಎಂಬ ಧ್ಯೇಯದೊಂದಿಗೆ ದಸ್ತಾವೇಜುಗಳನ್ನು ಕ್ರಮಬದ್ಧಗೊಳಿಸಲು ಹಲವು ಯೋಜನೆಗಳನ್ನು ಸರ್ಕಾರ ರೂಪಿಸಿದೆ. ಶತಮಾನದ ಬಳಿಕ ಡ್ರೋನ್ ಮೂಲಕ ರಾಜ್ಯಾದ್ಯಂತ ಸಮಗ್ರ ಸರ್ವೇ ಮಾಡಿ, ದಾಖಲಾತಿಗಳನ್ನು ಡಿಜಿಟಲೀಕರಣಗೊಳಿಸಲಾಗುತ್ತದೆ. 364 ಕೋಟಿ ರೂಪಾಯಿ ವೆಚ್ಚದ ಡ್ರೋನ್ ಮೂಲಕ ಮರು ಸರ್ವೇ ಕಾರ್ಯ ಚಾಲುಗೊಂಡಿದೆ.

2017–18ನೇ ಸಾಲಿನಲ್ಲಿ ಮೊದಲ ಹಂತದಲ್ಲಿ ರಾಜ್ಯದ ರಾಮನಗರ, ತುಮಕೂರು, ಹಾಸನ, ಬೆಳಗಾವಿ, ಉತ್ತರ ಕನ್ನಡ, ಬೆಂಗಳೂರು ಸೇರಿದಂತೆ ಆರು ಜಿಲ್ಲೆಗಳಲ್ಲಿ ಡ್ರೋನ್ ಸರ್ವೇ ಆರಂಭವಾಗಿತ್ತು. ಈ ನಡುವೆ ಕೇಂದ್ರ ಸರ್ಕಾರದ ಸ್ವಮಿತ್ವ ಯೋಜನೆ ಜಾರಿ ಮಾಡುತ್ತಿದ್ದರಿಂದ ಹಾಗೂ ಕೋವಿಡ್‌ನಿಂದಾಗಿ ಕೆಲ ಕಾಲ ಡ್ರೋನ್ ಸರ್ವೇ ಸ್ಥಗಿತಗೊಂಡಿತ್ತು. ಈಗ ಮತ್ತೆ ಪುನರ್ ಸರ್ವೇಯನ್ನು ಆರಂಭಿಸಲಾಗಿದೆ. ಮೊದಲ ಹಂತದಲ್ಲಿ 77 ಕೋಟಿ ರೂಪಾಯಿ ವೆಚ್ಚ ಮಾಡಿ 51 ಸಾವಿರ ಚದುರ ಕಿಲೋ ಮೀಟರ್‌ಗಳ ಪುನರ್ ಸರ್ವೇ ಮಾಡಲಾಗುತ್ತಿದೆ. ಎರಡನೇ ಹಂತದಲ್ಲಿ 287 ಕೋಟಿ ರೂಪಾಯಿ ವೆಚ್ಚ ಮಾಡಿ 26 ಜಿಲ್ಲೆಗಳ 1.40 ಲಕ್ಷ ಚದುರ ಕಿಲೋ ಮೀಟರ್ ಪ್ರದೇಶವನ್ನು ಸಮೀಕ್ಷೆಗೊಳಪಡಿಸುವ ಗುರಿ ನಿಗದಿಯಾಗಿದೆ. ಭಾರತೀಯ ಸರ್ವೇಕ್ಷಣಾ ಸಂಸ್ಥೆ ಡ್ರೋನ್ ಸರ್ವೇಗೆ ತಾಂತ್ರಿಕ ನೆರವು ನೀಡುತ್ತಿದೆ. ರಾಜ್ಯಾದ್ಯಂತ 49 ಕಡೆಗಳಲ್ಲಿ ನಿರಂತರವಾಗಿ ಕರ್ತವ್ಯ ನಿರ್ವಹಿಸುವ ಉಲ್ಲೇಖ ಕೇಂದ್ರಗಳನ್ನು (ಸಿ ಒ ಆರ್ ಎಸ್) ಸ್ಥಾಪಿಸಲಾಗಿದೆ.

ಆಧುನಿಕ ತಂತ್ರಜ್ಞಾನ ಡ್ರೋನ್ ಬಳಸಿ ಸಮಗ್ರವಾಗಿ ಸರ್ವೇ ಮೂಲಕ ಸ್ಥಿರಾಸ್ತಿಗಳ ಸ್ಪಷ್ಟತೆ ಮೂಡಿಸಲು ಕಂದಾಯ ಇಲಾಖೆ ಪಣ ತೊಟ್ಟಿದೆ. ಸರ್ಕಾರ ಮತ್ತೂ ಒಂದು ಹೆಜ್ಜೆ ಮುಂದೆ ಇಟ್ಟಿದೆ. ಜಮೀನು ಭಾಗವಾದ ವೇಳೆ ಅದನ್ನು ಮರು ಸರ್ವೇ ಮಾಡಿ, ನಕ್ಷೆ ತಯಾರು ಮಾಡುವ ಜವಾಬ್ದಾರಿಯನ್ನು ಕಂದಾಯ ಇಲಾಖೆ ನಿರ್ವಹಣೆ ಮಾಡುತ್ತಿತ್ತು. ಅದರಲ್ಲೂ ಬದಲಾವಣೆ ಮಾಡಲು ಸರ್ಕಾರ ಹೆಜ್ಜೆ ಮುಂದೆ ಇಟ್ಟಿದೆ. ಇದಕ್ಕಾಗಿ ಹೊಸ ತಂತ್ರಾಂಶ ರೂಪುಗೊಳ್ಳುತ್ತಿದೆ. ಆಸ್ತಿ ವಿಭಾಗವಾದ ವೇಳೆ ರೈತರೆ ತಮ್ಮ ಜಮೀನಿನ ನಕ್ಷೆಯನ್ನು ತಯಾರು ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗುತ್ತಿದೆ. ಕಂದಾಯ 1800 ಸರ್ವೇಯರ್‌ಗಳು ಸೇರ್ಪಡೆಯಾಗುತ್ತಿದ್ದಾರೆ. ಇದರಿಂದ ಸರ್ವೇಗಾಗಿ ಕಾದು ಕುಳಿತಿರುವ ಲಕ್ಷಾಂತರ ಪ್ರಕರಣಗಳು ಇತ್ಯರ್ಥಗೊಳ್ಳಲಿವೆ ಎಂಬ ನಿರೀಕ್ಷೆ ಇದೆ.

ಸದ್ಯಕ್ಕೆ ಕಂದಾಯ ಇಲಾಖೆ ಅಧೀನದಲ್ಲಿರುವ ಗ್ರಾಮೀಣ ಭಾಗದ ದಾಖಲೆಗಳನ್ನು ಮನೆ ಬಾಗಿಲಿಗೆ ಉಚಿತವಾಗಿ ತಲುಪಿಸಲಾಗುತ್ತಿದ್ದು, ಭೂ ಕಂದಾಯ ಕಾಯ್ದೆ ನಗರ ಪ್ರದೇಶಗಳಿಗೂ ಅನ್ವಯವಾಗುವುದರಿಂದ ಮುಂದಿನ ದಿನಗಳಲ್ಲಿ ನಗರವಾಸಿಗರಿಗೂ ಕಂದಾಯ ದಾಖಲೆಗಳು ಸಿಗಲಿವೆ. ■

**ಸ್ವಾತಂತ್ರ್ಯ ಬಂದು 75 ವರ್ಷ ಕಳೆಯುತ್ತಿದ್ದರೂ ಬಹಳಷ್ಟು ರೈತರು ತಮ್ಮ ಜಮೀನಿನ ದಾಖಲೆಗಳನ್ನೇ ನೋಡಿಲ್ಲ. ದಾಖಲೆಗಾಗಿ ರೈತರು ಅಲೆದಾಡುವುದನ್ನು ತಪ್ಪಿಸಲು ಕಂದಾಯ ಇಲಾಖೆಯು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಏಕ ಕಾಲಕ್ಕೆ 5 ಕೋಟಿಗೂ ಅಧಿಕ ದಾಖಲೆಗಳನ್ನು ಸುಮಾರು 62 ಲಕ್ಷ ರೈತರಿಗೆ ತಲುಪಿಸುವ ಗುರಿಯನ್ನು ಹೊಂದಲಾಗಿದೆ. ಆ ಮೂಲಕ ಕಂದಾಯ ಇಲಾಖೆಯು ಮತ್ತಷ್ಟು ಜನಸ್ನೇಹಿಯಾಗಿದೆ.**

**–ಆರ್.ಅಶೋಕ್**
ಕಂದಾಯ ಸಚಿವರು



Downloaded From: www.kpscvaani.com



# ಚಿತ್ರೋದ್ಯಮಕ್ಕೆ ಪುನಶ್ಚೇತನ ನೀಡಿದ 13ನೇ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ

ಬೆಂಗಳೂರು
ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ
Bengaluru International Film Festival

**ಎರಡು ವರ್ಷಗಳ ಬಳಿಕ ಮಾರ್ಚ್ 3 ರಿಂದ 10 ರವರೆಗೆ ನಡೆದ 13ನೇ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವವು ಚಿತ್ರೋದ್ಯಮಕ್ಕೆ ಪುನಶ್ಚೇತನ ನೀಡಿತು.**

ಡಾ. ಎಚ್. ವೀರಭದ್ರಪ್ಪ


ಕಳೆದೆರಡು ವರುಷಗಳಿಂದ ಕೋವಿಡ್‌ನಿಂದಾಗಿ ಸ್ಥಬ್ದಗೊಂಡಂತಿದ್ದ ಕನ್ನಡ ಚಲನಚಿತ್ರೋದ್ಯಮಕ್ಕೆ 13 ನೇ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವವು ಪುನಶ್ಚೇತನ ನೀಡುವಲ್ಲಿ ಸಫಲವಾಯಿತು. ಕೋವಿಡ್ ಪ್ಯಾಂಡಮಿಕ್‌ನಿಂದ ಎಲ್ಲಾ ಕ್ಷೇತ್ರಗಳೂ ಮೈಕೊಡವಿಕೊಳ್ಳತ್ತಿರುವಾಗ, ಕನ್ನಡ ಚಲನಚಿತ್ರೋತ್ಸವ ಹೇಗೆ ನಡೆದೀತೂ ಎಂಬ ಆತಂಕವನ್ನು ದೂರಮಾಡಿತು.

ಬಹುಶಃ ಈ ಆತಂಕದಿಂದಾಗಿಯೇ ಸಾವಿರಾರು ಸಿನಿಪ್ರೇಕ್ಷಕರು, ಸಿನಿ ಅಭಿಮಾನಿಗಳು online ನಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಂಡಿದ್ದರು. ಆದರೆ ಪ್ರತಿದಿನ ಪ್ರದರ್ಶನಗಳಲ್ಲಿ ಎಂದಿನಂತೆ ಬಹುತೇಕ ಚಿತ್ರಮಂದಿರಗಳು ಹೌಸ್‌ಫುಲ್ ಪ್ರದರ್ಶನಗೊಂಡಿದ್ದು ಸಂಘಟಕರಲ್ಲಿ ಹುಮ್ಮಸ್ಸು ಮೂಡುವಂತೆ ಮಾಡುವಲ್ಲಿ ಸಫಲವಾಯಿತು.

ಮೊದಲದಿನದ ಬೆಳಗಿನ ಪ್ರದರ್ಶನದಲ್ಲಿ ಸ್ವಲ್ಪಮಟ್ಟಿಗೆ ಪ್ರೇಕ್ಷಕರ ಕೊರತೆ ಕಾಡಿದರೂ ಮಧ್ಯಾಹ್ನವಾಗುತ್ತಿದ್ದಂತೆ ತನ್ನ ಎಂದಿನ ಅಭಿಮಾನಿ ಪ್ರೇಕ್ಷಕರನ್ನು ಸೆಳೆಯುವಲ್ಲಿ ಯಶಸ್ವಿಯಾಯಿತು. ಈ ಬಾರಿ ಕೆಲವು ದಿನಗಳಲ್ಲಿ ರಾತ್ರಿ 11 ರಿಂದ 11–30ರ ವರೆಗೂ ಪ್ರದರ್ಶನಗಳು ನಡೆದಿದ್ದುದನ್ನು ಬಹುತೇಕ ಸಿನಿ ಪ್ರೇಕ್ಷಕರು ಸದುಪಯೋಗ ಪಡಿಸಿಕೊಂಡರು.



Downloaded From: www.kpscvaani.com



ಈ ಬಾರಿ 10 ವಿವಿಧ ಹಂತದ ವಿಭಾಗಗಳಲ್ಲಿ ಚಲನಚಿತ್ರ ಪ್ರದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಕಳೆದ ಸಲದ ವಿಭಾಗದೊಂದಿಗೆ ಈ ಸಲ 'ಸಿನಿ ಕ್ರಿಟಿಕ್ಸ್ ವೀಕ್', 'ಆಸ್ಕರ್ ಸ್ಪೆಕ್ಟ್ರಮ್' ವಿಭಾಗಗಳು ಹೊಸದಾಗಿ ಸೇರ್ಪಡೆಯಾಗಿದ್ದವು.

ಮಾರ್ಚ್ 3 ರಂದೇ ಇನ್ನು ಮುಂದೆ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವವನ್ನು ಆರಂಭಿಸಲಾಗುವುದೆಂದು ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ ಅವರು ಚಲನಚಿತ್ರೋತ್ಸವದ ಉದ್ಘಾಟನೆಯಂದು ಘೋಷಿಸಿದರು. 1934 ರ ಮಾರ್ಚ್ 3 ರಂದು ಕನ್ನಡದ ಮೊಟ್ಟ ಮದೊಲ ವಾಕ್ ಚಿತ್ರ ತೆರೆಕಂಡ ನೆನಪಿಗಾಗಿ ಸರ್ಕಾರವು ಈ ತೀರ್ಮಾನವನ್ನು ತೆಗೆದುಕೊಂಡಿದೆ.

ಸುಮಾರು 200ಕ್ಕೂ ಹೆಚ್ಚು ವಿವಿಧ ದೇಶಗಳ ಚಲನಚಿತ್ರಗಳು ಪ್ರೇಕ್ಷಕರನ್ನು ತುದಿಗಾಲಿನಲ್ಲಿ ನಿಲ್ಲುವಂತೆ ಮಾಡಿದ್ದವು. ಆದರೆ ಎಲ್ಲ ಸಿನಿಮಾಗಳನ್ನು ನೋಡುವುದು ಅಸಾಧ್ಯದ ಮಾತು. ನಮ್ಮ ನಮ್ಮ ಅಭಿರುಚಿ, ಆಯ್ಕೆಯಂತೆ ನಾನು ಈ ಬಾರಿ ಯುದ್ಧ ಕೇಂದ್ರಿತ ಚಲನಚಿತ್ರಗಳು ಹಾಗೂ ಮಹಿಳಾ ಕೇಂದ್ರಿತ ಚಲನಚಿತ್ರಗಳನ್ನು ಆಯ್ಕೆ ಮಾಡಿಕೊಂಡು ಅದರಂತೆ ಹೋಂವರ್ಕ್ ಮಾಡಿದ್ದರೂ, ಅಂದುಕೊಂಡ ಎಲ್ಲಾ ಚಿತ್ರಗಳನ್ನು ನೋಡಲಾಗಲಿಲ್ಲ ಎಂಬ ನಿರಾಸೆ ಉಳಿಯಿತು.

ಜಾಗತಿಕ ಪ್ರಪಂಚವನ್ನು ತನ್ನೆಡೆಗೆ ಸೆಳೆದುಕೊಂಡಿರುವ 'ರಷ್ಯಾ-ಯುಕ್ರೇನ್' ಯುದ್ಧ ಯಾವ ಬಗೆಯ ತಿರುವನ್ನು ಪಡೆಯುತ್ತದೋ ಎಂಬ ಆತಂಕ ಎಲ್ಲ ನಾಗರಿಕ ಮನಸ್ಸಿನಲ್ಲಿ ದುಗುಡವನ್ನು ಹುಟ್ಟಿಸಿರುವಾಗ ನಾನು ಯುದ್ಧ ಕೇಂದ್ರಿತ ಸಿನಿಮಾಗಳನ್ನೇ ಪಟ್ಟಿಮಾಡಿಕೊಂಡಿದ್ದು ಒಂದು ಕಾಕತಾಳಿಯವೇ.

ಮಾನವ ಸಮಾಜದ ಮೇಲೆ ಅದರಲ್ಲೂ ಯುವ ಪೀಳಿಗೆಯ ಮೇಲೆ ಈ ಯುದ್ಧ ತಂದಿಡುವ ಅಪಸವ್ಯಗಳ ಬಗ್ಗೆ ಅನೇಕರು ಅನೇಕ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ.

'ಎರಿಕ್ ಹಾರ್ಟ್‌ಮನ್- ಎಂಬಾತ'- War is a place Where young people, Who don't know each other and Don't hate each other, Kill each other, by the decision of old, People who know each other and hate each other, but don't kill each other ಎಂದು ವ್ಯಾಖ್ಯಾನಿಸಿದ್ದಾನೆ.

ಮಾನವಕುಲವನ್ನು ನಾಶಮಾಡವ ಯುದ್ಧದ ಬಗೆಗಿನ ವ್ಯಾಖ್ಯಾನಗಳೇನೇ ಇರಲಿ ಸಿನಿಮಾ ಮಾಧ್ಯಮದ ಮೂಲಕ ಕೆಲವು ಜಾಗತಿಕ ಮಟ್ಟದ ನಿರ್ದೇಶಕರು ಬಹಳ ಪರಿಣಾಮಕಾರಿಯಾಗಿ ಹಿಡಿದಿಡುವ, ಚಿಂತನೆಗೀಡು ಮಾಡುವಂತೆ ಮಾಡಿದ್ದಾರೆ. ಮಾಧ್ಯಮದ ಮೇಲಿನ ಅವರ ಅನುಭವ, ಹಿಡಿತ ಅವರ ಪ್ರತಿಭೆಗೆ ಸಾಕ್ಷಿಯಾಗಿದೆ.

**ಪುಟ್ಟಣ್ಣ ಕಣಗಾಲ್ ಮನೆಯ ಕಾಯಕಲ್ಪ**

ದೇಶದ ಬೆಳವಣಿಗೆಗೆ ಕನ್ನಡ ಚಿತ್ರರಂಗದ ಅವಶ್ಯಕತೆಯು ಮುಖ್ಯವಾಗುವುದರಿಂದ ಚಿತ್ರರಂಗಕ್ಕೆ ಬೇಕಾದ ಎಲ್ಲಾ ಸಹಾಯವನ್ನು ಸರಕಾರ ಮಾಡಲಿದೆ. ಮೈಸೂರಿನಲ್ಲಿ ಸ್ಥಾಪನೆ ಮಾಡಲು ಉದ್ದೇಶಿಸಲಾಗಿರುವ ಚಿತ್ರನಗರಿಯನ್ನು ತ್ವರಿತ ಗತಿಯಲ್ಲಿ ಅನುಷ್ಠಾನ ಮಾಡಲು ಕ್ರಮಕೈಗೊಳ್ಳಲಾಗುತ್ತಿದೆ. ಪುಟ್ಟಣ್ಣ ಕಣಗಾಲ್ ಅವರ ಮನೆಯ ಕಾಯಕಲ್ಪ ಮತ್ತು ಕರ್ನಾಟಕ ಚಲನಚಿತ್ರ ಅಕಾಡೆಮಿಯ ಕಟ್ಟಡದಲ್ಲಿ 300 ಆಸನಗಳ ಚಿತ್ರಮಂದಿರ ನಿರ್ಮಾಣ ಮಾಡಲು ನಮ್ಮ ಸರ್ಕಾರ ಬದ್ಧವಾಗಿದೆ ಎಂದು ಚಲನಚಿತ್ರೋತ್ಸಕ್ಕೆ ಚಾಲನೆ ನೀಡಿದ ಸಂದರ್ಭದಲ್ಲಿ ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ ಅವರು ಭರವಸೆ ನೀಡಿದ್ದಾರೆ.



Downloaded From: www.kpscvaani.com

'ಬೆರೆನ್ ಸ್ಪೈನ್-ಏಷಿಯನ್ ಸಿನಿಮಾ ವಿಭಾಗದಲ್ಲಿ ಪ್ರದರ್ಶನಗೊಂಡ ರಷಿಯನ್ ಸಿನಿಮಾ. ನಿರ್ದೇಶಕರ 'ರೋಮನ್ ಶುಮನೋವ್' ಸಿನಿಮಾ ತಾಂತ್ರಿಕತೆ, ನಿರೂಪಣೆ ಜಾಗತಿಕ ಮಟ್ಟದ್ದು ಎಂದರೆ ಅತಿಶಯೋಕ್ತಿ ಏನಲ್ಲ. ನಾವು ಸಿನಿಮಾ ನೋಡುತ್ತಿದ್ದಷ್ಟು ಕಾಲ ಇದೊಂದು ನಿರ್ದೇಶಕ ನಿರ್ಮಿತ ಸಿನಿಮಾ ಎಂಬುದನ್ನೇ ಮರೆಸುವಂತಿದೆ. ಸಿನಿಮಾ ತಂತ್ರಜ್ಞಾನದ ಬಳಕೆ, ಸಂಕಲನ ಎಲ್ಲದರಲ್ಲೂ ಪ್ರೇಕ್ಷಕರನ್ನು ವಿಸ್ಮಯಗೊಳಿಸುತ್ತದೆ.

'ಬೆರೆನ್ ಸ್ಪೈನ್' ಸಿನಿಮಾದಲ್ಲಿ ನಾಯಕ ತಾನು ಭಾಗವಹಿಸಿದ ಯುದ್ಧದ ಘಟನೆಗಳನ್ನು ತನ್ನ ಇಳಿ ವಯಸ್ಸಿನಲ್ಲಿ ನಿರೂಪಿಸುತ್ತಾ ಹೋದಂತೆ ಸಿನಿಮಾ ಅನಾವರಣಗೊಳ್ಳ ತೊಡಗುತ್ತದೆ. ಯುದ್ಧದ ವಿವಿಧ ಕರಾಳ ಮುಖಗಳು, ಮನುಷ್ಯನ ಸಣ್ಣತನ, ಉದಾರತನ, ಯುದ್ಧದ ಪ್ರೋಟಕಾಲ್‌ಗಳು ತೀರ್ಮಾನ ತೆಗೆದುಕೊಳ್ಳುವಲ್ಲಿನ ಗೊಂದಲಗಳು, ಜನಸಾಮಾನ್ಯರ ರಕ್ಷಣೆ, ಜೊತೆಯಲ್ಲಿರುವ ಸೈನಿಕರ ರಕ್ಷಣೆ, ಅಧಿಕಾರಿಗಳ ರಕ್ಷಣೆ ಈ ಎಲ್ಲವುಗಳ ಬಗೆಗಿನ ಗೊಂದಲ, ತೊಳಲಾಟಗಳನ್ನು ಕಣ್ಮುಂದೆ ನಡೆಯುವ ರೀತಿಯಲ್ಲಿ ಚಿತ್ರಕತೆ ಸಂಯೋಜಿಸಿರುವ ರೀತಿ ಅಸಾಧಾರಣವಾದುದು.

'ದಿ ಬ್ಯಾಟಲ್ ಆಫ್ ಅಲ್ಜೀರಿಯಾ' ಇಟಲಿಯ ನಿರ್ದೇಶಕ 'ಗಿಲ್ಲೋ ಪೊನ್ ಟೆಕೋವ್' ನಿರ್ದೇಶನದ ಫ್ರೆಂಚ್ ಭಾಷೆಯ ಈ ಚಿತ್ರ 1950ರಲ್ಲಿ ನಡೆದ ಎರಡನೇ ಮಹಾಯುದ್ಧದ ಘಟನೆಯನ್ನಾಧರಿಸಿದ ಚಿತ್ರ. ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಅಲ್ಜೀರಿಯಾದಲ್ಲಿನ ದಂಗೆಯನ್ನು ಹತ್ತಿಕ್ಕುವಂತೆ ಒಬ್ಬ ಸಮರ್ಥ ಮಿಲಿಟರಿ ದಂಡನಾಯಕನ್ನು ಕಳಿಸಲಾಗುತ್ತದೆ. ಆದರೆ ಅಲ್ಜೀರಿಯಾ ದೇಶಭಕ್ತ ದಂಗೆಕೋರರು ಮಾಡುವ ತಂತ್ರಗಳು, ಅವರ ಚಾಣಾಕ್ಷತನ ಅಧಿಕಾರಿಯನ್ನು ಬೆರಗುಗೊಳಿಸುವಂತೆ ಮಾಡುವ ಜೊತೆಗೆ ಕಂಗೆಡಿಸುತ್ತದೆ. ಜನಸಾಮಾನ್ಯರು ತಮ್ಮ ದೇಶಾಭಿಮಾನವನ್ನು ತೋರಿಸುವ ಬಗೆ, ನಮ್ಮ ಕಣ್ಮುಂದೆ ನಡೆಯುತ್ತಿದೆಯೇನೋ ಅನ್ನುವಂತೆ ಈ ಸನ್ನಿವೇಶಗಳ ಮರುಸೃಷ್ಠಿ ಮಾಡುವಲ್ಲಿ ನಿರ್ದೇಶನ, ತಂತ್ರಗಾರಿಕೆ ಮೆಚ್ಚುವಂತಿದ್ದರೆ, ಚಿತ್ರಕಥೆ ಹಾಗೂ ಅದರ ವಿನ್ಯಾಸ ಬೆರಗು ಹುಟ್ಟಿಸುತ್ತದೆ. ಅದೇ ರೀತಿ 'ಡಿಯರ್ ಕಾರ್ಮೆಡ್', 'ವೇರ್ ಆರ್ ಯು ಗೋಯಿಂಗ್ ಐಡಾ', 'ಬ್ಯಾಡ್ ರೋಡ್ಸ್' ಮುಂತಾದ ಯುದ್ಧ ಕೇಂದ್ರಿತ ಚಲನ ಚಿತ್ರಗಳು ಮನಸ್ಸಿನ ಮೇಲೆ ಗಾಢ ಪರಿಣಾಮ ಬೀರಿದವು.

ಯುದ್ಧದ ಅಪಾಯ ಕುರಿತು 'Mark J Lacy'- ' In Modern war, One Individual can cause the destruction of hundreds of thousands o men, women and children. He can do so by pushing on button. He may not feel the emotional impact of what he is doing. Since he does not see, does not know the people he kills' – ಎಂದು ವ್ಯಾಖ್ಯಾನಿಸುತ್ತಾನೆ. ಎಲ್ಲೋ ಅಡಗಿ ಕುಳಿತು ಕೇವಲ ಒಂದು ಬಟನ್ ಒತ್ತುವ ಮೂಲಕ ಹಾಕುವ ಬಾಂಬುಗಳು ಎಂತಹ ಅಪಾಯಕಾರಿ ಸನ್ನಿವೇಶವನ್ನುಂಟು ಮಾಡುತ್ತವೆಂಬುದನ್ನು ಈ ಮೇಲಿನ ಮಾತುಗಳು ಸ್ಪಷ್ಟೀಕರಿಸುತ್ತವೆ.

ನನ್ನ ಎರಡನೆಯ ಆಯ್ಕೆ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿಯೇ ನಡೆಯುತ್ತಿರುವ ಚಲನಚಿತ್ರೋತ್ಸವದಲ್ಲಿ ಮಹಿಳಾ ಕೇಂದ್ರಿತ ಕುರಿತು ಬಂದಿರುವ ಸಿನಿಮಾಗಳನ್ನು ನಾನು ಆಯ್ಕೆ ಮಾಡಿಕೊಂಡಿದ್ದೆ, ಸ್ತ್ರೀ ಕೇಂದ್ರಿತ ವಸ್ತುವುಳ್ಳ ಕೆಲವು ಸಿನಿಮಾಗಳಲ್ಲಿ 'ಫೆದರ್ಸ್', 'ಐ ನೆವರ್ ಕ್ರೈ', 'ಡ್ರೈವ್ ಮೈ ಕಾರ್', 'ದಿ ರೆಸ್ಟ್‌ಲೆಸ್', 'ಕಂಪಾರ್ಟ್‌ಮೆಂಟ್ ನಂ.6', 'ದಿ ಸ್ಟೋರಿ ಆಫ್ ಮೈ ವೈಫ್', 'ಸ್ಕೂಲ್ ಗರ್ಲ್' ಮುಂತಾದವು. ಈ ಮೇಲಿನ ಬಹುತೇಕ ಚಿತ್ರಗಳಲ್ಲಿ ಹೆಣ್ಣು ಹೆಂಡತಿಯಾಗಿ ಕುಟುಂಬವನ್ನು, ಗಂಡನನ್ನು ಪೊರೆವ ಸ್ತ್ರೀ ಶಕ್ತಿಯಾಗಿ, ಆಕೆಯ ಜವಾಬ್ದಾರಿಗಳು, ಎಷ್ಟೆಲ್ಲಾ ಆಧುನಿಕತೆ ಬಂದರೂ ಯಾವುದೇ ದೇಶವಾದರೂ ಹೆಣ್ಣಿನ ಸ್ಥಾನಮಾನಗಳಲ್ಲಿ ಯಾವುದೇ ಬದಲಾವಣೆ ಆಗಿಲ್ಲ. ಹೆಣ್ಣಿನ ಶೋಷಣೆ, ಅವಹೇಳನ, ಆಕೆಯ ಅಸ್ಥಿರತೆಯಿಂದ ಬಳಲುವುದು ಇನ್ನು ಸುಧಾರಣೆ ಕಂಡಿಲ್ಲವೆಂಬುದನ್ನು ಈ ಸಿನಿಮಾಗಳು ಮನವರಿಕೆ ಮಾಡುವಂತಿದೆ.

'ಫೆದರ್ಸ್' ಅರೆಬಿಕ್ ಭಾಷೆಯ, ಈಜಿಪ್ಟ್ ದೇಶದ ಒಮರ್ ಇಲಿಜೋಹೈರಿ ನಿರ್ದೇಶನದ ಚಿತ್ರ, ಇಡೀ ಚಿತ್ರ ಹೆಣ್ಣಿನ ಹೋರಾಟದ, ಆಕೆಯ ಸಹನೆ ಸಹಿಷ್ಣತೆಗೆ ಪ್ರತೀಕದಂತಿದೆ. 'ಫೆದರ್ಸ್' ಕಥಾನಾಯಕ ಗಂಡನ ದರ್ಪವನ್ನು ಆತನ ನಿಯಂತ್ರಣದಲ್ಲಿದ್ದುಕೊಂಡೆ ಮೌನವಾಗಿ



ಚಿತ್ರೋತ್ಸವದ ಸಮಾರೋಪ ಸಮಾರಂಭದಲ್ಲಿ ವಿವಿಧ ವಿಭಾಗಗಳ ಅತ್ಯುತ್ತಮ ಸಿನಿಮಾಗಳಿಗೆ ರಾಜ್ಯಪಾಲರಾದ ಥಾವರ ಚಂದ್ ಗೆಹಲೋತ್ ಅವರು 2020 ಮತ್ತು 2021 ನೇ ಸಾಲಿನ ಪ್ರಶಸ್ತಿಯನ್ನು  ಪ್ರಧಾನ ಮಾಡಿದರು. ಕನ್ನಡ ಸಿನಿಮಾ ಸ್ಪರ್ಧಾ ವಿಭಾಗದಿಂದ 'ಪಿಂಕಿ ಎಲ್ಲಿ' ಮತ್ತು 'ದೊಡ್ಡಹಟ್ಟಿ ಬೋರೇಗೌಡ' ಕ್ರಮವಾಗಿ 20 ಮತ್ತು 21 ನೇ ಸಾಲಿನ ಅತ್ಯುತ್ತಮ ಚಿತ್ರ ಪ್ರಶಸ್ತಿಯನ್ನು ಮತ್ತು ಅತ್ಯುತ್ತಮ ಕನ್ನಡ ಮನೋರಂಜನಾ ಚಲನಚಿತ್ರ ಸ್ಪರ್ಧಾ ವಿಭಾಗದಲ್ಲಿ 'ದಿಯಾ' ಹಾಗೂ 'ಯುವರತ್ನ' ಅತ್ಯುತ್ತಮ ಚಿತ್ರ ಪ್ರಶಸ್ತಿಯನ್ನು ಪಡೆದವು.



Downloaded From: www.kpscvaani.com



ಎಲ್ಲವನ್ನು ಸಹಿಸಿಕೊಂಡವಳು. ಮಗನ ಹುಟ್ಟುಹಬ್ಬಕ್ಕೆ ಕರೆಸಿದ ಮಂತ್ರವಾದಿ ಆಕೆಯ ಗಂಡನನ್ನು ಹುಂಜವನ್ನಾಗಿ ಪರಿವರ್ತಿಸಿ, ಮತ್ತೆ ಅವನನ್ನು ಮನುಷ್ಯನನ್ನಾಗಿ ರೂಪಾಂತರಿಸುವಲ್ಲಿ ವಿಫಲನಾಗುತ್ತಾನೆ. ಹುಂಜವನ್ನೇ ತನ್ನ ಗಂಡನೆಂದು ಭಾವಿಸಿ ಅದರ ಪೋಷಣೆಮಾಡುತ್ತಾ ಮನೆಯ ಕಷ್ಟಗಳನ್ನು ನಿಭಾಯಿಸುತ್ತಾ ಹಣ ಸಂಪಾದನೆ ಮಾಡುವ ಅನಿವಾರ್ಯತೆ ಒದಗುತ್ತದೆ. ಅನಿವಾರ್ಯವಾಗಿ ಒದಗಿದ ಈ ಆಘಾತದಿಂದ ಆಕೆ ನಿರ್ವಿಕಾರಭಾವದಿಂದ ಎಲ್ಲವನ್ನು ಸಹಿಸಿಕೊಳ್ಳುತ್ತಾ ತನ್ನ ಕುಟುಂಬ ನಿರ್ವಹಣೆ ಮಾಡುತ್ತಾಳೆ. ಕಡು ಬಡತನದ ಕುಟುಂಬ, ಅದರ ಪ್ರತಿಫಲನದಂತಿರುವ ಆಕೆಯ ಮನೆ, ಅಲ್ಲಿಯ ಪೊಲೀಸ್ ವ್ಯವಸ್ಥೆ ಎಲ್ಲವೂ ಒಂದಕ್ಕೊಂದು ಪೂರಕವಾಗಿದೆ. ಎಲ್ಲವನ್ನೂ ಮೂಕವಾಗಿ ಸಹಿಸಿಕೊಳ್ಳುವ ಈಕೆ ಕೊನೆಗೆ ತನ್ನ ಪತಿ ಪತ್ತೆಯಾಗಿ ಆತ ಖಾಯಿಲೆಯಿಂದ ಜರ್ಜರಿತನಾಗಿದ್ದರೂ ಆತನನ್ನು ಶುಶ್ರೂಷೆ ಮಾಡುತ್ತಾಳೆ. ಆದರೆ ಆತ ಚೇತರಿಸಿಕೊಳ್ಳದಿದ್ದಾಗ ಕೊನೆಗೆ ಆತನ ಜೀವವನ್ನೇ ತೆಗೆದು ಬಿಡುವ ನಿರ್ಧಾರ ಮಾಡುತ್ತಾಳೆ. ಹೆಚ್ಚಿನ ಸಹನೆಯನ್ನು ಪ್ರೇಕ್ಷಕರಿಂದ ಬಯಸುವ ಈ ಚಿತ್ರ ನಿರ್ದೇಶಕನ ಸಂಯಮಪೂರ್ಣ ನಿರ್ವಹಣೆ ಮೆಚ್ಚುವಂತಿದೆ.

'ಐ ನೆವರ್ ಕ್ರೈ' ಪೋಲಿಷ್ ಭಾಷೆಯ ಪೋಲೆಂಡ್ ದೇಶದ ಪಿಯಾಟ್ರೋ ಡೊಮೆಲೆವಕ್ಕ ನಿರ್ದೇಶನದ ಚಿತ್ರ. ಸಿನಿಮಾದ ಕಥಾ ನಾಯಕಿ 'ಒಲಾ' 17 ರ ಹದಿಹರೆಯದ ಯುವತಿ. ತನ್ನ ಬದುಕನ್ನು ತಾನೇ ರೂಪಿಸಿಕೊಳ್ಳುವ ಆತ್ಮವಿಶ್ವಾಸದವಳು. ಅಪರಿಚಿತ ದೇಶವೊಂದಕ್ಕೆ ಟ್ರಿಪ್ ಹೊರಡುವ ಇವಳಿಗೆ ತನ್ನ ಅಪ್ಪ ಐರ್ಲೆಂಡ್ ದೇಶದಲ್ಲಿ ಮೃತನಾಗಿದ್ದಾನೆಂಬುದು ತಿಳಿಯುತ್ತದೆ. ಕುಟುಂಬದಿಂದ ದೂರವೇ ಇದ್ದ ಅಪ್ಪನ ಬಗ್ಗೆ ಆಕೆಗೆ ಮಮತೆ ಇಲ್ಲ. ಐರ್ಲೆಂಡ್‌ಗೆ ಹೋಗಿ ಅಪ್ಪನ ಮೃತದೇಹವನ್ನು ತನ್ನೂರಿಗೆ ತರುವ ಪ್ರಯತ್ನದಲ್ಲಿದ್ದ ಆಕೆಗೆ ಅದಕ್ಕಾಗಿ ತಗುಲುವ ವೆಚ್ಚ ಭರಿಸಲು ಸಾಧ್ಯವಿಲ್ಲವೆಂಬುದು ಮನದಟ್ಟಾಗುತ್ತದೆ. ಅಮ್ಮನ ಸಲಹೆಯಂತೆ ಅಪ್ಪ ಕೆಲಸಮಾಡುತ್ತಿದ್ದ ಕಂಪೆನಿ, ಆತನ ಗೆಳೆಯರು, ಗೆಳತಿಯರನ್ನು ಭೇಟಿಮಾಡಿ ಅಪ್ಪ ತನಗಾಗಿ ಕೂಡಿಟ್ಟ ಹಣವನ್ನು ಪಡೆಯುತ್ತಾಳೆ. ಸ್ವತಃ ತನಗೆ ಜನ್ಮನೀಡಿದ ಅಪ್ಪನ ಮೃತದೇಹವನ್ನು ನೋಡಿಯೂ ವಿಚಲಿತಗೊಳ್ಳದೇ ನಿರ್ಭೀತಿಯಿಂದ ಎಲ್ಲವನ್ನು ನಿಭಾಯಿಸುವ ಆಕೆಯ ಪಾತ್ರ ಸೊಗಸಾಗಿ ಮೂಡಿಬಂದಿದೆ.

'ದಿ ರೆಸ್ಟ್‌ಲೆಸ್' ಬೆಲ್ಜಿಯಂ ದೇಶದ ಫ್ರೆಂಚ್ ಭಾಷೆಯ ಚಿತ್ರ. ಒಬ್ಬರನ್ನೊಬ್ಬರು ಅಪಾರವಾಗಿ ಪ್ರೀತಿಸುವ ದಂತಿಗಳು, ಸದಾ ದುಡಿಮೆಯಲ್ಲಿ ತೊಡಗಿರುವ ಹೈಪರ್ ಆಕ್ಟೀವ್ ಪತಿ, ಮಾನಸಿಕ ಸಮಸ್ಯೆಯಿಂದ ಬಳಲುತ್ತಿದ್ದಾಗ, ಆತನಿಗೆ ಸೂಕ್ತ ಚಿಕಿತ್ಸೆ ಕೊಡಿಸುವ ಆಕೆಯ ಪ್ರಯತ್ನ ಕೊನೆಗೆ ಸಫಲವಾಗುತ್ತದೆ. ಕಥಾನಾಯಕಿಯ ಸಹನೆ, ಮಕ್ಕಳನ್ನು, ಗಂಡನನ್ನು ಆಕೆ ನಿಭಾಯಿಸುವ ರೀತಿ ಮನಮುಟ್ಟುವಂತಿದೆ.

'ಡ್ರೈವ್ ಮೈ ಕಾರ್' 'ಕಂಪಾರ್ಟ್‌ಮೆಂಟ್ ನಂ.6', 'ದಿ ಸ್ಟೋರಿ ಆಫ್ ಮೈ ವೈಫ್' ಹೆಣ್ಣಿನ ಸಹನೆಯನ್ನು ಕೌಟುಂಬಿಕ ಭದ್ರತೆಯ ಚೌಕಟ್ಟಿನಲ್ಲಿದ್ದರೂ ಆಕೆಯ ಸಹನೆಯನ್ನು ಪರೀಕ್ಷೆಗೊಡ್ಡುವ ಮತ್ತು ಅದನ್ನು ನಿಭಾಯಿಸುವಲ್ಲಿನ ಆಕೆಯ ಮನಸ್ಥಿತಿಯನ್ನು ಅಭಿವ್ಯಕ್ತಿಸುವ ಚಿತ್ರಗಳು. ದೇಶ, ಕಾಲ, ಸಂಸ್ಕೃತಿ ಯಾವುದೇ ಆದರೂ ಹೆಣ್ಣಿನ ಸ್ಥಾನಮಾನ ಪುರುಷ ಸಮಾಜದಲ್ಲಿ ಇನ್ನೂ ಸುಧಾರಿಸಿಲ್ಲವೆಂದೇ ಮೇಲಿನ ಸಿನಿಮಾಗಳು ಸಂದೇಶ ಸಾರುವಂತಿದೆ.

ಕ್ರಿಟಿಕ್ಸ್ ವೀಕ್ ವಿಭಾಗದಲ್ಲಿ 'ಐ ನೆವರ್ ಕ್ರೈ' ಹಾಗೂ 'ಆಸ್ಕರ್ ಸ್ಪೆಕ್ಟ್ರಮ್' ವಿಭಾಗದಲ್ಲಿ 'ದಿ ಬ್ಯಾಟಲ್ ಆಫ್ ಅಲ್ಜೀರಿಯಾಸ್', 'ವೇರ್ ಆರ್ ಯು ಗೋಯಿಂಗ್ ಐಡಾ', 'ಡ್ರೈ ಮೈ ಕಾರ್' ಪ್ರೇಕ್ಷಕರಿಂದ ಮೆಚ್ಚುಗೆ ಪಡೆದ ಚಿತ್ರಗಳು.

ಈ 13ನೇ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದ ವಿಶೇಷವೆಂದರೆ ನಿಗಧಿತ ವೇಳೆಯಲ್ಲಿ, ನಿಗಧಿ ಪಡಿಸಿದ ಸಿನಿಮಾಗಳು ಪ್ರದರ್ಶನಗೊಂಡಿದ್ದು, ಸ್ವಯಂ ಸೇವಕರು ನೀಡಿದ ಸಹಕಾರ ಹಿರಿಯ ನಾಗರಿಕರಿಗೆ ನೀಡಿದ ವಿಶೇಷ ಮುತುವರ್ಜಿಗಳು ಚಲನಚಿತ್ರೋತ್ಸವದ ಪಾಸಿಟೀವ್ ಅಂಶಗಳು.

ಒಟಿಟಿ ವೇದಿಕೆ ಮೂಲಕ ಮನೆಯಲ್ಲೇ ಕುಳಿತು ಮೊಬೈಲ್ ಮೂಲಕ ಸಿನಿಮಾ ವೀಕ್ಷಣೆಗೆ ಅವಕಾಶ ಮಾಡಿಕೊಟ್ಟಿದ್ದರೂ ಕೂಡ ಸಿನಿಮಾಸಕ್ತರು, ಹಿರಿ–ಕಿರಿಯ ನಟ–ನಟಿಯರು, ನಿರ್ದೇಶಕರು ಒರಾಯನ್ ಮಾಲ್‌ಗೆ ಬಂದೇ ತಮ್ಮ ನೆಚ್ಚಿನ ಸಿನಿಮಾವನ್ನು ವೀಕ್ಷಿಸುವ ಜೊತೆಗೆ ಚರ್ಚೆಗಳಲ್ಲಿ ಭಾಗವಹಿಸಿದ್ದರು.

ಇನ್ನು ಎಲ್ಲ ದಿನಗಳೂ ಕಿಕ್ಕಿರಿದ ಪ್ರೇಕ್ಷಕರಿಂದ ಚಲನಚಿತ್ರಮಂದಿರಗಳು ಯಶಸ್ವಿ ಪ್ರದರ್ಶನ ನೀಡಿದ್ದು ಪ್ರೇಕ್ಷಕರು ಚಿತ್ರಮಂದಿರದಿಂದ ದೂರವುಳಿದಿಲ್ಲ ಎಂಬುದನ್ನು ಚಲನಚಿತ್ರೋತ್ಸವವು ಸಾಬೀತು ಪಡಿಸಿತು. ■



Downloaded From: www.kpscvaani.com



# ದೇಗುಲಗಳಿಗೆ ಡಿಜಿಟಲ್ ಸ್ಪರ್ಶ

● ಪಿ.ವಿ. ಯೋಷಿೀಕಾ

**ಬೆರಳ ತುದಿಯಲ್ಲಿ ರಾಜ್ಯದ ದೇವಸ್ಥಾನಗಳ ಸಮಗ್ರ ಮಾಹಿತಿ ಸೇವೆಯನ್ನು ಒದಗಿಸುವ ಸಮಗ್ರ ದೇವಾಲಯ ನಿರ್ವಹಣಾ ವ್ಯವಸ್ಥೆ (ITMS)ಯನ್ನು ಮುಖ್ಯಮಂತ್ರಿಗಳು ಲೋಕಾರ್ಪಣೆ ಮಾಡಿದ್ದಾರೆ.**



ಇನ್ನು ಮುಂದೆ ದೇವಸ್ಥಾನದ ಇತಿಹಾಸ, ವಿಶೇಷತೆ, ವಿಶೇಷ ಆಚರಣೆ, ಉತ್ಸವಗಳು, ಪ್ರತಿಮೆಗಳು ಹಾಗೂ ಮೂರ್ತಿಗಳು, ದೇವಸ್ಥಾನದ ಕೆರೆ, ಗೋಪುರ, ವಾಸ್ತುಶಿಲ್ಪ, ಉಬ್ಬುಶಿಲ್ಪಗಳೂ ಒಳಗೊಂಡಂತೆ ಸಮಗ್ರ ಮಾಹಿತಿಯನ್ನು ತಿಳಿಯಲು ಮನೆಯಲ್ಲೇ ಕುಳಿತು ವರ್ಚುವಲ್ ಟೂರ್ ಮಾಡುವ ಮೂಲಕ ದೇಗುಲಗಳ ದರ್ಶನ ಮಾಡಬಹುದು.

ರಾಜ್ಯದ ಧಾರ್ಮಿಕ ದತ್ತಿ ಇಲಾಖೆ ವ್ಯಾಪ್ತಿಗೆ ಬರುವ ದೇವಸ್ಥಾನಗಳ ಸರ್ವತೋಮುಖ ನಿರ್ವಹಣೆಗೆ ಅನುಕೂಲವಾಗುವಂತೆ ಬೆಂಗಳೂರು ಹಾಗೂ ಚೆನ್ನೈನ ಎನ್‌ಐಸಿ ತಂಡದಿಂದ ಐಟಿಎಂಎಸ್‌ಗೆ (ಇಂಟಿಗ್ರೇಟೆಡ್ ಟೆಂಪಲ್ ಮ್ಯಾನೇಜ್‌ಮೆಂಟ್ ಸಿಸ್ಟಂ) ವೆಬ್‌ಸೈಟ್ ಅನ್ನು ನಿರ್ಮಾಣ ಮಾಡಿದೆ. ಇದು ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಗೆ ಒಳಪಡುವ ಅನುಸೂಚಿತ ಸಂಸ್ಥೆಗಳಲ್ಲಿ ದೇವಾಲಯದ ಸೇವೆಗಳ ಬಗ್ಗೆ ವಿವರ, ದೇವಾಲಯವಿರುವ ಸ್ಥಳದ ಬಗ್ಗೆ ಮಾಹಿತಿ, ಸ್ಥಿರಾಸ್ತಿಗಳ ವಿವರ, ಆನ್‌ಲೈನ್ ಮತ್ತು ಇ-ಸೇವೆಗಳ ಸೌಲಭ್ಯಗಳನ್ನೂ ಹೊಂದಿದೆ.

ಈ ಮಹತ್ವಾಕಾಂಕ್ಷಿ ವೆಬ್‌ಸೈಟ್‌ನಿಂದ ರಾಜ್ಯದ ದೇವಾಲಯಗಳ ಮಾಹಿತಿ ಒಂದೆಡೆ ದೊರೆಯುವುದರಿಂದ ದೇಶ-ವಿದೇಶಗಳಿಂದ ಬರುವ ಭಕ್ತಾದಿಗಳಿಗೆ ಅನುಕೂಲವಾಗಲಿದೆ. ದೇವಾಲಯಗಳ ಆದಾಯ ವೃದ್ಧಿಗೂ ಇದು ಪೂರಕವಾಗಲಿದೆ.

ದೇಶದ ಧಾರ್ಮಿಕ ಕ್ಷೇತ್ರಗಳನ್ನು ಸಮಗ್ರವಾಗಿ ಅಭಿವೃದ್ಧಿಗೊಳಿಸುವ ಪ್ರಧಾನಿ ನರೇಂದ್ರ ಮೋದಿಯವರ ಕನಸನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಧಾರ್ಮಿಕ ದತ್ತಿ ಇಲಾಖೆಯು ಅಂಗೈಯಲ್ಲಿ ದೇವಾಲಯ ದರ್ಶನ ಮಾಡಿಸುವ ಈ ಯೋಜನೆಯನ್ನು ಕೈಗೆತ್ತಿಕೊಂಡಿದೆ.

ಕರ್ನಾಟಕ ಧಾರ್ಮಿಕವಾಗಿಯೂ ಪ್ರಸಿದ್ಧಿ ಪಡೆದಿರುವ ದಕ್ಷಿಣ ಭಾರತದ ರಾಜ್ಯವಾಗಿದೆ. ನಾಡಿನಾದ್ಯಂತ ಹಲವಾರು ಪುಣ್ಯ ಕ್ಷೇತ್ರಗಳು, ತೀರ್ಥ ಕ್ಷೇತ್ರಗಳು ನೆಲೆಸಿರುವುದನ್ನು ಕಾಣಬಹುದು. ದೇವಾಲಯಗಳು ಪ್ರತಿಯೊಬ್ಬ ಹಿಂದೂವಿಗೆ ಒಂದು ಪವಿತ್ರವಾದ ಸ್ಥಳವಾಗಿದೆ. ಪ್ರತಿನಿತ್ಯ ಭಕ್ತಾದಿಗಳು, ಪ್ರವಾಸಿಗರು ದೇಶದ ಮೂಲೆ ಮೂಲೆಗಳಿಂದ ತಮ್ಮ ಇಷ್ಟ ದೇವರ, ದೇವತೆಯರ ದರುಶನ ಬಯಸಿ ಈ ರಾಜ್ಯಕ್ಕೆ ಭೇಟಿ ನೀಡುತ್ತಲೇ ಇರುತ್ತಾರೆ.



Downloaded From: www.kpscvaani.com



ದೇವಸ್ಥಾನಗಳು ನಮ್ಮ ಸಂಸ್ಕೃತಿಯ ಪ್ರತೀಕವಾಗಿದ್ದು, ಪ್ರತಿವರ್ಷ ಜಾತ್ರೆ, ಪುರಾಣ ಪ್ರವಚನ ಮೂಲಕ ಸಮಾಜಕ್ಕೆ ಸಂಸ್ಕಾರ ಕೊಡುತ್ತಿದೆ. ಆ ದಿಸೆಯಲ್ಲಿ ದೇವಸ್ಥಾನಗಳ ಧಾರ್ಮಿಕ ಕಾರ್ಯಗಳ ಚಟುವಟಿಕೆಗಳು ನಡೆಯುತ್ತಿವೆ. ಸಂಸ್ಕೃತಿ ಹಾಗೂ ಪರಂಪರೆಗಳು ಉಳಿಸಿಕೊಂಡು ಹೋಗುವ ದಿಸೆಯಲ್ಲಿ ದೇವಸ್ಥಾನಗಳನ್ನು ಉಳಿಸಿ ಬೆಳೆಸಿಕೊಳ್ಳುವಂತಹ ಕಾರ್ಯಕ್ಕೆ ರಾಜ್ಯ ಸರಕಾರ ಮುಂದಾಗಿದೆ. ಯಾತ್ರಾ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡಲು ರಾಜ್ಯ ಸರಕಾರ ದೈವ ಸಂಕಲ್ಪ ಯೋಜನೆ ಜಾರಿಗೆ ತಂದಿದೆ.

ಐಟಿಎಂಎಸ್ ಯೋಜನೆಯಿಂದ ಒಂದೇ ವೆಬ್‌ಸೈಟ್‌ನಲ್ಲಿ ಮುಜರಾಯಿ ಇಲಾಖೆ ವ್ಯಾಪ್ತಿಗೆ ಒಳಪಡುವ ಎಲ್ಲಾ ದೇವಾಲಯಗಳ ಸಮಗ್ರ ಮಾಹಿತಿಗಳು ಜನರ ಬೆರಳ ತುದಿಯಲ್ಲೇ ಲಭ್ಯವಿರಲಿವೆ. ಅಲ್ಲದೇ ದೇವಾಲಯಗಳಲ್ಲಿ ಲಭ್ಯವಿರುವ ಸೇವೆಗಳನ್ನು ಆನ್‌ಲೈನ್ ಮೂಲಕ ಬುಕ್ಕಿಂಗ್ ಮಾಡುವ ವ್ಯವಸ್ಥೆ ಇರಲಿದೆ. ದೇವಾಲಯಗಳಲ್ಲಿ ನಡೆಯುವ ಉತ್ಸವ, ಜಾತ್ರೆಗಳು, ಹಬ್ಬ ಹರಿದಿನಗಳ ವಿವರಗಳನ್ನು ಸಾರ್ವಜನಿಕರಿಗೆ/ಭಕ್ತಾದಿಗಳಿಗೆ ಪಡೆಯಲು ಅನುಕೂಲವಾಗುವಂತೆ ಐಟಿಎಂಎಸ್ ತಂತ್ರಾಂಶದಲ್ಲಿ ಸದರಿ ಮಾಹಿತಿಗಳನ್ನು ಅಪ್ ಲೋಡ್ ಮಾಡುವ ವ್ಯವಸ್ಥೆಯಿದೆ.

## ಪ್ರತಿ ವರ್ಷ 1000 ಸಿ ದರ್ಜೆಯ ದೇವಸ್ಥಾನಗಳ ಸಮಗ್ರ ಅಭಿವೃದ್ಧಿ

ದೇವಾಲಯಗಳು ನಮ್ಮೊಂದಿಗೆ ಭಾವನಾತ್ಮಕವಾದ ಸಂಬಂಧ ಹೊಂದಿವೆ. ರಾಜ್ಯದ ದೇವಾಲಯಗಳ ಅಭಿವೃದ್ಧಿಗೆ ವಿಶೇಷ ಕಾಳಜಿಯನ್ನು ಸರಕಾರ ವಹಿಸುತ್ತಿದೆ. ಕಡಿಮೆ ಆದಾಯವಿರುವ ಸಿ ದರ್ಜೆಯ ದೇವಸ್ಥಾನಗಳ ಅಭಿವೃದ್ಧಿ ಸರಿಯಾಗಿ ಆಗುತ್ತಿಲ್ಲ ಎಂದು ಸಾರ್ವಜನಿಕರಿಂದ ಹಲವಾರು ದೂರುಗಳು ಬಂದಿವೆ. ಹಾಗಾಗಿ ಈ ಆರೋಪವನ್ನು ಹೋಗಲಾಡಿಸಲು ಪ್ರತಿ ವರ್ಷ ಜಿಲ್ಲೆಯಲ್ಲಿ ಬೇರೆ ಬೇರೆ ದೇವಸ್ಥಾನಗಳನ್ನು ಅಭಿವೃದ್ಧಿಗೆ ಆಯ್ಕೆ ಮಾಡಿಕೊಳ್ಳುವ ಮೂಲಕ ಎಲ್ಲಾ ಸಿ ದರ್ಜೆಯ ದೇವಸ್ಥಾನಗಳನ್ನು ಹಂತ ಹಂತವಾಗಿ ಅಭಿವೃದ್ಧಿಗೊಳಿಸುವುದು ನಮ್ಮ ಗುರಿಯಾಗಿದೆ.

ಪ್ರಧಾನಿ ನರೇಂದ್ರ ಮೋದಿಯವರ ಡಿಜಿಟಲ್ ಇಂಡಿಯಾ ಕನಸನ್ನು ನನಸಾಗಿಸುವಲ್ಲಿ ಐಟಿಎಂಎಸ್ ವೆಬ್‌ಸೈಟ್ ಪಾತ್ರ ಮಹತ್ವದ್ದಾಗಿದೆ. ಐಟಿಎಂಎಸ್ ಹಾಗೂ ದೈವ ಸಂಕಲ್ಪ ಯೋಜನೆಗಳು ನಮ್ಮ ಇಲಾಖೆಯ ಮಹತ್ವಾಕಾಂಕ್ಷಿ ಯೋಜನೆಗಳಾಗಿವೆ. ದೇಶ ವಿದೇಶಗಳಿಂದ ರಾಜ್ಯದ ದೇವಾಲಯಗಳಿಗೆ ಬರುವ ಲಕ್ಷಾಂತರ ಭಕ್ತರಿಗೆ ಅತ್ಯುತ್ತಮ ಸೌಕರ್ಯ ಒದಗಿಸಲು ಇಲಾಖೆ ಬದ್ಧವಾಗಿದೆ. ದೇವಾಲಯಗಳ ಆಡಳಿತದಲ್ಲಿ ಪಾರದರ್ಶಕತೆ ತಂದು ಹಣಕಾಸಿನ ಸಂಪನ್ಮೂಲಗಳನ್ನು ಸಮರ್ಥವಾಗಿ ಬಳಕೆ ಮಾಡಿಕೊಳ್ಳುವಲ್ಲಿ ಐಟಿಎಂಎಸ್ ಯೋಜನೆ ಜಾರಿ ಮಹತ್ವದ ಹೆಜ್ಜೆಯಾಗಿದೆ.

**-ಶಶಿಕಲಾ ಜೊಲ್ಲೆ,**
ಧಾರ್ಮಿಕ ದತ್ತಿ, ಹಜ್ ಮತ್ತು ವಕ್ಫ್ ಸಚಿವರು

ದೇವಾಲಯಗಳ ಆಸ್ತಿಗಳ ವಿವರ ಮತ್ತು ಅವುಗಳ ವಹಿವಾಟಿನ ಮಾಹಿತಿಗಳೂ ಇರಲಿವೆ. ಜಗತ್ತಿನ ಯಾವುದೇ ಭಾಗದಿಂದ ಆನ್‌ಲೈನ್ ಮೂಲಕ ಕಾಣಿಕೆಯನ್ನು ಸಲ್ಲಿಸಬಹುದಾಗಿದೆ. ಸರ್ಕಾರದ ಭೂ ದಾಖಲೆಗಳ ದತ್ತಾಂಶದೊಂದಿಗೆ (Bhoomi etc) ಸಂಯೋಜನೆ ಮಾಡಬಹುದಾದ ತಾಂತ್ರಿಕತೆಯನ್ನು ಅಳವಡಿಸಲಾಗಿದೆ. ವಿವಿಧ ರೀತಿಯ MIS ವರದಿಗಳನ್ನು ಪಡೆಯಲು ಅವಕಾಶವಿರುತ್ತದೆ.

ರಾಜ್ಯದಲ್ಲಿ 207 ಎ ದರ್ಜೆ, 139 ಬಿ ದರ್ಜೆ ದೇಗುಲಗಳು ಮತ್ತು ಆದಾಯ ಕಡಿಮೆ ಇರುವ 34217 ಸಿ ದರ್ಜೆ ದೇಗುಲಗಳಿವೆ. ಈ ದೇವಾಲಯಗಳಲ್ಲಿ ಕೋಟ್ಯಂತರ ರೂ. ಬೆಲೆಬಾಳುವ ಚರ-ಸ್ಥಿರ ಆಸ್ತಿ, ಅತ್ಯಮೂಲ್ಯ ದಾಖಲೆಗಳ ರಕ್ಷಣೆ ಹಾಗೂ ಪಾರದರ್ಶಕ ನಿರ್ವಹಣೆ ದೃಷ್ಟಿಯಿಂದ ಧಾರ್ಮಿಕ ದತ್ತಿ ಇಲಾಖೆಯಲ್ಲಿ ಇ-ಆಫೀಸ್ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಲಾಗಿದೆ.

ಇತ್ತೀಚೆಗಷ್ಟೇ ಮುಖ್ಯಮಂತ್ರಿಗಳ ಗೃಹ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಈ ಎರಡೂ ಯೋಜನೆಗಳನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬೆರಳ ತುದಿಯಲ್ಲಿ ದೇವಸ್ಥಾನದ ಸಮಗ್ರ ಮಾಹಿತಿಯನ್ನು ಒದಗಿಸುವಂತಹ ಅತ್ಯಾಧುನಿಕ ಡಿಜಿಟಲ್ ವ್ಯವಸ್ಥೆ ಇಂದಿನ ಅಗತ್ಯವಾಗಿತ್ತು. ನಮ್ಮ ದೇವಾಲಯಗಳ ಬಗ್ಗೆ ಸಮಗ್ರ ಮಾಹಿತಿ ಹಾಗೂ ಅವುಗಳಲ್ಲಿ ದೊರೆಯುವ ಸೇವೆಗಳನ್ನು ಆನ್‌ಲೈನ್ ಮೂಲಕ ಬುಕ್ ಮಾಡುವ ವ್ಯವಸ್ಥೆ ಎಲ್ಲವೂ ಒಳಗೊಂಡಿರುವುದು ಸಂತಸದ ವಿಷಯವಾಗಿದೆ. ಈ ಎಲ್ಲಾ ಸೌಲಭ್ಯಗಳ ಜೊತೆಯಲ್ಲಿ ದೇವಸ್ಥಾನಗಳಿಗೆ ತೆರಳುವ ಕೆಎಸ್‌ಆರ್‌ಟಿಸಿ ಬಸ್‌ಗಳ ಮಾಹಿತಿಯನ್ನು ಅಳವಡಿಸುವಂತೆ ಸೂಚನೆ ನೀಡಲಾಗಿದೆ. ಪ್ರವಾಸದ ಯೋಜನೆಯನ್ನು ಸುಲಭವಾಗಿ ಮಾಡಬಹುದಾದ ಮಾಹಿತಿಗಳನ್ನು ಅಳವಡಿಸಿ, ದೇವಸ್ಥಾನಗಳ ಆಸ್ತಿ ಸಂರಕ್ಷಣೆಯ ಬಗ್ಗೆ ಹೆಚ್ಚಿನ ಕಾಳಜಿವಹಿಸುವಂತೆ ತಿಳಿಸಲಾಗಿದೆ. ಟೆಂಪಲ್ ಟೂರಿಸಂಗೆ ಹೆಚ್ಚಿನ ಅವಕಾಶವಿದೆ. ಈ ಅವಕಾಶಗಳ ಬಗ್ಗೆ ಹೆಚ್ಚಿನ ಪ್ರಚಾರ ನೀಡುವಂತೆ ಪ್ರವಾಸೋದ್ಯಮ ಇಲಾಖೆಗೂ ಸೂಚನೆ ನೀಡಲಾಗಿದೆ ಎಂದು ಅವರು ಹೇಳಿದರು.



Downloaded From: www.kpscvaani.com

**ವರ್ಚುಯಲ್ ಟೆಂಪಲ್ ಟೂರ್ :**

ಮನೆಯಲ್ಲಿದ್ದುಕೊಂಡೇ ದೇವಾಲಯಕ್ಕೆ ಪ್ರವಾಸ ಬೇಕಾದರೂ ಹೋಗಬಹುದು..! ಆದರೆ, ಇದು ವರ್ಚುಯಲ್ ಟೂರ್..! ಇನ್ನು ಮುಂದೆ ದೇವಸ್ಥಾನದ ಇತಿಹಾಸ, ವಿಶೇಷತೆ, ವಿಶೇಷ ಆಚರಣೆ, ಉತ್ಸವಗಳು, ಪ್ರತಿಮೆಗಳು ಹಾಗೂ ಮೂರ್ತಿಗಳು, ದೇವಸ್ಥಾನದ ಕೆರೆ, ಗೋಪುರ, ವಾಸ್ತುಶಿಲ್ಪ, ಉಬ್ಬುಶಿಲ್ಪಗಳೂ ಒಳಗೊಂಡಂತೆ ಸಮಗ್ರ ಮಾಹಿತಿಯನ್ನು ತಿಳಿಯಲು ವರ್ಚುಯಲ್ ಟೂರ್ ಮಾಡಬಹುದು. ಮುಜರಾಯಿ ಇಲಾಖೆಗೆ ಸೇರಿದ ದೇವಾಲಯಗಳಿಗೆ ಭೇಟಿ ನೀಡಲು ಸಾಧ್ಯವಾಗದವರು ತಾವು ಇರುವಲ್ಲಿಯೇ ವರ್ಚುಯಲ್ ಟೆಂಪಲ್ ಟೂರ್ ಮೂಲಕ ದೇವಾಲಯದ ದರ್ಶನ ಮಾಡಬಹುದಾಗಿದೆ. ಇದರಲ್ಲಿ 360 ಡಿಗ್ರಿ ಕೋನ್‌ನಲ್ಲಿ ದೇವಾಲಯಗಳ ಚಿತ್ರಣ ವೀಕ್ಷಿಸಬಹುದಾಗಿದೆ. ಅಲ್ಲಿನ ವಾಸ್ತುಶಿಲ್ಪ, ವಿನ್ಯಾಸದ ಶೈಲಿ, ಒಳ ಮತ್ತು ಹೊರಾಂಗಣ ಚಿತ್ರಣವನ್ನೂ ನೋಡಬಹುದಾಗಿದೆ. ಕೋವಿಡ್ ಹಿನ್ನೆಲೆಯಲ್ಲಿ ಜನ ಹೊರಗೆ ಹೋಗಲು ಹೆದರುವ ಈ ಸಂದರ್ಭದಲ್ಲಿ ಇಂಥದ್ದೊಂದು ವಿಶೇಷ ಯೋಜನೆಯನ್ನು ಆರಂಭಿಸಲಿದೆ. ದೇವರ ದರ್ಶನ, ಪೂಜಾ ಕೈಂಕರ್ಯ ಸೇರಿದಂತೆ ಧಾರ್ಮಿಕ ಸೇವೆಗಳಿಗೆ ಡಿಜಿಟಲ್ ಪ್ಲಾಟ್ ಫಾರಂ ಕಲ್ಪಿಸಲಾಗಿದೆ.

**ಧಾರ್ಮಿಕ ದತ್ತಿ ಇಲಾಖೆ ದೇಗುಲಗಳ ಪ್ರಗತಿಗೆ ದೈವ ಸಂಕಲ್ಪ ಯೋಜನೆ:**

ದೇವಸ್ಥಾನಗಳಿಗೆ ಅನುದಾನ ನೀಡುವ ಮೂಲಕ ಅವುಗಳ ಸರ್ವತೋಮುಖ ಅಭಿವೃದ್ಧಿಗೆ ಧಾರ್ಮಿಕ ದತ್ತಿ ಇಲಾಖೆ ದೈವ ಸಂಕಲ್ಪ ಯೋಜನೆ ಎಂದು ಹೆಸರಿಟ್ಟಿದೆ. ದೈವ ಸಂಕಲ್ಪ ಯೋಜನೆಯಡಿ ಈ ಬಾರಿ ಇಲಾಖೆಯ ಎ ಪಟ್ಟಿಯಲ್ಲಿರುವ ರಾಜ್ಯದ 25 ಆಯ್ದ ದೇಗುಲಗಳನ್ನು ಅಭಿವೃದ್ಧಿ ಪಡಿಸಲು 1,143.61 ಕೋಟಿ ರೂ ಅನುದಾನವನ್ನು ಸರ್ಕಾರ ಹಂಚಿಕೆ ಮಾಡಿದೆ.



ಚಾಮರಾಜನಗರ ಜಿಲ್ಲೆಯ ಮಲೈಮಹದೇಶ್ವರ ಸ್ವಾಮಿ ದೇಗುಲ–130, ಕುಕ್ಕೆ ಸುಬ್ರಹ್ಮಣ್ಯ ದೇವಾಲಯ–339.99, ಮುಕಾಂಬಿಕಾ ದೇವಾಲಯ– 102.42, ಚಾಮುಂಡೇಶ್ವರಿ ದೇವಾಲಯ ಮತ್ತು ಅರಮನೆ ಮುಜರಾಯಿ ದೇಗುಲಗಳು– 102.42, ಶ್ರೀಕಂಠೇಶ್ವರ ಸ್ವಾಮಿ ದೇವಾಲಯ– 137.93, ದುರ್ಗ ಪರಮೇಶ್ವರಿ ದೇವಾಲಯ– 11.31, ಘಾಟಿ ಸುಬ್ರಹ್ಮಣ್ಯ–18.86, ಬನಶಂಕರಿ ದೇವಸ್ಥಾನ–47.94, ಯಡಿಯೂರ ಸಿದ್ದಲಿಂಗೇಶ್ವರ– 42.84, ಉಡುಪಿಯ ಬ್ರಹ್ಮಲಿಂಗೇಶ್ವರ–5.90, ಸೌತಡ್ಕ ಮಹಾಗಣಪತಿ– 2.75, ಬ್ರಾಹ್ಮಿ ದುರ್ಗಾಪರಮೇಶ್ವರಿ– 1.42, ನಿಮಿಷಾಂಬಾ ದೇಗುಲ–23.46, ಕದ್ರಿ ಮಂಜುನಾಥ–4.53, ಮಿಂಟೋ ಆಂಜನೇಯ–4.99, ಜನಾರ್ಧನ ಮತ್ತು ಮಹಾಕಾಳಿ ದೇವಾಲಯ–8.54, ಕಬ್ಬಾಳಮ್ಮ ದೇವಸ್ಥಾನ–9.96, ಕೋಲಾರದ ಪ್ರಸನ್ನ ವೆಂಕಟಸ್ವಾಮಿ–8.18, ಶ್ರೀರಂಗಪಟ್ಟಣ ರಂಗನಾಥ ದೇಗುಲ– 13.63, ದೊಡ್ಡ ಗಣಪತಿ ಮತ್ತು ಮಲ್ಲಿಕಾರ್ಜುನ ಮಂದಿರ–11.82, ಮೇಲುಕೋಟೆ ಚಲುವನಾರಾಯಣಸ್ವಾಮಿ–5.51, ಮಹಾಲಿಂಗೇಶ್ವರ ದೇವಸ್ಥಾನ–3.79, ಚೆನ್ನಕೇಶವ ಸ್ವಾಮಿ ದೇವಸ್ಥಾನ–2.67 ಸೇರಿದಂತೆ, ದಕ್ಷಿಣ ಕರ್ನಾಟಕದ ದೇಗುಲಗಳಿಗೆ ಒಟ್ಟು 1,050 ಕೋಟಿ ರೂ. ನೀಡಲಾಗಿದೆ. ಉತ್ತರ ಕರ್ನಾಟಕದ ಸವದತ್ತಿಯ ರೇಣುಕಾ ಯಲ್ಲಮ್ಮ ದೇವಸ್ಥಾನಕ್ಕೆ 47.48, ಕೊಪ್ಪಳದ ಹುಲಿಗೆಮ್ಮ ದೇವಾಲಯಕ್ಕೆ 46.01 ರೂಗಳನ್ನು ದೈವ ಸಂಕಲ್ಪ ಯೋಜನೆಯಡಿ ಅನುದಾನ ನೀಡಲಾಗಿದೆ.

ದೇವಸ್ಥಾನಗಳಿಗೆ ಭೇಟಿ ನೀಡುವ ಭಕ್ತರಿಗೆ ಯಾವುದೇ ತೊಂದರೆ ಆಗದ ರೀತಿಯಲ್ಲಿ ಸೌಲಭ್ಯಗಳನ್ನು ಕಲ್ಪಿಸಬೇಕು. ದೇವಸ್ಥಾನಕ್ಕೆ ಅವರು ನೀಡುವ ಕಾಣಿಕೆಗಳು ಪಾರದರ್ಶಕತೆಯಿಂದ ಸದುಪಯೋಗ ಆಗಬೇಕು ಎನ್ನುವುದು ಮತ್ತು ಧಾರ್ಮಿಕ ಶ್ರದ್ಧಾ ಕೇಂದ್ರಗಳನ್ನು ಅಭಿವೃದ್ಧಿಗೊಳಿಸುವುದು ಕೂಡ ಸರಕಾರದ ಉದ್ದೇಶವಾಗಿದೆ.

**ಐಟಿಎಂಎಸ್ ಬಗ್ಗೆ ಮಾಹಿತಿ:**

ಒಂದೇ ವೆಬ್‌ಸೈಟ್‌ನಲ್ಲಿ ಇಲಾಖೆಯ ವ್ಯಾಪ್ತಿಗೆ ಒಳಪಡುವ ದೇವಾಲಯಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು (ದೇವಾಲಯಗಳ ಇತಿಹಾಸ, ಲಭ್ಯವಿರುವ ಸೇವೆ/ಪೂಜೆಗಳ ವಿವರ, ಲಭ್ಯವಿರುವ ಸೌಲಭ್ಯಗಳು, ಹತ್ತಿರದ ಸ್ಥಳಗಳು ಇತ್ಯಾದಿ ವಿವರಗಳು) ವೀಕ್ಷಿಸಬಹುದಾಗಿದೆ. ಜಗತ್ತಿನ ಯಾವುದೇ ಭಾಗದಿಂದ ಆನ್‌ಲೈನ್ ಮೂಲಕ ಕಾಣಿಕೆಯನ್ನು ಸಲ್ಲಿಸಬಹುದಾಗಿದೆ. ದೇವಾಲಯಗಳಲ್ಲಿ ಲಭ್ಯವಿರುವ ಸೇವೆಗಳನ್ನು ಆನ್‌ಲೈನ್ ಮೂಲಕ ಬುಕಿಂಗ್ ಮಾಡಬಹುದಾಗಿದೆ. ದೇವಾಲಯಗಳಲ್ಲಿ ನಡೆಯುವ ಉತ್ಸವ, ಜಾತ್ರೆಗಳು, ಹಬ್ಬ ಹರಿದಿನಗಳ ವಿವರಗಳನ್ನು ಸಾರ್ವಜನಿಕರಿಗೆ/ಭಕ್ತಾದಿಗಳಿಗೆ ಪಡೆಯಲು ಅನುಕೂಲವಾಗುವಂತೆ ಐಟಿಎಂಎಸ್ ತಂತ್ರಾಂಶದಲ್ಲಿ ಸದರಿ ಮಾಹಿತಿಗಳನ್ನು ಅಪ್‌ಲೋಡ್ ಮಾಡುವ ವ್ಯವಸ್ಥೆಯನ್ನು ಅಳವಡಿಸಲಾಗಿದೆ.

ಇಲಾಖೆಗೆ ಸೇರಿದ ಪ್ರತಿ ದೇವಾಲಯಕ್ಕೂ ವೆಬ್‌ಸೈಟ್ ರಚನೆಯಾಗಿದ್ದು, ಮೊಬೈಲ್ ಫೋನ್‌ನಲ್ಲಿಯೇ ಐಟಿಎಂಎಸ್ ಅನ್ನು ಕ್ಲಿಕ್ ಮಾಡಿ ತಮ್ಮ ಆಯ್ಕೆಯ ದೇವಾಲಯಗಳ ಮಾಹಿತಿಯನ್ನು ಪಡೆಯಬಹುದು. ಆನ್‌ಲೈನ್ ಮೂಲಕ ಬುಕ್ಕಿಂಗ್ ಮಾಡಿ ಹಣ ಪಾವತಿಸಿ ದೇವಾಲಯಗಳಲ್ಲಿ ನಡೆಯುವ ಅರ್ಚನೆ, ವಿಶೇಷ ಪೂಜೆ, ಸೇವೆಗಳನ್ನು ಮಾಡಿಸಬಹುದು. ಹಣ ಪಾವತಿ ಮಾಡಿದ ಕೂಡಲೇ ಎಸ್‌ಎಂಎಸ್ ಹಾಗೂ ಇ–ಮೇಲ್ ಮೂಲಕ ನೀವು ಮಾಡಿಸುತ್ತಿರುವ ಪೂಜೆ, ಸಮಯ ಸೇರಿ ಸಂಪೂರ್ಣ ವಿವರದೊಂದಿಗೆ ಸಂದೇಶ ರವಾನೆಯಾಗಲಿದೆ. ಇದೇ ಅಲ್ಲದೆ ದೇವಾಲಯ ತಲುಪಲು ಅನುಕೂಲವಾಗುವಂತೆ ಆನ್‌ಲೈನ್ ನಕ್ಷೆಯನ್ನೂ ಒದಗಿಸಲಿದ್ದು, ಇದಕ್ಕಾಗಿ ಜಿಐಎಸ್ (ಜಿಯೋಗ್ರಾಫಿಕ್ ಇನ್ಫಾರ್ಮೇಷನ್ ಸಿಸ್ಟಮ್) ವ್ಯವಸ್ಥೆ ಜಾರಿಗೊಳಿಸಲಾಗಿದೆ.



Downloaded From: www.kpscvaani.com



# ಕನ್ನಡ ಸಾರಸ್ವತ ಲೋಕದ ವಿಚಾರವಾದಿ ಕವಿ: ಚೆನ್ನವೀರ ಕಣವಿ

**ಸಮನ್ವಯ ಕವಿ ಎಂದೇ ಪ್ರಸಿದ್ಧರಾಗಿದ್ದ ಡಾ. ಚೆನ್ನವೀರ ಕಣವಿಯವರು ಕನ್ನಡದ ಪ್ರಖ್ಯಾತ ವಿದ್ವಾಂಸ ಮತ್ತು ಹೊಸಗನ್ನಡ ಕಾವ್ಯದ ಅಗ್ರಗಣ್ಯ ಕವಿಗಳಲ್ಲಿ ಒಬ್ಬರಾಗಿದ್ದರು.**

ಸಂಗಮೇಶ ಎನ್ ಜವಾದಿ

ಕಣವಿಯವರು ಕನ್ನಡ ಸಾಹಿತ್ಯ ಲೋಕದ ಅತ್ಯಂತ ಸರಳ, ಸಜ್ಜನಿಕೆಯ, ಸೌಮ್ಯ ಸ್ವಭಾವದ ಕವಿ. ಹೆಸರಾಯಿತು ಕರ್ನಾಟಕ, ಉಸಿರಾಗಲಿ ಕನ್ನಡವೆಂದು ಕರುನಾಡಿಗೆ ಕನ್ನಡದ ಕಂಪನ್ನು ಹರಸಿ, ಹಾರೈಸಿದ, ಕನ್ನಡ ನಾಡಿನ ಶ್ರೇಷ್ಠ ಚಿಂತಕರು. ವಿಚಾರವಾದಿ ಕವಿಗಳಾದ ಡಾ.ಚೆನ್ನವೀರ ಕಣವಿಯವರನ್ನು ಕಳೆದುಕೊಂಡು ಸಾರಸ್ವತ ಲೋಕ ಬಡವಾಗಿದೆ.

ಚೆಂಬೆಳಕಿನ ಕವಿ ಎಂದೇ ಖ್ಯಾತರಾಗಿದ್ದ ಚೆನ್ನವೀರ ಕಣವಿಯವರು ಗದಗ ಜಿಲ್ಲೆಯ ಹೊಂಬಳ ಗ್ರಾಮದಲ್ಲಿ 1928 ರ ಜೂನ್ 28 ರಂದು ತಂದೆ ಸಕ್ಕರೆಪ್ಪ ಮತ್ತು ತಾಯಿ ಪಾರ್ವತವ್ವರ ದಂಪತಿಗಳ ಮಗನಾಗಿ ಜನಿಸಿದರು. ಮಾಧ್ಯಮಿಕ ಹಾಗು ಪ್ರೌಢ ಶಿಕ್ಷಣವನ್ನು ಧಾರವಾಡದ ಮುರುಘಾಮಠದಲ್ಲಿ ಮುಗಿಸಿ, ಕರ್ನಾಟಕ ಕಾಲೇಜ್‌ನಲ್ಲಿ ಬಿಎ ಶಿಕ್ಷಣ ಪಡೆದರು. ಮುಲ್ಕಿ ಪರೀಕ್ಷೆಯಲ್ಲಿ ಧಾರವಾಡ ಕೇಂದ್ರಕ್ಕೆ ಪ್ರಥಮ ಸ್ಥಾನ ಪಡೆದ ಹೆಗ್ಗಳಿಕೆ ಇವರದಾಗಿತ್ತು.

1952 ರಲ್ಲಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಎಂ.ಎ ಸ್ನಾತಕೋತ್ತರ ಪದವಿ ಪಡೆದರು. ಕಾಲೇಜ್ ವಿದ್ಯಾರ್ಥಿಯಾಗಿದ್ದಾಗಲೇ ಕಣವಿಯವರು ಕವನ ಬರೆಯಲಾರಂಭಿಸಿದ್ದರು. ಅವರ ಕವನಗಳನ್ನು ನೋಡಿ ಡಿವಿಜಿ ಅವರು ಮೆಚ್ಚುಗೆ ವ್ಯಕ್ತಪಡಿಸಿ ಶುಭ ಹಾರೈಸಿದ್ದರಂತೆ. ಹೀಗೆ ಕಾಲೇಜು ದಿನಗಳಲ್ಲಿ ಶಿಕ್ಷಣದ ಜೊತೆಗೆ ಸಾಹಿತ್ಯದ ಗೀಳು ಹಚ್ಚಿಕೊಂಡಿದ್ದ ಕಣವಿಯವರು ಧಾರವಾಡ ವಿಶ್ವವಿದ್ಯಾಲಯದ ಪ್ರಸಾರಾಂಗ ವಿಭಾಗದ ಕಾರ್ಯದರ್ಶಿ ಹುದ್ದೆಗೆ ಆಯ್ಕೆಯಾಗುವ ಮೂಲಕ ತಮ್ಮ ಕಾಯಕ ವೃತ್ತಿ ಜೀವನವನ್ನು ಆರಂಭಿಸಿದರು. ಮುಂದೆ 1956 ರ ವೇಳೆಗೆ ಅದೇ ವಿಭಾಗದ ನಿರ್ದೇಶಕರಾಗಿ 1983 ರವರೆಗೆ ಸೇವೆ ಸಲ್ಲಿಸಿದರು.

ಕವಿಯಾಗಿ, ಸಾಹಿತಿಯಾಗಿ, ಧಾರವಾಡ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ, ಪ್ರಸಾರಂಗದ ನಿರ್ದೇಶಕರಾಗಿ ಕಾರ್ಯನಿರ್ವಹಿಸಿ ಎಲ್ಲರಿಂದಲೂ ಸೈ ಎನಿಸಿಕೊಂಡರು. ಧಾರವಾಡದ ಮಾಳಮಡ್ಡಿಯಲ್ಲಿ ಕಾವ್ಯಾನುಭವ ಮಂಪಟ ಆರಂಭಿಸಿ ಕವಿತಾ ವಾಚನ ಅಭಿಯಾನ ನಡೆಸಿದ್ದ ಹಿರಿಯ ಕವಿ ಎಂಬ ಖ್ಯಾತಿಗೆ ಪಾತ್ರರಾಗುವ ಮೂಲಕ ಕನ್ನಡ ಸಾಹಿತ್ಯ ಚಿಂತನ ಲೋಕಕ್ಕೆ ಹೊಸ ಬೆಳಕು ನೀಡಿದರು.

ಕಣವಿ ಅವರು ಬರೆದ 'ಅಪರಾವತಾರ'ದಂಥ ಕವಿತೆಗಳಲ್ಲಿ ರಾಜಕೀಯ ಭ್ರಷ್ಟಾಚಾರದ ಬಗ್ಗೆ ಕಠೋರವಾದ ವ್ಯಂಗ್ಯ ಕಂಡು ಬರುತ್ತದೆ ನಿಜ. ಆದರೆ ರಾಷ್ಟ್ರಜೀವನದಲ್ಲಿ ಯೋಗ್ಯವಾದ ರಾಜಕೀಯ ನಡೆಗಳನ್ನು ಒಪ್ಪಿ, ಮುಜುಗರವಿಲ್ಲದೆ ಆ ಬಗ್ಗೆ ಹೃದಯ ಬಿಚ್ಚಿ ಅವರು ಬರೆದರು. 'ನೆಹರೂ ನಿವೃತ್ತರಾಗುವುದಿಲ್ಲ' ಎಂಬ ಅಡಿಗರ ಕವಿತೆಯೊಂದಿಗೆ ಕಣವಿ ಅವರ 'ರಾಷ್ಟ್ರದ ಕರೆ', 'ಇಂದೇ ಸೀಮೋಲ್ಲಂಘನ', 'ನೆಹರೂ ಶ್ರದ್ಧಾಂಜಲಿ', 'ಭಾರತ ಸುಪುತ್ರನ ಕೊನೆಯ ಬಯಕೆ' ಮೊದಲಾದ ಪದ್ಯಗಳನ್ನು ಹೋಲಿಸಿ ನೋಡಿದಾಗ ಈ



Downloaded From: www.kpscvaani.com

ಇಬ್ಬರು ಕವಿಗಳ ಮನೋಧರ್ಮದ ಅಂತರ ಸ್ಪಷ್ಟವಾಗುತ್ತದೆ. ಭಾಷೆಯ ದೃಷ್ಟಿಯಿಂದ, ಲಯದ ದೃಷ್ಟಿಯಿಂದ, ಅನುಭವವನ್ನು ನಿಷ್ಠುರವಾಗಿ ಶೋಧಿಸಬೇಕೆಂಬ ದೃಷ್ಟಿಯಿಂದ ಇವರು ನವ್ಯವನ್ನು ಒಪ್ಪಿಕೊಂಡರು ಎನ್ನಬಹುದು.

ಹೀಗೆ ಬದುಕು, ಸ್ನೇಹ, ಪ್ರೀತಿ, ವಾತ್ಸಲ್ಯ, ಸಹನಶೀಲತೆ ಮೊದಲಾದ ಮೌಲ್ಯಗಳನ್ನು ಆಶ್ರಯಿಸಿ ಸಹ್ಯವಾಗಿಸುವುದೇ ನಿಜವಾದ ಸಾಹಿತ್ಯ. ಇದನ್ನು ಸಾಧ್ಯವಾಗಿಸಿದವರು ಕಣವಿಯವರು. ಅವರ ನಿಲುವು ಸಹ ಅದೇ ಆಗಿತ್ತು. ಇನ್ನು ಇವರು ತಮ್ಮ ಕಹಿಯನ್ನು ಸಾಮಾಜಿಕ ನೆಲೆಯಲ್ಲಿ ವ್ಯಕ್ತ ಪಡಿಸುತಿದ್ದರು. ಆದರೆ ವೈಯಕ್ತಿಕ ನೆಲೆಯಲ್ಲಿ ಮನಸ್ಸು ಕಹಿ ಮಾಡಿಕೊಳ್ಳದೆ ತಾಳ್ಮೆಯಿಂದ ಪ್ರದರ್ಶಿಸಿದ್ದಾರೆ. ದಾಂಪತ್ಯ, ಮಕ್ಕಳು, ನಿಸರ್ಗವನ್ನು ಕುರಿತು, ಅಷ್ಟೇಕೆ ಪ್ರಾಣಿ-ಪಕ್ಷಿಗಳನ್ನು ಕುರಿತು ಕಣವಿ ಅವರು ಬರೆದಿರುವ ಕವಿತೆಗಳನ್ನು ನೋಡಿದರೆ, ಅವರ ವ್ಯಕ್ತಿತ್ವದ ಮೂಲದ್ರವ್ಯಗಳಾದ ನಿಸರ್ಗಪ್ರಿಯತೆ, ಅನುಭಾವಿಕ ದೃಷ್ಟಿ, ಮಾನವೀಯತೆ, ಮೌಲ್ಯಾಧಾರಿತ ಜೀವನದ ಪ್ರಜ್ಞೆ ಇತ್ಯಾದಿಗಳು ನಮಗೆ ಅರ್ಥವಾಗುತ್ತವೆ.

ಇನ್ನು ಕವಿತೆ ಜನತೆಗೆ ತಲುಪುವುದು ಅಗತ್ಯ ಎಂದು ಬಯಸುತ್ತಾ ಬಂದ ಕವಿಗಳಲ್ಲಿ ಕಣವಿ ಕೂಡ ಒಬ್ಬರು. ಅವರ ಗಂಭೀರ ಕಾವ್ಯದ ಆಸಕ್ತಿಗಳೇ ಸರಳ ರೂಪದಲ್ಲಿ ಅಭಿವ್ಯಕ್ತಿ ಪಡೆಯುತ್ತವೆ. ಕಾವ್ಯಬಂಧದಲ್ಲಿ ಅರ್ಥಪುಷ್ಟಿಗಿಂತ ನಾದ ಮಾಧುರ್ಯಕ್ಕೆ ಹೆಚ್ಚು ಒತ್ತು ಬೀಳುತ್ತದೆ. ಗೀತೆಗಳ ಸ್ವರೂಪವೇ ಅದು. ಭಾವ ಮತ್ತು ನಾದಗಳಲ್ಲಿ ರಮಿಸಲಾಗದ ಮನಸ್ಸು ಪಾಯಶಃ ಗೀತೆಗಳ ರಚನೆಗೆ ಸಮರ್ಥವಾಗುವುದಿಲ್ಲ.

ಕಣವಿ ಅವರ ಗೀತೆಗಳಲ್ಲಿ ಸಹಜ ಕವಿಯೊಬ್ಬ ಬರೆದಾಗ ಮಾತ್ರ ಕಾಣಿಸಿಕೊಳ್ಳಬಲ್ಲ ಅನೇಕ ಕಾವ್ಯಾತ್ಮಕ ಹೊಳಹುಗಳು ವಿಶೇಷವಾಗಿ ಕಂಡು ಬರುತ್ತವೆ. ಸಾಮಾಜಿಕತೆ ಇವರ ಸಾಹಿತ್ಯದಲ್ಲಿ ಗುರುತಿಸಲೇಬೇಕಾದ ಬಹುಮುಖ್ಯ ಅಂಶವಾಗಿದೆ. ಸಮಾಜದ ದೋಷಗಳನ್ನು ಕವಿ ತಮ್ಮ ಸಾಹಿತ್ಯದಲ್ಲಿ ನಿರ್ದಾಕ್ಷಿಣ್ಯವಾಗಿ ಟೀಕೆ ಮಾಡುತ್ತಾರೆ. ಕಣವಿ ಅವರ ಕಾವ್ಯದಲ್ಲಿ ರಮ್ಯ ಮನೋಧರ್ಮ, ಆದರ್ಶಪ್ರಿಯತೆ, ವ್ಯಕ್ತಿತ್ವ ನಿರ್ಮಾಣದ ಹಂಬಲಗಳು ವಿಶೇಷವಾಗಿ ಕಂಡು ಬರುತ್ತವೆ. 1949 ರಲ್ಲಿ ಪ್ರಕಟವಾದ 'ಕಾವ್ಯಾಕ್ಷಿ', 1959 ರಲ್ಲಿ ಪ್ರಕಟವಾದ 'ಭಾವಜೀವಿ' ಸಂಗ್ರಹಗಳಲ್ಲಿ ಈ ಎಲ್ಲ ಅಂಶಗಳನ್ನೂ ಗುರುತಿಸಬಹುದು.

1960 ರಲ್ಲಿ 'ಮಣ್ಣಿನ ಮೆರವಣಿಗೆ' ಕಾವ್ಯ ಸಂಕಲನ ಪ್ರಕಟವಾಗುವ ವೇಳೆಗೆ ಕಣವಿಯವರ 'ಕಾವ್ಯವ್ಯಕ್ತಿತ್ವ' ಸಾಕಷ್ಟು ಮಾತಾಗಿತ್ತು. ನಿಸರ್ಗಪ್ರಿಯತೆ ಈ ಸಂಗ್ರಹದಲ್ಲಿ ಕೊಂಚ ಕಡಿಮೆಯಾಗಿ, ವಿಡಂಬನೆಯ ಜೋರು ಹೆಚ್ಚಾಗಿದೆ. ಆದರೆ ಬಹು ಮುಖ್ಯ ಅಂಶವೆಂದರೆ ಕೆಲವು ಮೂಲಭೂತವಾದ ಮತ್ತು ಸರ್ವಕಾಲಿಕ ಎನ್ನಬಹುದಾದ ವಸ್ತುಗಳನ್ನು ತಮ್ಮ ವೈಯಕ್ತಿಕ ಅನುಭವದ ನೆಲೆಯಲ್ಲಿ ಕಣವಿ ಅವರು ಆಳವಾಗಿ ಶೋಧಿಸಿದ್ದಾರೆ. ಕಣವಿಯವರ ಹಲವು ಕವಿತೆಯಲ್ಲಿ ನಾಗರಿಕತೆಯ ಇತಿಹಾಸವನ್ನೇ ಅವರು ಪ್ರತಿಮೀಕರಿಸಿದ್ದಾರೆ. ಇಡೀ ಕವಿತೆ ಕಾಲದೊಂದಿಗೆ ಸಾಗಿ ಬಂದ ಮನುಷ್ಯನ ಗತಿಶೀಲವಾದ ಬದುಕಿನ ಹೋರಾಟದ ಅಭಿವ್ಯಕ್ತಿಯಾಗಿದೆ. ಜೊತೆಗೆ ಸಾಹಿತ್ಯ ಪರವಾದ ಅರ್ಥವೂ ಕವಿತೆಗಳಲ್ಲಿ ಎದ್ದು ಕಾಣುತ್ತದೆ. ಅವರ ವೈಯಕ್ತಿಕ ಕಾವ್ಯದ ಮತ್ತು ಬದುಕಿನ ನಿಲುವುಗಳನ್ನು ಸಹ ಕಣವಿ ಅವರು ವ್ಯಕ್ತಪಡಿಸಿದ್ದಾರೆ.

### ಪ್ರಶಸ್ತಿ, ಪುರಸ್ಕಾರ ಮತ್ತು ಗೌರವ ಪ್ರಶಸ್ತಿಗಳು:

ಕಣವಿಯವರು ಸಾಹಿತ್ಯ ಮತ್ತು ಸಮಾಜಿಕ ಕ್ಷೇತ್ರದಲ್ಲಿ ಸಲ್ಲಿಸಿದ ನಿಸ್ವಾರ್ಥ ಸೇವೆಯನ್ನು ಪರಿಗಣಿಸಿ 1981ರಲ್ಲಿ ಜೀವಧ್ವನಿ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದುಕೊಂಡಿದ್ದಾರೆ. ರಾಜ್ಯೋತ್ಸವ ಪ್ರಶಸ್ತಿ, ಭಾರತ ಸರಕಾರದ ಮಾನವ ಸಂಪನ್ಮೂಲ ಇಲಾಖೆಯ ಸಂಸ್ಕೃತಿ ವಿಭಾಗದ ಎಮರಿಟಿಸ್ ಫೆಲೋಷಿಪ್ (1996– 98), ಪಂಪ ಪ್ರಶಸ್ತಿ, ಬಸವ ಗುರು ಕಾರುಣ್ಯ ಪ್ರಶಸ್ತಿ, ನಾಡೋಜ ಪ್ರಶಸ್ತಿ, ಕರ್ನಾಟಕ ಕವಿರತ್ನ ಪ್ರಶಸ್ತಿ, ಅನಕೃ ನಿರ್ಮಾಣ ಪ್ರಶಸ್ತಿ, 2020ರಲ್ಲಿ ಕರ್ನಾಟಕದ ಕೇಂದ್ರೀಯ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಸೇರಿದಂತೆ ಹತ್ತು ಹಲವು ಪ್ರಶಸ್ತಿಗಳು ಕಣವಿಯವರ ಸಾಧನೆಗೆ ಸಿಕ್ಕ ಗೌರವಗಳಾಗಿವೆ. ಜೊತೆಗೆ 1996 ರಲ್ಲಿ ಹಾಸನದಲ್ಲಿ ನಡೆದ 65ನೇ ಕನ್ನಡ ಸಾಹಿತ್ಯ ಸಮ್ಮೇಳನ ಅಧ್ಯಕ್ಷತೆ ಹಾಗೂ 2008 ರ ಆಳ್ವಾಸ್ ನುಡಿಸಿರಿ ಸಮ್ಮೇಳನಾಧ್ಯಕ್ಷತೆಯ ಸ್ಥಾನವನ್ನು ಅಲಂಕರಿಸಿ, ಸಾಹಿತ್ಯ ಲೋಕವನ್ನು ಬೆಳಗಿದ್ದಾರೆ.

ಒಟ್ಟಾರೆ ಹೇಳಬೇಕೆಂದರೆ ಕಣವಿಯವರು ತಮ್ಮ ಸುದೀರ್ಘ ಸಾಹಿತ್ಯ ಬದುಕಿನಲ್ಲಿ ಶ್ರೇಷ್ಠವಾದ ಅನೇಕ ಕವಿತೆಗಳನ್ನು ಬರೆದು ಆಧುನಿಕ ಕನ್ನಡ ಕಾವ್ಯಲೋಕಕ್ಕೆ ತನ್ನದೇ ಆದ ವಿಶಿಷ್ಟ ಕೊಡುಗೆ ನೀಡಿದ್ದಾರೆ. ಇವರು ವಿಶೇಷವಾಗಿ ಜನಸಾಮಾನ್ಯರ ಆರಾಧಕ ಕವಿ ಎಂದರೆ ತಪ್ಪಾಗಲಾರದು. ಅವರ ಕಾವ್ಯದಲ್ಲಿ ನಾವು ಕೇಳುವುದು ಜನವಾಣಿ. ಹೀಗಾಗಿಯೇ ಕಣವಿಯವರು ಸಮಾಧಾನದ ಧ್ವನಿಯಾಗಿ, ಇದ್ದುದರಲ್ಲೇ ಬದುಕನ್ನು ಹಿತವಾಗಿಸಿಕೊಂಡು ನೆಮ್ಮದಿಯಿಂದ ಜೀವನ ಸಾಗಿಸಿದವರು. ಬದುಕಿನ ಅಗತ್ಯವನ್ನು ಅವರ ಕಾವ್ಯದ ಮೂಲಕ ಒತ್ತಿ ಹೇಳುವ ಕೆಲಸ ಮಾಡಿದ್ದಾರೆ. ಅದಮ್ಯ ಜೀವನ ಪ್ರೀತಿಯ ಕಣವಿ ಅವರ ಕಾವ್ಯ, ನೋವು ನಲಿವುಗಳನ್ನು ಸಮತೂಕದಲ್ಲಿ ಧಾರಣ ಮಾಡಿದೆ. ಸಮಾಧಾನವೇ ಅವರ ಸ್ಥಾಯಿ ಅಂತಃಸತ್ವವಾಗಿದೆ. ಅಬ್ಬರವಿಲ್ಲದ ಮೆಲುದನಿ ಮತ್ತು ಕವಿಯ ಕಾವ್ಯಜೀವನದ ಮಾಗುವಿಕೆ ಅವರ ಕವಿತೆಗಳಲ್ಲಿ ಕಾಣಬಹುದು. ಮಳಲು ಹಾಡುತ್ತದೆ, ಹಲ್ಲಿಗಳ ಸಹವಾಸ, ಕನಸಿನ ಗೊಮ್ಮಟ, ಎನ್ನುವ ಇವರ ಕವಿತೆಗಳನ್ನು ಈಗಿನ ಕಾಲದ ಮಕ್ಕಳು ಓದಿ, ತಿಳಿದುಕೊಳ್ಳುವ ಅವಶ್ಯಕತೆ ಇದೆ.

ಹಾಗೆಯೇ ಅಂತರಂಗದ ಗತಿಗೆ ಹೊರ ಜಗತ್ತಿನ ಸಂಗತಿಗಳು ಅಪ್ರಯತ್ನಕವೆಂಬಷ್ಟು ಸಹಜವಾಗಿ, ಪ್ರತೀಕವಾಗಿ ನಿಲ್ಲುವ ಬಗೆಯಿಂದ ಇವು ಸಹಜ ಕಾವ್ಯದ ಮಾದರಿಗಳಾಗಿವೆ. ಕಷ್ಟಸಾಧ್ಯವಾದ ಈ ಕಾವ್ಯ ಬಂಧವನ್ನು ವಶಪಡಿಸಿಕೊಂಡ ಕಣವಿ ಚೆಲುವಾದ ಅನೇಕ ಸುನೀತಗಳನ್ನು ರಚಿಸಿದ್ದಾರೆ. ಈ ದೃಷ್ಟಿಯಿಂದ ತಮ್ಮ ಸುನೀತಗಳ ಮೂಲಕ ಕಣವಿಯವರು ಕನ್ನಡ ನಾಡಿಗೆ ತಮ್ಮದೇ ಆದ ಗತ ವೈಭವದ ಸಾಹಿತ್ಯ ಕಾವ್ಯಕಾಣಿಕೆಯನ್ನು ನೀಡಿದ್ದಾರೆಂದು ನಿಸ್ಸಂಶಯವಾಗಿ ಎದೆ ತಟ್ಟಿ ಹೇಳಬಹುದಾಗಿದೆ.

ಸಜ್ಜನಿಕೆಯ ಸಾಕಾರಮೂರ್ತಿ ಚೆನ್ನವೀರ ಕಣವಿಯವರು ಮೃದು ಮಾತುಗಳಿಂದಲೇ ಎಲ್ಲರ ಮನಸ್ಸುಗಳನ್ನು ಗೆಲ್ಲುತ್ತಿದ್ದರು. ಕಣವಿ ಅವರು ಸಾಹಿತ್ಯ ಲೋಕಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದು ಮರೆಯಲಾಗದು. ಇಂದು ಚೆಂಬೆಳಕಿನ ಭಾವಜೀವಿ ಡಾ.ಚೆನ್ನವೀರ ಕಣವಿಯರು ಕಣ್ಮರೆಯಾಗಿದ್ದರೂ ಸಹ ಅವರ ಅಮೂಲ್ಯವಾದ ಸಾಹಿತ್ಯ ಕೃತಿಗಳ ಮೂಲಕ ನಮ್ಮ ಮಧ್ಯದಲ್ಲಿ ಜೀವಂತವಾಗಿ ಇದ್ದಾರೆ.



Downloaded From: www.kpscvaani.com





**ಮೈಸೂರು ಸಂಸ್ಥಾನದ ಕೆಲವು ಆಡಳಿತಗಳು ಇತರೆ ಸಂಸ್ಥಾನಗಳಿಗೂ ಮಾದರಿಯಾಗಿದೆ ಎಂದು ಅಂಬೇಡ್ಕರ್ ಅವರು ಪ್ರತಿಪಾದಿಸಿದ್ದರು.**

ಅರುಣ್ ಜೋಳದ ಕೂಡ್ಲಿಗಿ

# ಅಂಬೇಡ್ಕರ್ ಮೆಚ್ಚಿದ್ದ ಮೈಸೂರು ಮಾದರಿ

ಡಾ ಬಿ.ಆರ್.ಅಂಬೇಡ್ಕರ್ ಅವರ ಕರ್ನಾಟಕದ ಜತೆಗಿನ ನಂಟನ್ನು ಗುರುತಿಸುವುದಕ್ಕೆ ಹಲವು ಆಯಾಮಗಳಿವೆ. ಸ್ವತಃ ಅಂಬೇಡ್ಕರ್ ಕರ್ನಾಟಕದ ಜತೆ ಹೊಂದಿದ ನಂಟು ಒಂದಾದರೆ, ಕರ್ನಾಟಕದ ಜನತೆ ಅಂಬೇಡ್ಕರ್ ಜತೆ ಗುರುತಿಸಿಕೊಂಡ ನಂಟು ಮತ್ತೊಂದು ನೆಲೆ. ಈ ರಾಜ್ಯಕ್ಕೆ 'ಕರ್ನಾಟಕ'ವೆಂದು ನಾಮಕರಣವಾದದ್ದು 1973 ರಲ್ಲಿ. ಹಾಗಾಗಿ ಅಂಬೇಡ್ಕರ್ ಒಡನಾಡಿದ್ದು ಮೈಸೂರು ರಾಜ್ಯದ ಜತೆ.

ಅಂಬೇಡ್ಕರರಿಗೆ ಮೈಸೂರು ಸಂಸ್ಥಾನದ ಬಗೆಗೆ ಸದಭಿಪ್ರಾಯವಿತ್ತು. ಅನೇಕ ಕಡೆಗಳಲ್ಲಿ ಮೈಸೂರು ರಾಜ್ಯವನ್ನು ಉಲ್ಲೇಖಿಸುತ್ತಾರೆ. ದಕ್ಷಿಣ ಮಹಾರಾಷ್ಟ್ರದ ದಲಿತ ಪರಿಷತ್ತಿನ ಮೊದಲ ಸಭೆ ಮಾಣಗಾಂವ್ ಸಂಸ್ಥಾನಿನ ಕಾಗಲ್‌ನಲ್ಲಿ 1920 ಮಾರ್ಚ್ 21/22ಕ್ಕೆ ಜರುಗುತ್ತದೆ. (ಸಂಪುಟ: 19 ಪುಟ:3) ಈ ಸಭೆಯ ಮೊದಲ ದಿನ ಯುಗಾದಿಯಾದರೂ ಐದು ಸಾವಿರದಷ್ಟು ಜನ ಸೇರುತ್ತಾರೆ. ಈ ಸಭೆಯ ನಂತರ ಕೆಲವು ನಿರ್ಣಯಗಳಾದವು. ಅದರಲ್ಲಿ



Downloaded From: www.kpscvaani.com

ಮೈಸೂರು ಸಂಸ್ಥಾನದಲ್ಲಿ ಬ್ರಾಹ್ಮಣೇತರರು ಹಾಗೂ ದಲಿತ ವಿದ್ಯಾರ್ಥಿಗಳಿಗೆ ಮಧ್ಯಮ ಹಾಗೂ ಉಚ್ಚ ಶಿಕ್ಷಣಕ್ಕಾಗಿ ಕೊಡುವ ಶಿಷ್ಯವೇತನದ ಮಾದರಿಯಲ್ಲಿ ಬ್ರಿಟಿಷ್ ರಾಜ್ಯದಲ್ಲಿ ದಲಿತರಿಗೆ ಶಿಷ್ಯವೇತನ ನೀಡಬೇಕು ಎಂದು ವಿನಂತಿಸಲಾಗಿತ್ತು.

ಸೊಲ್ಲಾಪುರ ಜಿಲ್ಲೆಯ ತಡ್‌ವಾಲ್‌ನಲ್ಲಿ (ಡೋಕಿ) 23ನೇ ಫೆಬ್ರವರಿ 1941 ರಂದು ಮಹರ್ ಮತ್ತು ಮಾಂಗ್ ವತನ್‌ದಾರರುಗಳ ಸಮ್ಮೇಳನವನ್ನು ನಡೆಸಲಾಯಿತು. ಸುಮಾರು 3000 ಜನರಿದ್ದ ಆ ಸಭೆಯ ಅಧ್ಯಕ್ಷತೆಯನ್ನು ಡಾ.ಬಿ.ಆರ್.ಅಂಬೇಡ್ಕರ್ ಅವರು ವಹಿಸಿ ಮಾತನಾಡುವಾಗ, 'ಹರಿಜನರ ಸ್ಥಾನಮಾನವನ್ನು ಅಭಿವೃದ್ಧಿ ಮಾಡುವ ನಿಟ್ಟಿನತ್ತ ಗಾಂಧಿಯವರ ಪರಿಶ್ರಮ ಏನೇನೂ ಸಾಲದು. ಮೈಸೂರು ಮತ್ತು ಬರೋಡಾದಲ್ಲಿ ಹರಿಜನರನ್ನು ನಡೆಸಿಕೊಳ್ಳುತ್ತಿರುವ ರೀತಿ ಪ್ರಶಂಸನೀಯ. ಮೈಸೂರು ಸಂಸ್ಥಾನದಲ್ಲಿ ದಲಿತರ ಪ್ರತಿಯೊಂದು ಕುಟುಂಬಕ್ಕೆ 7 ಎಕರೆ ಜಮೀನು ಕೊಟ್ಟು ಅವರನ್ನು ಬಲಪಡಿಸುತ್ತಿದ್ದಾರೆ. (ಸಂಪುಟ: 18–ಪುಟ:446) ಈ ಯೋಜನೆ ಎಲ್ಲಾ ಸಂಸ್ಥಾನಗಳಿಗೂ ಮಾದರಿಯಾಗಬೇಕು' ಎಂದು ಅಂಬೇಡ್ಕರ್ ಅಂದು ಮೈಸೂರ್ ಮಾದರಿಯನ್ನು ಮೆಚ್ಚುತ್ತಾರೆ.

ಸಂವಿಧಾನದ ಕರಡು ಸಮಿತಿಯ ಚರ್ಚೆಯಲ್ಲಿ 1949 ರ ಜೂನ್ 15 ರಂದು ಅಂಬೇಡ್ಕರ್ ಅವರು 270 ನೆಯ ವಿಧಿಯಲ್ಲಿ ಭಾರತೀಯ ಸಂಸ್ಥಾನಗಳ ಆಸ್ತಿಪಾಸ್ತಿಗಳು ಮತ್ತು ಹೊಣೆಗಾರಿಕೆಗಳ ಬಗ್ಗೆ ಯಾವುದೇ ಉಲ್ಲೇಖವಿಲ್ಲ ಎನ್ನುವುದಕ್ಕೆ ಅಂಬೇಡ್ಕರ್ ಅವರು ಮೈಸೂರನ್ನು ಉಲ್ಲೇಖಿಸುತ್ತಾರೆ. ತಮ್ಮ ಭೂಭಾಗದಲ್ಲಿ ಅಥವಾ ಇನ್ನಾವುದೇ ವಿಷಯದಲ್ಲಿ ಯಾವ ಮಾರ್ಪಾಡೂ ಆಗದೇ ಅವು ಇದ್ದ ಹಾಗೆಯೇ ಸಂವಿಧಾನಕ್ಕೊಳಪಡಲಿರುವ ಭಾರತೀಯ ಸಂಸ್ಥಾನಗಳಲ್ಲಿ ಮೈಸೂರು ಸಂಸ್ಥಾನವೂ ಒಂದೆನ್ನುತ್ತಾರೆ. ಅದು ಈಗ ಸ್ವತಂತ್ರ ಸಂಸ್ಥಾನವಾಗಿದ್ದು ಯಾವುದೇ ಮಾರ್ಪಾಡಿಗೊಳಗಾಗದೇ ಸಂವಿಧಾನಕ್ಕೊಳಗೊಳ್ಳುವುದಿದೆ (ಸಂಪುಟ:13–ಪುಟ:8) ಎಂದು ಸಭೆಗೆ ಉತ್ತರಿಸುತ್ತಾರೆ.

ಹಿಂದೂ ಕೋಡ್ ಬಿಲ್‌ಗೆ

> **ಮೈಸೂರು ಸಂಸ್ಥಾನದಲ್ಲಿ ಈಗಾಗಲೇ ಇದ್ದ ಪ್ರಗತಿಪರ ಮಹಿಳಾ ಕಾನೂನುಗಳನ್ನು ಸಮರ್ಥಿಸಿಕೊಳ್ಳುವ ಅವರು, ಸ್ತ್ರೀಯರ ಆಸ್ತಿಯ ಹಕ್ಕಿಗೆ ಸಂಬಂಧಿಸಿದಂತೆ ಮೈಸೂರು ಸಂಸ್ಥಾನಕ್ಕೆ ತನ್ನದೇ ಆದ ಹಿಂದೂ ನಿಯಮಾವಳಿ ಇತ್ತು. ಅದು ಇತರ ಪ್ರಾಂತ್ಯಗಳಲ್ಲಿದ್ದ ಕಾನೂನಿಗಿಂತ ಸಾಕಷ್ಟು ಭಿನ್ನವಾಗಿತ್ತು ಎಂದು ಹೇಳಿದ್ದಾರೆ.**

ಸಂಬಂಧಿಸಿದ ಚರ್ಚೆ ನಡೆಯುವಾಗಲೂ ಅಂಬೇಡ್ಕರ್ ಮೈಸೂರು ರಾಜ್ಯವನ್ನು ಪ್ರಸ್ತಾಪಿಸಿ, ಸ್ತ್ರೀಯರ ಆಸ್ತಿಯ ಹಕ್ಕಿಗೆ ಸಂಬಂಧಿಸಿದಂತೆ ಮೈಸೂರು ಸಂಸ್ಥಾನಕ್ಕೆ ತನ್ನದೇ ಆದ ಹಿಂದೂ ನಿಯಮಾವಳಿ ಇತ್ತು. ಹಾಗೂ ಅದು ಬ್ರಿಟಿಷ್ ಭಾರತದ ಇತರ ಪ್ರಾಂತ್ಯಗಳಲ್ಲಿದ್ದ ಕಾನೂನಿಗಿಂತ ಸಾಕಷ್ಟು ಭಿನ್ನವಾಗಿತ್ತು. ಈಗ ಮೈಸೂರು ಸಹ ಭಾರತದ ಅವಿಭಾಜ್ಯ ಅಂಗವಾಗಿದೆ. ಆದುದರಿಂದ 1950ರ ಜನವರಿ 26ರಂದು ಗಣರಾಜ್ಯ ಉದ್ಘಾಟನೆಯಾದಾಗ, ಹಿಂದೂ ಕಾನೂನಿನ ವಿವಿಧ ಪದ್ಧತಿಗಳನ್ನು ನಾವು ಎದುರಿಸಬೇಕಾಗುತ್ತದೆ (ಸಂಪುಟ:14–ಪುಟ:738) ಎಂದು ಸಭೆಗೆ ಮೈಸೂರು ಸಂಸ್ಥಾನದಲ್ಲಿ ಈಗಾಗಲೆ ಇದ್ದ ಪ್ರಗತಿಪರ ಮಹಿಳಾ ಕಾನೂನುಗಳನ್ನು ಸಮರ್ಥಿಸಿಕೊಳ್ಳುತ್ತಾರೆ.

ಮುಂಬೈನ ಕೊಲಾಬಾದಲ್ಲಿರುವ ಜೈರಾಜ್ ಹೌಸಲ್ಲಿ 1955 ರ ಆಗಸ್ಟ್ 25 ರಂದು ಆಯೋಜಿಸಿದ್ದ ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟದ ಕಾರ್ಯಕಾರಿಣಿ ಸಭೆಯಲ್ಲಿ ಮೈಸೂರು ರಾಜ್ಯದಿಂದ ಮೂವರು ಪ್ರತಿನಿಧಿಗಳು ಪಾಲ್ಗೊಂಡಿರುತ್ತಾರೆ. (ಸಂಪುಟ:17–ಪುಟ:388) ಅದರಲ್ಲಿ ಜೆ.ಸಿ.ಆದಿಮುಗಂ, ಸಿ.ಎಂ.ಆರ್ಮುಗಂ, ವಿ.ದೊರೆಸ್ವಾಮಿ ಈ ಒಕ್ಕೂಟದ ಅಖಿಲಭಾರತ ಮಟ್ಟದ ಮಾನ್ಯತೆಯನ್ನು ಮುಂದುವರಿಸಬೇಕೆಂದು ಚುನಾವಣ ಆಯೋಗಕ್ಕೆ ಮಾಡಿದ ಮನವಿಯನ್ನು ಮೈಸೂರಿನ ವಿ ದೊರೆಸ್ವಾಮಿ ಅನುಮೋದಿಸುತ್ತಾರೆ.

ರಂಗೂನಿನಲ್ಲಿ 1954 ರ ಡಿಸೆಂಬರ್ 4 ರಂದು ನಡೆದ ಅಂತಾರಾಷ್ಟ್ರೀಯ ಬೌದ್ಧ ಸಮ್ಮೇಳನದಲ್ಲಿ 'ಭಾರತದಲ್ಲಿ ಬೌದ್ಧ ಚಳವಳಿ ಒಂದು ನೀಲನಕ್ಷೆ' ಎನ್ನುವ ಪತ್ರಿಕೆ ಮಂಡಿಸುತ್ತಾರೆ. ಈ ಭಾಷಣದ ಎರಡನೆ ಭಾಗದಲ್ಲಿ ದಕ್ಷಿಣ ಭಾರತದಲ್ಲಿ ಬೌದ್ಧ ಧರ್ಮದ ಸ್ಥಿತಿಗತಿಗಳ ಕುರಿತು ಚರ್ಚಿಸುತ್ತಾರೆ. ಅದರಲ್ಲಿ 'ಮೈಸೂರು ರಾಜ್ಯದ ರಾಜಪ್ರಮುಖರಾದ ಮಹಾರಾಜರನ್ನು 1954 ರ ಜುಲೈ 8 ರಂದು ಬೇಟಿ ಮಾಡಿ, ನಮ್ಮ ಕೆಲಸಗಳಿಗಾಗಿ ಒಂದು ಕೇಂದ್ರವನ್ನು ನಿರ್ಮಿಸಲು ತುಂಡು ಭೂಮಿಯನ್ನು ದಾನವಾಗಿ ಕೇಳಿದೆ, ಆಗ ಮಹಾರಾಜರು 5 ಎಕರೆ ಭೂಮಿಯನ್ನು ದಾನವಾಗಿ ಕೊಡಲು ಒಪ್ಪಿದರು' ಎನ್ನುವುದನ್ನು ಉಲ್ಲೇಖಿಸುತ್ತಾರೆ.

ಅಂಬೇಡ್ಕರ್ ಕರ್ನಾಟಕದ ಇಬ್ಬರು ವ್ಯಕ್ತಿಗಳನ್ನು ಅವರ ದಿಟ್ಟತನದ ಕಾರಣಕ್ಕೆ ಉಲ್ಲೇಖಿಸುತ್ತಾರೆ. ಅದರಲ್ಲಿ ಮೊದಲನೆಯವರು 12 ನೇ ಶತಮಾನದ ಬಸವಣ್ಣ, ಎರಡನೆಯವರು 17–18 ನೇ ಶತಮಾನದ ಟಿಪ್ಪು ಸುಲ್ತಾನ. ಈ ಇಬ್ಬರ ಬಗೆಗಿನ ಅಂಬೇಡ್ಕರ್ ಅವರ ನಿಲುವು ಚಾರಿತ್ರಿಕವಾಗಿ ಮಹತ್ವದ್ದು. ಟಿಪ್ಪು ಆಡಳಿತದ ಬಗ್ಗೆ ಇತಿಹಾಸಕಾರರ ಹೇಳಿಕೆಗಳನ್ನು ಉಲ್ಲೇಖಿಸುವ ಅಂಬೇಡ್ಕರ್ ಅವರು 'ಈತನ ಸರಕಾರ ಮನಸ್ವೇಚ್ಛೆಯ ಹಾಗೂ ಕಟ್ಟುನಿಟ್ಟಾದ ಕಾಯ್ದೆಗಳನ್ನು ಒಳಗೊಂಡಿದ್ದರೂ ಇದೊಂದು ಸಮರ್ಥ ನಿರಂಕುಶ ಪ್ರಭುತ್ವವಾಗಿತ್ತು. ಇದು ತನ್ನ ಭವಿಷ್ಯದ ಹೆಗ್ಗಳಿಕೆಗೆ ಕಾರಣವಾಗುವ ಪ್ರಜೆಗಳಿಗೆ ಸಂರಕ್ಷಿಸುತಿತ್ತೇ ಹೊರತು ಶೋಷಿಸುತ್ತಿರಲಿಲ್ಲ ಹಾಗೂ ತನ್ನ ವೈರಿಗಳನ್ನು ಮಾತ್ರ ಕ್ರೂರ ರೀತಿಯಿಂದ ನಡೆಸಿಕೊಳ್ಳುತ್ತಿತ್ತು. (ಸಂಪುಟ:11–ಪುಟ:64) ಎನ್ನುತ್ತಾರೆ. ಹೀಗೆ ಅಂಬೇಡ್ಕರ್ ಹಲವು ಕಡೆಗಳಲ್ಲಿ ಮೈಸೂರು ರಾಜ್ಯದ ಮಾದರಿಯನ್ನು ಮೆಚ್ಚುತ್ತಾರೆ. ಅಂತೆಯೇ ಇತರೆ ರಾಜ್ಯಗಳು ಅನುಸರಿಸಬಹುದಾದ ಅನುಕರಣೀಯ ಮಾದರಿಗಳನ್ನು ಸೂಚಿಸುತ್ತಾರೆ.

■



Downloaded From: www.kpscvaani.com

# ದೇಶಿ ಒಲಿಂಪಿಕ್ಸ್

# ಖೇಲೋ ಇಂಡಿಯಾ

## ಕ್ರೀಡಾಕೂಟಕ್ಕೆ ಸಿದ್ಧತೆ

KHELO INDIA
UNIVERSITY GAMES

ಶೀಲಾ ಕಾಂತಿಕೆರೆ

**ಬೆಂಗಳೂರಿನಲ್ಲಿ ಏಪ್ರಿಲ್ 24 ರಿಂದ ಮತ್ತು ಮೇ 3ರ ತನಕ ಜರುಗಲಿರುವ ಖೇಲೋ ಇಂಡಿಯಾ ಯುನಿವರ್ಸಿಟಿ ಗೇಮ್ಸ್-2021 ಗೆ ರಾಜ್ಯ ಸರಕಾರವು ಸಕಲ ಸಿದ್ಧತೆಯಲ್ಲಿ ತೊಡಗಿದೆ.**

**ಬೆಂ**ಗಳೂರಿನ ಕಂಠೀರವ ಕ್ರೀಡಾಂಗಣಕ್ಕೆ ಈಗ ಹೊಸ ಕಳೆ. ಹತ್ತಾರು ಅಂತಾರಾಷ್ಟ್ರೀಯ ಕ್ರೀಡಾಪಟುಗಳನ್ನು, ನೂರಾರು ರಾಷ್ಟ್ರೀಯ ಅಥ್ಲೀಟ್‌ಗಳನ್ನು ದೇಶಕ್ಕೆ ಮತ್ತು ರಾಜ್ಯಕ್ಕೆ ಕೊಡುಗೆ ನೀಡಿದ ಕಂಠೀರವದ ಓಟದ ಟ್ರ್ಯಾಕ್ ಈಗ ಹೊಸ ಸಿಂಥೆಟಿಕ್ ಹೊದಿಕೆಯೊಂದಿಗೆ ಮಿನುಗುತ್ತಿದೆ.

ಎರಡು ವರ್ಷಗಳ ಹಿಂದೆ ಆರಂಭಗೊಂಡ ನವೀಕರಣ ಕಾಮಗಾರಿ ಈಚೆಗೆ ಪೂರ್ಣಗೊಂಡಿದ್ದು ವಿದೇಶದಿಂದ ಆಮದು ಮಾಡಿ ಅಳವಡಿಸಿರುವ ಸಿಂಥೆಟಿಕ್‌ನಿಂದ ಸಿದ್ಧಗೊಂಡಿರುವ ಟ್ರ್ಯಾಕ್ ಪ್ರತಿಭೆಗಳ 'ಸ್ಪೈಕ್' ಸ್ಪರ್ಶಕ್ಕಾಗಿ ಕಾಯುತ್ತಿದೆ. ಬಹುದೊಡ್ಡ ಉಡುಗೊರೆಯೊಂದಿಗೆ ನವೀಕೃತ ಟ್ರ್ಯಾಕ್‌ನ ಉದ್ಘಾಟನೆ ಮಾಡಲು ಸರ್ಕಾರವೂ ಸಜ್ಜಾಗಿದೆ.

ಹೌದು, ಬೆಂಗಳೂರಿನಲ್ಲಿ ಏಪ್ರಿಲ್–ಮೇ ತಿಂಗಳಲ್ಲಿ ನಡೆಯಲಿರುವ ಈ ಬಾರಿಯ ಖೇಲೋ ಇಂಡಿಯಾ ವಿಶ್ವವಿದ್ಯಾಲಯ ಕ್ರೀಡಾಕೂಟದ (ಖೇಲೋ ಇಂಡಿಯಾ ಯುನಿವರ್ಸಿಟಿ ಗೇಮ್ಸ್–ಕೆಐಯುಜಿ) ಪ್ರಮುಖ ತಾಣ ಕಂಠೀರವ ಕ್ರೀಡಾಂಗಣ. ಇಲ್ಲಿ ಒಳ ಮತ್ತು ಹೊರಾಂಗಣಗಳಲ್ಲಿ ವೈವಿಧ್ಯಮಯ ಸ್ಪರ್ಧೆಗಳು ನಡೆಯಲಿವೆ. ಇದಕ್ಕಾಗಿ ಸಿದ್ಧತೆಗಳು ಭರದಿಂದ ನಡೆಯುತ್ತಿದೆ. ಇದು ಇಲ್ಲಿನ ಕ್ರೀಡಾಕ್ಷೇತ್ರದಲ್ಲಿ ಹೊಸ ನಿರೀಕ್ಷೆಗಳನ್ನು ಮೂಡಿಸಿ, ವಿಶ್ವವಿದ್ಯಾಲಯಗಳ ಪ್ರತಿಭೆಗಳ ಅನಾವರಣಕ್ಕೆ ಭರವಸೆಯ ಅಲೆ ಎಬ್ಬಿಸಿದೆ.

ದೇಶದ ವಿಶ್ವವಿದ್ಯಾಲಯಗಳ ಕ್ರೀಡಾಪಟುಗಳ ಪ್ರತಿಭೆಯನ್ನು ಒರೆಗೆ ಹಚ್ಚುವ ಕೂಟ ಕೆಐಯುಜಿ. ವಿಶ್ವವಿದ್ಯಾಲಯಗಳ ನಡುವಿನ ಸ್ಪರ್ಧೆಗಳಿಗೆ ಸಾಕಷ್ಟು ಕೂಟಗಳು ಈಗಾಗಲೇ ಇವೆ.



Downloaded From: www.kpscvaani.com




ರಾಜ್ಯಮಟ್ಟದ ಅಂತರ ವಿವಿ ಸ್ಪರ್ಧೆಗಳು, ವಲಯ ಮಟ್ಟದ ಸ್ಪರ್ಧೆಗಳು, ಅಖಿಲ ಭಾರತ ಮಟ್ಟದ ಸ್ಪರ್ಧೆಗಳು ಮತ್ತು ಅಂತಾರಾಷ್ಟ್ರೀಯ ಮಟ್ಟದ ಸ್ಪರ್ಧೆಗಳು ಅನೇಕ ವರ್ಷಗಳಿಂದ ನಡೆಯುತ್ತಿವೆ. ಆದರೆ ಕೆಐಯುಜಿ ಕಡಿಮೆ ಅವಧಿಯಲ್ಲೇ ವಿಶ್ವವಿದ್ಯಾಲಯಗಳ ಕ್ರೀಡಾಕ್ಷೇತ್ರದಲ್ಲಿ ಸಂಚಲನ ಮೂಡಿಸುವಲ್ಲಿ ಯಶಸ್ವಿಯಾಗಿದೆ. ವಿಶ್ವವಿದ್ಯಾಲಯಗಳಿಗೆ ಸಂಬಂಧಿಸಿದ ಇತರ ಕೂಟಗಳು ಪ್ರತಿಯೊಂದು ವಿಭಾಗದಲ್ಲೂ ಪ್ರತ್ಯೇಕ ಪ್ರತ್ಯೇಕವಾಗಿರುತ್ತವೆ. ಉದಾಹರಣೆಗೆ ಅಥ್ಲೆಟಿಕ್ಸ್ ಒಮ್ಮೆ, ಒಂದು ಕಡೆ ನಡೆದರೆ ಕೊಕ್ಕೊ, ಕಬಡ್ಡಿ, ವಾಲಿಬಾಲ್, ಬ್ಯಾಸ್ಕೆಟ್‌ಬಾಲ್, ಟೆನಿಸ್, ಬ್ಯಾಡ್ಮಿಂಟನ್, ಬಾಲ್ ಬ್ಯಾಡ್ಮಿಂಟನ್ ಹೀಗೆ ಎಲ್ಲ ಸ್ಪರ್ಧೆಗಳೂ ವರ್ಗೀಕರಣಗೊಳ್ಳುತ್ತವೆ.

ಆದರೆ ಖೇಲೋ ಇಂಡಿಯಾದಲ್ಲಿ ಇವೆಲ್ಲವೂ ಒಂದೇ ಸೂರಿನಡಿಯಲ್ಲಿ ನಡೆಯುತ್ತವೆ. ಅಥ್ಲೆಟಿಕ್ಸ್‌ನಿಂದ ಶುರು ಮಾಡಿ ಶೂಟಿಂಗ್, ಬಾಕ್ಸಿಂಗ್, ಫೆನ್ಸಿಂಗ್ ವರೆಗಿನ 20 ಸ್ಪರ್ಧೆಗಳು ಕೂಟದಲ್ಲಿರುತ್ತದೆ. ಆದ್ದರಿಂದ ಇದು ದೇಶಕ್ಕೆ ಸಂಬಂಧಿಸಿದ ಒಲಿಂಪಿಕ್ಸ್ ಇದ್ದಂತೆ. ಹೀಗಾಗಿ ಕ್ರೀಡಾಕೂಟದ ಸಂದರ್ಭದಲ್ಲಿ ಬೆಂಗಳೂರು ಒಲಿಂಪಿಕ್ ಗ್ರಾಮವಾಗಿ ಮಾರ್ಪಡಲಿದೆ.

## ಸರ್ಕಾರದಿಂದ ಸಕಲ ಸಿದ್ಧತೆ

ಕೆಐಯುಜಿ ಆತಿಥ್ಯಕ್ಕೆ ರಾಜ್ಯ ಸರ್ಕಾರ ಸಿದ್ಧವಾಗಿದೆ. ಕ್ರೀಡಾಕೂಟಕ್ಕೆ ಸಂಬಂಧಿಸಿದ ಸಭೆಗಳು ಈಗಾಗಲೇ ನಡೆದಿದ್ದು ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳನ್ನು ನೋಡಲ್ ಅಧಿಕಾರಿಗಳನ್ನಾಗಿ ಮಾಡಲಾಗಿದೆ. ಆಹಾರ ಮತ್ತು ಸಾಂಸ್ಕೃತಿಕ ಸೇರಿದಂತೆ ಐದು ಸಮಿತಿಗಳನ್ನೂ ರಚಿಸಲಾಗಿದೆ.

ಕ್ರೀಡಾಕೂಟಕ್ಕೆ 50 ಕೋಟಿ ರೂಗಳಿಗೂ ಹೆಚ್ಚು ವೆಚ್ಚವನ್ನು ಅಂದಾಜಿಸಲಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಈ ಮೊತ್ತವನ್ನು ಭರಿಸಲಿವೆ. ಈ ಎರಡೂ ಸರ್ಕಾರಗಳು ಕ್ರಮವಾಗಿ 19 ಕೋಟಿ ಮತ್ತು 10 ಕೋಟಿ ರೂ ನೀಡಲು ಒಪ್ಪಿಕೊಂಡಿವೆ. ಸರ್ಕಾರದ ಎಲ್ಲ ಇಲಾಖೆಗಳ ಸಹಯೋಗದಲ್ಲಿ ವ್ಯವಸ್ಥೆ ಮತ್ತು ಸೌಲಭ್ಯಗಳನ್ನು ಕಲ್ಪಿಸಲು ಸೂಚಿಸಲಾಗಿದೆ. ಹೀಗಾಗಿ ಕ್ರೀಡಾಕೂಟ ಯಶಸ್ವಿಯಾಗುವ ಭರವಸೆಯಲ್ಲಿದ್ದಾರೆ ಸರ್ಕಾರದ ಪ್ರತಿನಿಧಿಗಳು.

**ಖೇಲೋ ಇಂಡಿಯಾ : ಏನು, ಯಾಕೆ?**

ಕ್ರೀಡೆ, ಆರೋಗ್ಯ ಮತ್ತು ಯುವಜನತೆಯ ಶಕ್ತಿಸಂಪನ್ಮೂಲ ಕ್ರೋಢೀಕರಣದ ವಿಷಯದಲ್ಲಿ ಹೆಚ್ಚು ಆಸಕ್ತರಾಗಿರುವ ಪ್ರಧಾನಮಂತ್ರಿ ನರೇಂದ್ರ ಮೋದಿ ಮತ್ತು ಕೇಂದ್ರ ಸರ್ಕಾರದ ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆಯ ಕನಸಿನ ಕೂಸು ಈ ಖೇಲೋ ಇಂಡಿಯಾ.

ಕ್ರೀಡಾ ಪ್ರತಿಭೆಗಳನ್ನು ಪ್ರೋತ್ಸಾಹಿಸುವುದರ ಜೊತೆಯಲ್ಲಿ ಕ್ರೀಡೆಗೆ ಸಂಬಂಧಿಸಿದ ಸೌಲಭ್ಯಗಳನ್ನು ದೇಶದ ಉದ್ದಗಲಕ್ಕೂ ಅಭಿವೃದ್ಧಿಪಡಿಸುವ ಉದ್ದೇಶದೊಂದಿಗೆ ಆರಂಭಗೊಂಡ ಯೋಜನೆ ಖೇಲೋ ಇಂಡಿಯಾ. ಮೊದಲು ಶಾಲಾ ಮಟ್ಟದಲ್ಲಿ, ಖೇಲೋ ಇಂಡಿಯಾ ಸ್ಕೂಲ್ ಗೇಮ್ಸ್ ಎಂಬ ಹೆಸರಿನಲ್ಲಿ ನಡೆದ ಕೂಟ ನಂತರ ಯುವ ಜನತೆಯ ನಡುವಿಗೆ ಖೇಲೋ ಇಂಡಿಯಾ ಯೂತ್ ಗೇಮ್ಸ್ ಎಂಬ ಹೆಸರಿನಲ್ಲಿ ಬಂತು. ಅನಂತರ ವಿಶ್ವವಿದ್ಯಾಲಯಗಳವರೆಗೂ ವಿಸ್ತರಣೆಯಾಯಿತು.

2018ರ ಜನವರಿ–ಫೆಬ್ರವರಿಯಲ್ಲಿ ದೆಹಲಿಯಲ್ಲಿ 16 ವಿಭಾಗಗಳಲ್ಲಿ ಸ್ಪರ್ಧೆಗಳನ್ನು ಒಳಗೊಂಡ ಸ್ಕೂಲ್ ಗೇಮ್ಸ್‌ನೊಂದಿಗೆ ಖೇಲೋ ಇಂಡಿಯ ಯೋಜನೆ ಅನಾವರಣಗೊಂಡಿತು.



Downloaded From: www.kpscvaani.com

2019ರಲ್ಲಿ ಮಹಾರಾಷ್ಟ್ರದಲ್ಲಿ ಖೇಲೋ ಇಂಡಿಯಾ ಯೂತ್ ಗೇಮ್ಸ್ ನಡೆಯಿತು. ಮುಂದಿನ ವರ್ಷದ ಯೂತ್ ಗೇಮ್ಸ್‌ಗೆ ಅಸ್ಸಾಂ ಆತಿಥ್ಯ ವಹಿಸಿತು. ಅದೇ ವರ್ಷ ದೆಹಲಿಯಲ್ಲಿ ಕೆಐಯುಜಿಗೆ ಚಾಲನೆ ಸಿಕ್ಕಿತು. ಆದರೆ ಎರಡನೇ ಆವೃತ್ತಿಯನ್ನು ಆಯೋಜಿಸುವ ಚಿಂತನೆ ನಡೆಸುವಷ್ಟರಲ್ಲಿ ಕೋವಿಡ್ ಮಹಾಮಾರಿ ಕಾಡಿತು. ಕಳೆದ ವರ್ಷ ನಡೆಯಬೇಕಾಗಿದ್ದ ಕೂಟವನ್ನು ಒಂದು ವರ್ಷ ಮುಂದೂಡಲಾಯಿತು. ಇದೀಗ ಅದಕ್ಕೆ ಕಾಲ ಕೂಡಿದೆ.

ಕ್ರೀಡಾಂಗಣಗಳ ಅಭಿವೃದ್ಧಿ, ರಾಷ್ಟ್ರೀಯ, ಪ್ರಾದೇಶಿಕ ಮತ್ತು ರಾಜ್ಯಗಳ ಕ್ರೀಡಾ ಸಂಸ್ಥೆಗಳಿಗೆ ಪ್ರೋತ್ಸಾಹ, ಸಾಮೂಹಿಕ ತರಬೇತಿ ಸೌಲಭ್ಯ ಹೆಚ್ಚಿಸುವುದು, ಶಾಲಾ ಮಕ್ಕಳು ದೈಹಿಕವಾಗಿ ಸದೃಢರಾಗಿರುವಂತೆ ಮಾಡುವುದು, ರಾಜ್ಯಮಟ್ಟದಲ್ಲಿ ಖೇಲೋ ಇಂಡಿಯಾ ಕೇಂದ್ರಗಳ ಸ್ಥಾಪನೆ, ಮಹಿಳೆಯರು ಕ್ರೀಡಾಕ್ಷೇತ್ರದಲ್ಲಿ ಹೆಚ್ಚಾಗಿ ತೊಡಗಿಸಿಕೊಳ್ಳುವಂತೆ ಮಾಡುವುದು, ವಾರ್ಷಿಕ ಕೀಡಾಕೂಟಗಳ ಆಯೋಜನೆ, ಅಂಗವೈಕಲ್ಯ ಇರುವವರು ಕ್ರೀಡೆಯತ್ತ ಒಲವು ಹೊಂದುವಂತೆ ಮಾಡುವುದು, ಪ್ರತಿಭಾ ಶೋಧ ಮತ್ತು ಪ್ರೋತ್ಸಾಹ ನೀಡುವುದು, ಕ್ರೀಡೆಯ ಮೂಲಕ ಶಾಂತಿ ಮತ್ತು ಅಭಿವೃದ್ಧಿಗೆ ಒತ್ತು ನೀಡುವುದು, ಕ್ರೀಡಾಸೌಲಭ್ಯಗಳ ಹೆಚ್ಚಳ, ಅಭಿವೃದ್ಧಿ ಮತ್ತು ಅವುಗಳ ಬಳಕೆಗೆ ವ್ಯವಸ್ಥೆ ಮಾಡುವುದು ಹಾಗೂ ಗ್ರಾಮೀಣ, ದೇಶಿ, ಮೂಲನಿವಾಸಿಗಳ ಕ್ರೀಡೆಯನ್ನು ಉಳಿಸಿ ಬೆಳೆಸುವುದು ಖೇಲೋ ಇಂಡಿಯಾ ಆರಂಭಿಸುವ ಸಂದರ್ಭದಲ್ಲಿ ಇದ್ದ ಉದ್ದೇಶಗಳು.

**ಸ್ಪರ್ಧೆಗಳು ಎಲ್ಲೆಲ್ಲಿ, ಏನೇನು?**

ಬೆಂಗಳೂರಿನಲ್ಲಿ ನಡೆಯಲಿರುವ ಖೇಲೋ ಇಂಡಿಯಾ ಯುನಿವರ್ಸಿಟಿ ಗೇಮ್ಸ್‌ಗೆ ಜೈನ್ ವಿಶ್ವವಿದ್ಯಾಲಯ ಮುಖ್ಯ ಪ್ರಾಯೋಜಕತ್ವ ವಹಿಸಿದೆ. ಅತ್ಯುತ್ತಮ ಕ್ರೀಡಾ ಸೌಲಭ್ಯಗಳನ್ನು ಹೊಂದಿರುವ ಈ ವಿಶ್ವವಿದ್ಯಾಲಯದ ಆವರಣದಲ್ಲೇ ಬಹುತೇಕ ಸ್ಪರ್ಧೆಗಳು ನಡೆಯಲಿವೆ. ಕಲೋಸಿಯಂ ಸಭಾಂಗಣ, ಲಾನ್ ಟೆನಿಸ್ ಅಂಗಣ, ಈಜುಕೊಳ ಸಂಕೀರ್ಣ, ಕ್ರಿಕೆಟ್ ಮೈದಾನ, ಫುಟ್‌ಬಾಲ್ ಮೈದಾನ, ಸ್ಪೋರ್ಟ್ಸ್ ಸ್ಕೂಲ್ ಮುಂತಾದ ಕಡೆಗಳಲ್ಲಿ ಸ್ಪರ್ಧೆಗಳು ನಡೆಯಲಿವೆ. ವಾಲಿಬಾಲ್, ಟೆನಿಸ್, ಕಬಡ್ಡಿ, ಈಜು, ಆರ್ಚರಿ, ಫುಟ್‌ಬಾಲ್, ವೇಟ್‌ಲಿಫ್ಟಿಂಗ್, ಟೇಬಲ್ ಟೆನಿಸ್, ಬಾಕ್ಸಿಂಗ್, ಫೆನ್ಸಿಂಗ್, ಜೂಡೊ, ಕರಾಟೆ ಇತ್ಯಾದಿ ಇಲ್ಲಿ ನಡೆಯಲಿದೆ. ಕ್ರಿಕೆಟ್ ಅಂಗಣ ಯೋಗಾಸನ ಮತ್ತು ಮಲ್ಲಕಂಬಕ್ಕೆ ಆತಿಥ್ಯ ವಹಿಸಲಿದೆ.

ಕಂಠೀರವ ಹೊರಾಂಗಣ ಕ್ರೀಡಾಂಗಣ ಅಥ್ಲೆಟಿಕ್ಸ್‌ಗೂ ಒಳಾಂಗಣ ಕ್ರೀಡಾಂಗಣ ಬ್ಯಾಸ್ಕೆಟ್‌ಬಾಲ್‌ಗೂ ಮೀಸಲಾಗಿದೆ. ಭಾರತ ಕ್ರೀಡಾ ಪ್ರಾಧಿಕಾರ (ಸಾಯ್) ಶೂಟಿಂಗ್ ರೇಂಜ್‌ನಲ್ಲಿ ಶೂಟಿಂಗ್ ಮತ್ತು ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಅಂಗಣದಲ್ಲಿ ಹಾಕಿ ನಡೆಯಲಿದೆ. ಈ ಪೈಕಿ ಸಾಯ್ ಶೂಟಿಂಗ್ ರೇಂಜ್‌ನ ಹೆಚ್ಚುವರಿ ಸೌಲಭ್ಯದ ಕಾಮಗಾರಿ ಒಂದು ಬಿಟ್ಟರೆ ಉಳಿದ ಎಲ್ಲ ಅಂಗಣಗಳೂ ಬಳಕೆಗೆ ಸಿದ್ಧವಾಗಿವೆ.

**ಕ್ರೀಡೆಯ ಮೂಲಕ 'ಫಿಟ್ ಇಂಡಿಯಾ' ನಿರ್ಮಾಣ**

ಸದೃಢ ದೇಹದಲ್ಲಿ ದೃಢವಾದ ಮನಸ್ಸು ನೆಲೆನಿಲ್ಲಲು ಸಾಧ್ಯ ಎಂಬ ಕ್ರೀಡೆಯ ಸುತ್ತ ಹೆಣೆದಿರುವ ಮಾತಿನ ಚೌಕಟ್ಟಿನಲ್ಲೇ ಖೇಲೋ ಇಂಡಿಯಾ ಕ್ರೀಡಾಕೂಟದ ಧ್ಯೇಯವೂ ರೂಪುಗೊಂಡಿದೆ. ವೈಯಕ್ತಿಕ ನೆಲೆಯಿಂದ ಸಾಮಾಜಿಕ ಮತ್ತು ರಾಷ್ಟ್ರೀಯ ಮಟ್ಟಕ್ಕೆ ಧ್ಯೇಯವಾಕ್ಯವನ್ನು ವಿಸ್ತರಿಸಿರುವುದು ಇಲ್ಲಿ ಗಮನಿಸಬೇಕಾದ ಪ್ರಮುಖ ಅಂಶ. ಫಿಟ್ ಆಗಿರುವ ಮತ್ತು ಆರೋಗ್ಯವಂತ ಪುರುಷ-ಮಹಿಳೆಗೆ ಸ್ವಸ್ಥ ಸಮಾಜ ಮತ್ತು ಬಲಿಷ್ಠ ದೇಶವನ್ನು ಕಟ್ಟಲು ಸಾಧ್ಯ ಎಂಬುದು ಖೇಲೋ ಇಂಡಿಯಾ ಯೋಜನೆಯ ಮುಖ್ಯ ನಿರೀಕ್ಷೆ ಮತ್ತು ಭರವಸೆ.

ಕ್ರೀಡೆಯಲ್ಲಿ ಪಾಲ್ಗೊಳ್ಳುವುದರಿಂದ ಸಾಂಘಿಕ ಉತ್ಸಾಹ, ತಂತ್ರಗಳನ್ನು ಹೆಣೆಯುವ ಸಾಮರ್ಥ್ಯ, ನಾಯಕತ್ವ ಗುಣ, ಗುರಿಯೊಂದಿಗೆ ಮುನ್ನಡೆಯುವ ಕಲೆ ಹಾಗೂ ಸವಾಲನ್ನು ಎದುರಿಸುವ ತಾಕತ್ತು ವೃದ್ಧಿಸುತ್ತದೆ ಎಂದು ಖೇಲೋ ಇಂಡಿಯಾ ಗಟ್ಟಿಯಾಗಿ ನಂಬಿದೆ. ಹೀಗಾಗಿಯೇ ಮಕ್ಕಳು, ಯುವಜನತೆ ಮತ್ತು ಪದವಿ ವಿದ್ಯಾರ್ಥಿಗಳ ಮೇಲೆ ಕಣ್ಣಿಟ್ಟು ಯೋಜನೆ ರೂಪಿಸಲಾಗಿದೆ.

**ಕಳೆದ ಬಾರಿ ಪಂಜಾಬ್ ಪ್ರಾಬಲ್ಯ: ಈ ಬಾರಿ ಯಾರು?**

ಕೆಐಯುಜಿಯ ಮೊದಲ ಆವೃತ್ತಿಯಲ್ಲಿ 17 ವಿಭಾಗದ ಸ್ಪರ್ಧೆಗಳು ಇದ್ದವು. ಪಂಜಾಬ್ ವಿಶ್ವವಿದ್ಯಾಲಯ, ಪುಣೆಯ ಸಾವಿತ್ರಿ ಬಾಯಿ ಫುಲೆ ವಿಶ್ವವಿದ್ಯಾಲಯ ಮತ್ತು ಪಟಿಯಾಲದ ಪಂಜಾಬಿ ವಿಶ್ವವಿದ್ಯಾಲಯಗಳು ಆ ಕೂಟದಲ್ಲಿ ಪಾರಮ್ಯ ಮೆರೆದಿದ್ದವು. 17 ಚಿನ್ನದೊಂದಿಗೆ ಒಟ್ಟು 46 ಪದಕ ಗೆದ್ದಿದ್ದ ಪಂಜಾಬ್ ವಿಶ್ವವಿದ್ಯಾಲಯ ಮೊದಲ ಚಾಂಪಿಯನ್ ಆಗಿದ್ದರೆ 17 ಚಿನ್ನದೊಂದಿಗೆ 37 ಪದಕಗಳನ್ನು ಗೆದ್ದುಕೊಂಡಿದ್ದ ಸಾವಿತ್ರಿ ಬಾಯಿ ಫುಲೆ ವಿಶ್ವವಿದ್ಯಾಲಯ ರನ್ನರ್ ಆಗಿತ್ತು. ಮೂರನೇ ಸ್ಥಾನ ಗಳಿಸಿದ್ದ ಪಂಜಾಬಿ ವಿಶ್ವವಿದ್ಯಾಲಯ 13 ಚಿನ್ನದೊಂದಿಗೆ ಒಟ್ಟು 33 ಪದಕ ಗೆದ್ದುಕೊಂಡಿತ್ತು.

ಮೊದಲ ಕೂಟದಲ್ಲಿ ಕನಿಷ್ಠ ಎರಡು ಪದಕಗಳನ್ನಾದರೂ ಗಳಿಸಿದವುಗಳ ಪಟ್ಟಿಯಲ್ಲಿ 97 ವಿಶ್ವವಿದ್ಯಾಲಯಗಳಿವೆ. ಕರ್ನಾಟಕದ 8 ವಿಶ್ವವಿದ್ಯಾಲಯಗಳು ಪದಕಗಳನ್ನು ಗೆದ್ದುಕೊಂಡಿವೆ. ಮಂಗಳೂರು ವಿಶ್ವವಿದ್ಯಾಲಯ ಐದನೇ ಸ್ಥಾನ ಗಳಿಸಿ ಗಮನ ಸೆಳೆದಿತ್ತು. ಅದು 9 ಚಿನ್ನ ಮತ್ತು 7 ಬೆಳ್ಳಿಯೊಂದಿಗೆ 25 ಪಕದಗಳನ್ನು ಗಳಿಸಿತ್ತು.

ಈ ಬಾರಿಯ ಆತಿಥ್ಯ ವಹಿಸುತ್ತಿರುವ ಜೈನ್ ವಿಶ್ವವಿದ್ಯಾಲಯ ಏಳನೇ ಸ್ಥಾನ ಗಳಿಸಿತ್ತು. 8 ಚಿನ್ನ, 6 ಬೆಳ್ಳಿ ಒಳಗೊಂಡ 16 ಪದಕಗಳು ಅದರ ಪಾಲಾಗಿದ್ದವು. ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ 16ನೇ ಸ್ಥಾನ, ಮೈಸೂರು ವಿಶ್ವವಿದ್ಯಾಲಯ 45ನೇ ಸ್ಥಾನ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ 50ನೇ ಸ್ಥಾನ, ಬೆಂಗಳೂರು ಕೇಂದ್ರೀಯ ವಿಶ್ವವಿದ್ಯಾಲಯ 56ನೇ ಸ್ಥಾನ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ 72ನೇ ಸ್ಥಾನ, ಬೆಂಗಳೂರು ವಿಶ್ವವಿದ್ಯಾಲಯ ಮತ್ತು ಕ್ರೈಸ್ಟ್ ವಿಶ್ವವಿದ್ಯಾಲಯ 76ನೇ ಸ್ಥಾನ, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಗುಲ್ಬರ್ಗ ವಿಶ್ವವಿದ್ಯಾಲಯ 97ನೇ ಸ್ಥಾನ ಗಳಿಸಿದ್ದವು.


ಟ್ರ್ಯಾಕ್‌ನಲ್ಲಿ ಎರಡು ಚಿನ್ನ ಗೆದ್ದ ದ್ಯುತಿ ಚಾಂದ್ ಅವರಂಥ ಅಂತಾರಾಷ್ಟ್ರೀಯ ಕ್ರೀಡಾಪಟುಗಳು ಕಳದ ಬಾರಿ ಮಿಂಚಿದ್ದಾರೆ. ಈ ಬಾರಿ ಅಂಗಣಗಳಲ್ಲಿ ಯಾರ ಪ್ರತಿಭೆ ಬೆಳಗುತ್ತದೆ ಮತ್ತು ಯಾವ ವಿಶ್ವವಿದ್ಯಾಲಯ ಪದಕಗಳನ್ನು ಬಾಚಿಕೊಳ್ಳುತ್ತದೆ ಎಂಬ ಕುತೂಹಲ ಕ್ರೀಡಾಪ್ರೇಮಿಗಳದು.



Downloaded From: www.kpscvaani.com

ಸುರಪುರ ಸಂಸ್ಥಾನದ ಆಡಳಿತವನ್ನು ಬ್ರಿಟಿಷರ ಹಿಡಿತದಿಂದ ಬಿಡಿಸಿಕೊಂಡು ಸ್ವತಂತ್ರವಾಗಿ ಮುನ್ನಡೆಸುವ ಛಲದಿಂದ ಹೋರಾಡಿ ಅಮರನಾದ ವೆಂಕಟಪ್ಪನಾಯಕನ ಸಾಹಸಗಾಥೆ.

ಎನ್. ಜಗನ್ನಾಥ ಪ್ರಕಾಶ್



## ಬಿಳಿಯರ ವಿರುದ್ಧ ಸಿಡಿದೆದ್ದ

# ಸುರಪುರದ ವೆಂಕಟಪ್ಪನಾಯಕ



ಸುರಪುರ ಯಾದಗಿರಿ ಜಿಲ್ಲೆಯ ಪುಟ್ಟ ಊರು. ಹಿಂದೊಮ್ಮೆ ಇದೊಂದು ಸಣ್ಣ ಸಂಸ್ಥಾನದ ಮುಖ್ಯ ಸ್ಥಳ. ಇದು ಬೇಡ ಸಮುದಾಯದವರು ಹೆಚ್ಚಾಗಿ ವಾಸಿಸುತಿದ್ದ ಜಾಗ. ಶೌರ್ಯಕ್ಕೆ ಹೆಸರಾದ ಬೇಡರು ಸ್ವಾಭಿಮಾನಕ್ಕೆ ಧಕ್ಕೆ ಆದಾಗ ಸಿಡಿಯುವವರು. ಹಾಗಾಗಿ ಭಾರತದ ಸ್ವಾತಂತ್ರ್ಯವನ್ನು ಕಸಿದುಕೊಂಡಿದ್ದ ಬ್ರಿಟಿಷರ ವಿರುದ್ಧ ಸೆಟೆದು ನಿಂತು ವೀರಾವೇಶದಿಂದ ಹೋರಾಡಿದ ಸಂಸ್ಥಾನಗಳಲ್ಲಿ ಸುರಪುರ ಸಂಸ್ಥಾನವೂ ಒಂದು.

ಭಾರತವನ್ನು ಆಕ್ರಮಿಸಲು ಬ್ರಿಟಿಷರು ಮಾಡಿದ ಕುಟಿಲ ತಂತ್ರ ಹತ್ತು ಹಲವು. ತಂದೆಯನ್ನು ಕಳೆದುಕೊಂಡಾಗ ಸುರಪುರದ ವೆಂಕಟಪ್ಪನಾಯಕನಿಗೆ ಕೇವಲ 8 ವರ್ಷವಾಗಿತ್ತು. ಈ ಭಾಗದಲ್ಲಿ ತನ್ನ ಹಿಡಿತ ಇಟ್ಟುಕೊಂಡಿದ್ದ ಹೈದ್ರಾಬಾದ್ ನಿಜಾಮ ಬ್ರಿಟಿಷರ ಸ್ನೇಹ ವಲಯದಲ್ಲಿದ್ದ. ನಿಜಾಮ ಸುರಪುರದಲ್ಲಿ ಉತ್ತರಾಧಿಕಾರಿ ಶುಲ್ಕವಾಗಿ ರೂ.15.00ಲಕ್ಷಗಳನ್ನು ವಿಧಿಸಿ ಆದೇಶ ಹೊರಡಿಸಿದಾಗ ಸುರಪುರ ಆರ್ಥಿಕವಾಗಿ ಸಂಕಷ್ಟದಲ್ಲಿತ್ತು. ಸುರಪುರವನ್ನು ಉಳಿಸಿಕೊಳ್ಳಲು ಉತ್ತರಾಧಿಕಾರಿ ಶುಲ್ಕವನ್ನು ಅನಿವಾರ್ಯವಾಗಿ ಒಪ್ಪಲೇ ಬೇಕಾಯಿತು.

ಬೇರೆಯವರ ಹಂಗಿನಲ್ಲಿ ಬದುಕು ದೂಡಬೇಕಾದ ಸುರಪುರವಾಸಿಗಳ ಸ್ಥಿತಿ ಬಹಳ ಕಷ್ಟಕ್ಕೆ ಸಿಕ್ಕಿಬಿತ್ತು. ಇದರ ಹಿಂದೆ



Downloaded From: www.kpscvaani.com



ಇದ್ದ ಬ್ರಿಟಿಷ್ ಆಡಳಿತ, ವೆಂಕಟಪ್ಪ ನಾಯಕ ವಯಸ್ಸಿಗೆ ಬರುವವರೆಗೂ ತಮ್ಮ ಪ್ರತಿನಿಧಿಯಾಗಿ ಮೆಡೊಸ್ ಟೇಲರ್ ಎಂಬಾತನನ್ನು ನೇಮಿಸಿತು.

ಬಾಲಕ ವೆಂಕಟಪ್ಪ ನಾಯಕನಿಗೆ ಶಿಕ್ಷಣ ನೀಡಿ ಬೆಳೆಸುವ ಹೊಣೆಗಾರಿಕೆಯನ್ನು, ಸುರಪುರ ಸಂಸ್ಥಾನದ ಆಡಳಿತವನ್ನು ಮೆಡೊಸ್ ಟೈಲರ್ ಸಮರ್ಥವಾಗಿ ನಿರ್ವಹಿಸಿದರಾದರೂ ಬರಗಾಲ, ನಿಜಾಮರ ಶುಲ್ಕ ಮತ್ತು ಬ್ರಿಟಿಷರ ಹಿಡಿತಗಳಿಂದಾಗಿ ಸುರಪುರದ ಖಜಾನೆ ಖಾಲಿಯಾಗಿತ್ತು. ವೆಂಕಟಪ್ಪ ವಯಸ್ಕನಾಗುವ ವೇಳೆಗೆ ಇಡೀ ಸುರಪುರ ಬ್ರಿಟಿಷರ ಆಡಳಿತಕ್ಕೆ ಸೇರಿಬಿಟ್ಟಿತು. ಜತೆಗೆ ನಿಜಾಮನ ಸಾಲವೂ ತೀರದೇ ಬೊಕ್ಕಸ ಬರಿದಾಗಿತ್ತು.

ಸುರಪುರ ಸಂಸ್ಥಾನದ ಆಡಳಿತವನ್ನು ಬ್ರಿಟಿಷರ ಹಿಡಿತದಿಂದ ಬಿಡಿಸಿಕೊಂಡು ಸ್ವತಂತ್ರವಾಗಿ ಮುನ್ನಡೆಸುವ ಛಲ ಯುವಕ ವೆಂಕಟಪ್ಪ ನಾಯಕನಲ್ಲಿ ಹುಟ್ಟಿತು. ಆದರೆ ಕೇಂದ್ರ ಬ್ರಿಟಿಷ್ ಆಡಳಿತ ಸುರಪುರದಲ್ಲಿ ಬ್ರಿಟಿಷ್ ಸಲಹೆಗಾರನನ್ನು ನೇಮಿಸಲು ನಿರ್ಧರಿಸಿತು. ಜತೆಗೆ ದೊಡ್ಡ ಮೊತ್ತದ ಸಂಬಳವನ್ನು ಸಲಹೆಗಾರನಿಗೆ ಸುರಪುರ ಸಂಸ್ಥಾನವೇ ನೀಡಬೇಕೆಂಬ ಷರತ್ತನ್ನು ವಿಧಿಸಿತು. ಇದನ್ನು ವೆಂಕಟಪ್ಪ ನಾಯಕ ವಿರೋಧಿಸಿದ. ಸಲಹೆಗಾರನ ಸಂಬಳ ಕೊಡಲು ಸಾಧ್ಯವಿಲ್ಲವೆಂದೂ ತಿಳಿಸಿದ.

ಈ ಪ್ರಯತ್ನದ ಹಿಂದೆ ಬ್ರಿಟಿಷರು ಹಾಗೂ ನಿಜಾಮರು ಸುರಪುರವನ್ನು ಕಬಳಿಸುವ ಹುನ್ನಾರ ಹೂಡಿದ್ದಾರೆಂದು ಊಹಿಸಿದ ವೆಂಕಟಪ್ಪ ನಾಯಕ ನಂಬಿಕಸ್ಥರನ್ನು ಒಟ್ಟು ಮಾಡಿಕೊಂಡು ಸೈನಿಕ ಪಡೆಯನ್ನು ಸಜ್ಜುಗೊಳಿಸುತ್ತಾ, ಶಸ್ತ್ರಗಳನ್ನು ಸಂಗ್ರಹ ಮಾಡಿಕೊಳ್ಳಲು ಮುಂದಾದ. ಇದಕ್ಕೆ ಬ್ರಿಟಿಷರು ಮಾಡುತ್ತಿದ್ದ ಆಕ್ಷೇಪಗಳನ್ನು ವೆಂಕಟಪ್ಪ ಲೆಕ್ಕಿಸಲಿಲ್ಲ.

ಬ್ರಿಟಿಷರು ಭಾರತೀಯ ಯುವಕರನ್ನು ಒಟ್ಟು ಮಾಡಿ ಸೇನೆಯನ್ನು ಸಿದ್ಧ ಮಾಡಿಕೊಂಡಿದ್ದರು. ಸುರಪುರದ ಸುತ್ತ ಧಾರವಾಡ, ಕೊಲ್ಲಾಪುರ, ಬೆಳಗಾವಿಗಳಲ್ಲಿ ಬ್ರಿಟಿಷ್ ಸೇನೆಗಳಿದ್ದವು. ಬಿಳಿಯರ ಸೇನೆಯಲ್ಲಿದ್ದ ಭಾರತೀಯರನ್ನು ಮನಪರಿವರ್ತನೆ ಮಾಡಿ ಬ್ರಿಟಿಷರ ವಿರುದ್ಧ ತಿರುಗಿ ಬೀಳುವಂತೆ ಮಾಡಲು ವೆಂಕಟಪ್ಪನಾಯಕ ತನ್ನ ಬೆಂಬಲಿಗರ ಮೂಲಕ ತಂತ್ರಗಳನ್ನು ರೂಪಿಸಿ ಅನುಷ್ಠಾನಗೊಳಿಸುವ ಕಾಲದಲ್ಲಿ ಇದು ಬಿಳಿಯರ ಗಮನಕ್ಕೆ ಬಂತು. ಎಚ್ಚೆತ್ತುಕೊಂಡ ಬ್ರಿಟಿಷರು ಏಕಾಏಕಿ ಸುರಪುರದ ಮೇಲೆ ಬಿದ್ದರು. ನಾಯಕನ ಬೇಡರ ಪಡೆ ವೀರಾವೇಶದಿಂದ ಹೋರಾಡಿದರೂ ಶಕ್ತ ಬ್ರಿಟಿಷ್ ಸೈನ್ಯದ ಮುಂದೆ ಗೆಲುವು ಸಾಧಿಸಲು ಸಾಧ್ಯವಾಗಲಿಲ್ಲ. ವಿದ್ರೋಹಿಗಳ ನೆರವಿನಿಂದ ಬ್ರಿಟಿಷರು ಕೋಟೆಯನ್ನು ಆಕ್ರಮಿಸಿದರು. ನಾಯಕರು ಅವರ ಕೈಗೆ ಸಿಕ್ಕಿದರು. ಸುರಪುರವನ್ನು ಬ್ರಿಟಿಷರು ಹಾಗೂ ನಿಜಾಂ ಸೈನ್ಯ ದೋಚಿತು.

ಗೌರ್ನರ್ ಜನರಲ್ ಆಗಿದ್ದ ಡಾಲ್‌ಹೌಸಿ ಹೂಡಿದ ತಂತ್ರವನ್ನು ಮೊದ ಮೊದಲಿಗೆ ಎದುರಿಸಿ ನಿಂತ ವೆಂಕಟಪ್ಪ ನಾಯಕನ ಸಮರ್ಥತೆಯನ್ನು ಕಂಡ ಬ್ರಿಟಿಷರು ನೇರವಾಗಿ ಸುರಪುರವನ್ನು ಕಬಳಿಸಲಿಲ್ಲ. ತಮ್ಮ ಹಿಡಿತದಲ್ಲಿದ್ದ ಹೈದ್ರಾಬಾದ್ ನಿಜಾಮರ ಮೂಲಕವಾಗಿ ಎಸೆದ ದಾಳಕ್ಕೆ ವೆಂಕಟಪ್ಪ ಸಿಕ್ಕಿಬೀಳ ಬೇಕಾಯಿತು.

ಬ್ರಿಟಿಷರ ತಂತ್ರಗಳಿಗೆ ವೆಂಕಟಪ್ಪ ಪ್ರತಿತಂತ್ರಗಳನ್ನು ರೂಪಿಸಿದನಾದರೂ ಅನುಷ್ಠಾನಗೊಳಿಸಲು ಆತನಿಗೆ ಅಗತ್ಯ ನೆರವು ಸಿಗದೇ ಹೋಯಿತು. ಎಚ್ಚೆತ್ತುಕೊಂಡ ಬ್ರಿಟಿಷರು, ವೆಂಕಟಪ್ಪನ ಮೇಲೆ ಮುಗಿಬಿದ್ದು ಸಂಚಿನಿಂದ ಸೆರೆಹಿಡಿದರು.

ಬ್ರಿಟಿಷ್ ಆಡಳಿತಕ್ಕೆ ಸೇರಿದ್ದರೂ

**ಬ್ರಿಟಿಷರ ತಂತ್ರಗಳಿಗೆ ವೆಂಕಟಪ್ಪ ಪ್ರತಿತಂತ್ರಗಳನ್ನು ರೂಪಿಸಿದನಾದರೂ ಅನುಷ್ಠಾನಗೊಳಿಸಲು ಆತನಿಗೆ ಅಗತ್ಯ ನೆರವು ಸಿಗದೇ ಹೋಯಿತು. ಎಚ್ಚೆತ್ತುಕೊಂಡ ಬ್ರಿಟಿಷರು, ವೆಂಕಟಪ್ಪನ ಮೇಲೆ ಮುಗಿಬಿದ್ದು ಸಂಚಿನಿಂದ ಸೆರೆಹಿಡಿದರು.**

ಭಾರತೀಯರ ಬಗ್ಗೆ ಅನುಕಂಪವಿದ್ದ ಮೆಡೊಸ್ ಟೈಲರ್ ವೆಂಕಟಪ್ಪನಾಯಕರನ್ನು ಉಳಿಸಲು ಇನ್ನಿಲ್ಲದ ಪ್ರಯತ್ನಗಳನ್ನು ನಡೆಸಿದರು. ಬ್ರಿಟಿಷರು ವೆಂಕಟಪ್ಪನಿಗೆ ನೇಣು ಶಿಕ್ಷೆ ವಿಧಿಸಿದರೂ ಅದನ್ನು ಮೆಡೊಸ್ ಜೀವಾವಧಿ ಶಿಕ್ಷೆಗೆ, ನಂತರ ನಾಲ್ಕು ವರ್ಷಗಳ ಶಿಕ್ಷೆಗೆ ಇಳಿಸುವಲ್ಲಿ ಸಫಲರಾದರು.

ಬಂಧಿಸಿದ ವೆಂಕಟಪ್ಪನಾಯಕನನ್ನು ತಮ್ಮ ಹತೋಟಿಯ ದುರ್ಗಕ್ಕೆ ಕರೆದೊಯ್ಯುತ್ತಿದ್ದಾಗ ಸ್ವಾಭಿಮಾನಿ ನಾಯಕರು ಗುಂಡೇಟಿನಿಂದ ನಿಗೂಢವಾಗಿ ಮೃತಪಡುತ್ತಾರೆ. ಆದರೆ ಇದು ಹತ್ಯೆಯೋ, ಆತ್ಮಹತ್ಯೆಯೋ ನಿಗೂಢವಾಗಿಯೇ ಉಳಿಯಿತು.

ಮೊದಲೇ ಕ್ಷಾಮಡಾಮರಗಳಿಂದ ಬಸವಳಿದಿದ್ದ ಸುರಪುರವನ್ನು ಸುಲಿದ ಹೈದ್ರಾಬಾದ್ ನಿಜಾಮರ ಪಡೆಗಳು ಅರಮನೆಯಲ್ಲಿ ಇದ್ದಬದ್ದದ್ದನ್ನು ದೋಚಿದರು. ವೆಂಕಟಪ್ಪ ಪ್ರಾಣ ಬಿಟ್ಟ ಬಳಿಕ ಬ್ರಿಟಿಷರು ಈ ಸಂಚಿನಲ್ಲಿ ತಮಗೆ ನೆರವಾಗಿದ್ದ ಹೈದ್ರಾಬಾದ್ ನಿಜಾಮರಿಗೆ ಸುರಪುರದ ಕೋಟೆಯನ್ನು ಕಾಣಿಕೆಯಾಗಿ ಕೊಟ್ಟರು.

ತಾಯಿನಾಡನ್ನು ಬ್ರಿಟಿಷರು ಆಳುವುದನ್ನು ವೆಂಕಟಪ್ಪ ನಾಯಕ ಒಪ್ಪಲೇ ಇಲ್ಲ. ಬ್ರಿಟಿಷರ ಕುಟಿಲ ತಂತ್ರಗಳಿಗೆ ಅವರು ಬಲಿಯಾದರು. ಭಾರತೀಯ ಸ್ವಾತಂತ್ರ್ಯ ಹೋರಾಟದಲ್ಲಿ ಅಮರರಾಗಿ ಉಳಿದರು. ಆ ಮೂಲಕ ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸುರಪುರದ ಹೋರಾಟದ ಪುಟ ಚಿರಸ್ಥಾಯಿಯಾಗಿ ನಿಂತಿದೆ.



Downloaded From: www.kpscvaani.com

# ನವೀಕರಿಸಬಹುದಾದ ವಿದ್ಯುತ್ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಿರುವ ಕರ್ನಾಟಕ



**ನಮ್ಮ ರಾಜ್ಯವು ನವೀಕರಿಸಬಹುದಾದ ವಿದ್ಯುತ್ ಉತ್ಪಾದನೆಯಲ್ಲಿ ಸ್ವಾವಲಂಬನೆಯನ್ನು ಸಾಧಿಸುವ ಮೂಲಕ ದೇಶದಲ್ಲೇ ಮುಂಚೂಣಿ ಸ್ಥಾನವನ್ನು ಪಡೆದುಕೊಂಡಿದೆ.**

ಬಿ. ವೆಂಕಟಸಿಂಗ್

ಒಂದು ದೇಶ ಅಭಿವೃದ್ಧಿ ಹೊಂದಲು ನೀರು ಮತ್ತು ವಿದ್ಯುತ್ ಅತೀ ಅವಶ್ಯಕ. ಪ್ರತಿ ಮನುಷ್ಯನ ನಿತ್ಯ ಜೀವನಕ್ಕೆ ಸೇರಿದಂತೆ ಯಾವುದೇ ರೀತಿಯ ಯಂತ್ರಗಳ ಬಳಕೆಗೆ ವಿದ್ಯುತ್ ಅತ್ಯವಶ್ಯಕವಾಗಿ ಬೇಕಾಗುತ್ತದೆ. ಅಂತಹ ವಿದ್ಯುತ್ ಬೇಡಿಕೆ ಈಡೇರಿಸುವಲ್ಲಿ ಇಂಧನ ಇಲಾಖೆಯು ತನ್ನ ಎಲ್ಲಾ ವಿದ್ಯುತ್ ಉತ್ಪಾದನಾ ಜಾಲಗಳಿಂದ ಸ್ವಾವಲಂಬನೆ ಸಾಧಿಸುವ ಮೂಲಕ ಕರ್ನಾಟಕ ರಾಜ್ಯವನ್ನು ಉಳಿದ ರಾಜ್ಯಗಳಿಗಿಂತ ಮುಂಚೂಣಿಯಲ್ಲಿರಿಸಿದೆ. ಉಷ್ಣ, ಜಲ, ಸೌರ, ಪವನ, ಜೈವಿಕ, ಕಿರುಜಲ, ಕ್ಯಾಪ್ಟೀವ್, ಡಿ.ವಿ.ನಿ. ಮೂಲಗಳಿಂದಲೂ ಸೇರಿದಂತೆ ಕೇಂದ್ರ ವಿದ್ಯುತ್ ಉತ್ಪಾದನಾ ಘಟಕಗಳಿಂದ 31 ಸಾವಿರದ 280 ಮೆಗಾವ್ಯಾಟ್ ವಿದ್ಯುತ್ ಪಡೆಯುತ್ತಿದೆ. ವಿಶೇಷವಾಗಿ ಸೌರ ಮತ್ತು ನವೀಕೃತ ಇಂಧನ ಮೂಲಗಳಿಂದ 15404.96 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಆಗುತ್ತಿರುವುದು ಗಮನಾರ್ಹ ಸಂಗತಿಯಾಗಿದೆ. ಫೆಬ್ರವರಿ 2022 ರಲ್ಲಿ ಎಲ್ಲಾ ಮೂಲಗಳಿಂದ ಪ್ರತಿದಿನ 250.22 ಮಿಲಿಯನ್ ಯೂನಿಟ್ ವಿದ್ಯುತ್ ಸರಬರಾಜು ಮಾಡಲಾಗಿದೆ.

ರಾಜ್ಯ ತನ್ನ ಹೊಸ ಕೈಗಾರಿಕಾ ನೀತಿ ಸೇರಿದಂತೆ ರಾಜ್ಯದ ಅಭಿವೃದ್ಧಿಗಾಗಿ ತೆಗೆದುಕೊಂಡ ಅನೇಕ ನಿರ್ಧಾರಗಳಿಗೆ ಇಂಧನ ಇಲಾಖೆ ಕಳೆದ ಹತ್ತು ವರ್ಷಗಳಲ್ಲಿ ವಿದ್ಯುತ್ ಉತ್ಪಾದನಾ ಮತ್ತು ಸರಬರಾಜು ವ್ಯವಸ್ಥೆಯಲ್ಲಿ ಗಣನೀಯ ಬದಲಾವಣೆ ತಂದಿರುವುದು ಪ್ರಗತಿಯ ಸಂಕೇತವಾಗಿದೆ.

2010–11ರಲ್ಲಿ ರಾಜ್ಯದಲ್ಲಿ 904 ವಿದ್ಯುತ್ ಉಪಕೇಂದ್ರಗಳಿದ್ದರೆ 2021–22ಕ್ಕೆ 1285ಕ್ಕೆ ಏರಿಕೆಯಾಗಿದೆ. 2010–11ರಲ್ಲಿ 7815 ಮೆಗಾವ್ಯಾಟ್ ಇದ್ದ ವಿದ್ಯುತ್ ಗರಿಷ್ಠ ಬೇಡಿಕೆಯು 2021–22ಕ್ಕೆ 14756



Downloaded From: www.kpscvaani.com



ಪ್ರಸ್ತುತ ರಾಜ್ಯದಲ್ಲಿ ಒಟ್ಟಾರೆ 31 ಸಾವಿರದ 280.26 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯಾಗುತ್ತಿದ್ದು, ವಿವರ ಈ ಕೆಳಕಂಡಂತಿದೆ.

| | | |
|---|---|---|
| ಜಲ ವಿದ್ಯುತ್ | – | 3798. ಮೆ.ವ್ಯಾ |
| ಶಾಖೋತ್ಪನ್ನ | – | 5020 ಮೆ.ವ್ಯಾ. |
| ಕೇಂದ್ರ ಜಲ | – | 4415 ಮೆ.ವ್ಯಾ |
| ಪವನ | – | 5095 ಮೆ.ವ್ಯಾ. |
| ಸಹ ಉತ್ಪಾದನೆ | – | 1731 ಮೆ.ವ್ಯಾ |
| ಕಿರುಜಲ | – | 903 ಮೆ.ವ್ಯಾ |
| ಜೈವಿಕ | – | 139 ಮೆ.ವ್ಯಾ. |
| ಸೌರ | – | 7535 ಮೆ.ವ್ಯಾ. |
| ಕ್ಯಾಪ್ಟಿವ್ | – | 992 ಮೆ.ವ್ಯಾ |
| ಬೃಹತ್ ಉತ್ಪಾದಕರಿಂದ | – | 1200 ಮೆ.ವ್ಯಾ |
| ಡಿ.ವಿ.ಸಿ. | – | 450 ಮೆ.ವ್ಯಾ. |
| ಒಟ್ಟು | – | 31280 ಮೆ.ವ್ಯಾ. |

ಕೇವಲ ವಿದ್ಯುತ್ ಉತ್ಪಾದನೆಗೆ ಮಾತ್ರ ಆದ್ಯತೆ ನೀಡದೆ, ಇಂಗಾಲದ ಹೊರ ಸೂಸುವಿಕೆಗೆ ಹಲವು ಕ್ರಮಗಳನ್ನು ಕೈಗೊಂಡು ಕರ್ನಾಟಕವು 2014–2021 ಸೌರ ನೀತಿ ಜಾರಿ ಮಾಡಿದ ದಕ್ಷಿಣ ಭಾರತದ ಪ್ರಥಮ ರಾಜ್ಯವಾಗಿದೆ.

ಮೆಗಾವ್ಯಾಟ್ ಆಗಿದೆ. ವಿದ್ಯುತ್ ಉಪಕೇಂದ್ರಗಳ ಹೆಚ್ಚಳದಿಂದ ರೈತರಿಗೆ, ಗ್ರಾಹಕರಿಗೆ ಗುಣಮಟ್ಟದ ವಿದ್ಯುತ್ ಸರಬರಾಜು ಮಾಡಲು ಅನುಕೂಲವಾಗಿದೆ.

ರಾಜ್ಯದಲ್ಲಿ ಸಾಂಪ್ರದಾಯಿಕವಾಗಿ ಇಂಧನ ಮೂಲದ ಜೊತೆಗೆ ನವೀಕರಿಸಬಹುದಾದ ಇಂಧನ ಉತ್ಪಾದನೆಗೆ ಒತ್ತು ನೀಡಿ ಗಣನೀಯ ಪ್ರಮಾಣದ ವೃದ್ಧಿ ಸಾಧಿಸುವ ಮೂಲಕ ದೇಶದಲ್ಲಿ ಎರಡನೇಯ ಸ್ಥಾನ ಪಡೆದಿದೆ. ಹಾಗೆಯೇ ನವೀಕರಿಸಬಹುದಾದ ಇಂಧನ ಮೂಲಗಳಿಂದ 15405 ಮೆಗಾವ್ಯಾಟ್ ವಿದ್ಯುತ್ ಲಭ್ಯವಾಗುತ್ತದೆ. ಇನ್ನು ಸೌರಶಕ್ತಿ





Downloaded From: www.kpscvaani.com

ಇಂಧನ ಮೂಲದಿಂದ 7535.85 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸಿ ದೇಶದಲ್ಲಿಯೇ ಕರ್ನಾಟಕ ಪ್ರಥಮ ಸ್ಥಾನದಲ್ಲಿದೆ.

ಕಳೆದ 10 ವರ್ಷಗಳ ಹಿಂದೆ ನವೀಕರಿಸಬಹುದಾದ ಇಂಧನ ಮೂಲಗಳಿಂದ 2906 ಮೆಗಾವ್ಯಾಟ್ ವಿದ್ಯುತ್ ಉತ್ಪಾದನಾ ಸಾಮರ್ಥ್ಯ 2021–22 ರಲ್ಲಿ 15405ಕ್ಕೆ ಐದು ಪಟ್ಟು ಹೆಚ್ಚು ಮಾಡಿ ದಾಖಲೆ ಮಾಡಲಾಗಿದೆ.

ರಾಜ್ಯ ಸರ್ಕಾರ ವಿದ್ಯುತ್ ಕ್ಷೇತ್ರದಲ್ಲಿ ಸಾಧಿಸಿದ ಗಣನೀಯ ಪ್ರಗತಿ ಮಾಡಿದ್ದು, 2021 ನೇ ಸಾಲಿನಲ್ಲಿ ಸೌರ ಮತ್ತು ಸೌರೇತರ ಆರ್.ಪಿ.ಓ ಗುರಿ ಶೇ.19 ರಷ್ಟಿದೆ. ಪ್ರಗತಿ ಶೇ.39.45 ಹೆಚ್ಚಿಸಿ, ಡಿಕಾರ್ಬೋನೈಜೇಷನ್ ಕಡಿಮೆ ಮಾಡಿದ ಕೀರ್ತಿಗೆ ಪಾತ್ರವಾಗಿದೆ. ರಾಜ್ಯದ ಇಂಧನ ಇಲಾಖೆಯ ಈ ಪ್ರಗತಿಯನ್ನು ಗುರುತಿಸಿ ಕೇಂದ್ರ ಇಂಧನ ಇಲಾಖೆಯು ರಾಷ್ಟ್ರೀಯ ವಿದ್ಯುತ್ ಕನ್ಸರ್ವೇಷನ್ ಪ್ರಶಸ್ತಿ ನೀಡಿ ಗೌರವಿಸಿದೆ.

ಭೂ ಮಾಲೀಕರು ಅಂದರೆ ರೈತರ ಮೂಲಕ 269 ಮೆಗಾವ್ಯಾಟ್ ವಿದ್ಯುತ್ ಉತ್ಪಾದನಾ ಸಾಮರ್ಥ್ಯದ ಜೊತೆಗೆ ಕೇಂದ್ರ ಸರ್ಕಾರಿ ಸಾಮರ್ಥ್ಯದ ಸಂಸ್ಥೆಯಾದ ಎಸ್.ಸಿ.ಐ 930 ಮೆಗಾವ್ಯಾಟ್ ಸಾಮರ್ಥ್ಯದ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ.

ಕೇವಲ ವಿದ್ಯುತ್ ಉತ್ಪಾದನೆಗೆ ಮಾತ್ರ ಆದ್ಯತೆ ನೀಡದೆ, ಇಂಗಾಲದ ಹೊರ ಸೂಸುವಿಕೆಗೆ ಹಲವು ಕ್ರಮಗಳನ್ನು ಕೈಗೊಂಡು ಕರ್ನಾಟಕವು 2014–2021 ಸೌರ ನೀತಿ ಜಾರಿ ಮಾಡಿದ ದಕ್ಷಿಣ ಭಾರತದ ಪ್ರಥಮ ರಾಜ್ಯವಾಗಿದೆ.

ಕೇಂದ್ರ ಸರ್ಕಾರದ 2030 ರ ಗುರಿಯನ್ನು ಮುಟ್ಟಲು 450 ವ್ಯಾಟ್ ಸಾಮರ್ಥ್ಯದ ಅನುಷ್ಠಾನಕ್ಕೆ ಅನುಕೂಲವಾಗುವಂತೆ ಹೊಸ ತಂತ್ರಜ್ಞಾನಕ್ಕೆ ಉತ್ತೇಜನ ನೀಡಲು ನವೀಕರಿಸಬಹುದಾದ ಇಂಧನ ನೀತಿ 2021–26 ಅನ್ನು ಅಧಿಸೂಚಿಸಲು ಕ್ರಮವಹಿಸಲಾಗಿದೆ.

ಇನ್ನು ರಾಜ್ಯದಲ್ಲಿ ಹೊಸಬೆಳಕು ಯೋಜನೆಯಡಿ ಎಲ್.ಇ.ಡಿ ಬಲ್ಬ್, ಟ್ಯೂಬ್ ಲೈಟ್ ಮತ್ತು ಫ್ಯಾನ್‌ಗಳನ್ನು ಅತ್ಯಂತ ಕಡಿಮೆ ದರದಲ್ಲಿ ವಿತರಿಸಲಾಗಿದೆ. ಒಟ್ಟು 2 ಕೋಟಿ 42 ಲಕ್ಷ 62 ಸಾವಿರದ 841 ಎಲ್.ಇ.ಡಿ ಬಲ್ಬ್, 4 ಲಕ್ಷ, 12 ಸಾವಿರದ 486 ಟ್ಯೂಬ್ ಲೈಟ್, 72 ಸಾವಿರದ 197 ಫ್ಯಾನ್ ನೀಡಿ 391 ಲಕ್ಷ ಟನ್ ಇಂಗಾಲ ಹೊರ ಸೂಸುವಿಕೆಯನ್ನು ಕಡಿಮೆ ಮಾಡಲಾಗಿದೆ.

ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ 13 ವಿವಿಧ ಕೈಗಾರಿಕೆ ವಲಯಗಳಲ್ಲಿ ಇಂಗಾಲ ಹೊರ ಸೂಸುವಿಕೆಯನ್ನು ತಗ್ಗಿಸಲು ಪರ್ಫಾಮೆನ್ಸ್ ಅಚೀವ್ ಅಂಡ್ ಟ್ರೇಡ್ (ಪಿ.ಎ.ಟಿ) ಕ್ರಮ ಕೈಗೊಂಡು, ಇಂಧನ ದಕ್ಷತೆ ಮತ್ತು ಸುರಕ್ಷತೆಗಾಗಿ ವಿವಿಧ ಯೋಜನೆಗಳನ್ನು ಜಾರಿ ಮಾಡಿ CO-2 ಹೊರ ಸೂಸುವಿಕೆ ಕಡತಗೊಳಿಸಲು ಇಂಧನ ಸಂರಕ್ಷಣಾ ನೀತಿ 2022–27ನ್ನು ಸಧ್ಯದಲ್ಲೇ ರಾಜ್ಯ ಪತ್ರದಲ್ಲಿ ಪ್ರಕಟಿಸಲಿದೆ.

ಈ ರೀತಿಯ ಹಲವಾರು ಸುಧಾರಣಾ ಕ್ರಮಗಳ ಪರಿಣಾಮ ಇಂಧನ ಉಳಿತಾಯ ಮತ್ತು ಸಂರಕ್ಷಣೆಯ ಸಾಧನೆಯನ್ನು ಪರಿಗಣಿಸಿ ಕೇಂದ್ರ ಸರ್ಕಾರದ ಕ್ರೆಡಲ್ ಸಂಸ್ಥೆ ಸ್ಟೇಟ್ ಪರ್ಫಾರ್ಮೆನ್ಸ್ ಪ್ರಶಸ್ತಿ ನೀಡಿ ಗೌರವಿಸಿದೆ.

ವಿದ್ಯುತ್ ಉತ್ಪಾದನೆ ಮಾಡಿ ಕೇವಲ ವಾಣಿಜ್ಯ ಉದ್ದೇಶಕ್ಕೆ ಬಳಸದೇ ದೇಶದ ಬೆನ್ನೆಲುಬಾಗಿರುವ ರೈತರಿಗೆ ರಾತ್ರಿಯ ಜೊತೆಗೆ ಹಗಲಿನಲ್ಲೂ ಸಹ ವಿದ್ಯುತ್ ನೀಡಿ ರೈತರ ಹಿತ ಕಾಪಾಡಲಾಗುತ್ತಿದೆ. ಹಾಗೆಯೇ ಕರ್ನಾಟಕ ರಾಜ್ಯದ ಅಭಿವೃದ್ಧಿಗಾಗಿ ಬೇಡಿಕೆಗೆ ತಕ್ಕಂತೆ ವಿದ್ಯುತ್ ಸರಬರಾಜು ಮಾಡಲು 2030ಕ್ಕೆ ಅನ್ವಯವಾಗುವಂತೆ ಹಲವು ಯೋಜನೆಗಳನ್ನು ಹಮ್ಮಿಕೊಂಡಿದೆ.

2030ಕ್ಕೆ ರಾಜ್ಯಕ್ಕೆ 11 ಲಕ್ಷ 61 ಸಾವಿರದ 251 ಮಿಲಿಯನ್ ವಿದ್ಯುತ್ ಬೇಕಾಗುವ ಲೆಕ್ಕಾಚಾರವಿದ್ದು, ಅದಕ್ಕೆ ತಕ್ಕಂತೆ ವಿದ್ಯುತ್ ಉತ್ಪಾದನೆ, ಸರಬರಾಜು, ಉಳಿತಾಯ, ಶೇಖರಣೆ ಹಾಗೂ ಸುಧಾರಣಾ ಕ್ರಮಗಳಿಗೆ ಯೋಜನೆ ರೂಪಿಸಲಾಗುತ್ತಿದೆ.

ಭವಿಷ್ಯದಲ್ಲಿ ವಿದ್ಯುತ್ ಉತ್ಪಾದನೆಗಾಗಿ ಕಲ್ಬುರ್ಗಿಯಲ್ಲಿ 500 ಮೆಗಾವ್ಯಾಟ್ ಸಾಮರ್ಥ್ಯದ (UMREPP) ಸೌರ ಪಾರ್ಕ್ ಸ್ಥಾಪಿಸಲಿದೆ. ಕೇಂದ್ರ ಸರ್ಕಾರದ ನವೀಕರಿಸಬಹುದಾದ ಇಂಧನ ಮಂತ್ರಾಲಯ ರಾಜ್ಯಕ್ಕೆ PM KUSUM ನಡಿ 2020–21 ಸಾಲಿನಲ್ಲಿ 2 ಲಕ್ಷ 50 ಸಾವಿರ ಪಂಪ್‌ಸೆಟ್ ಅನುಮೋದನೆ ನೀಡಿದ್ದು, ಅದರ ಜಾರಿಗೆ ಕ್ರಮವಹಿಸಲಾಗಿದೆ. ಹೀಗೆ ರಾಜ್ಯ ಸ್ವಾವಲಂಬನೆ ಸಾಧಿಸಲು ಒತ್ತು ನೀಡಿದ್ದು, ಹೈಬ್ರಿಡ್ ಪಾರ್ಕ್, ತೇಲುವ ಸೌರ ಘಟಕ, ಇಂಧನ ಶೇಖರಣೆ, ಹಸಿರು ಹೈಡ್ರೋಜನ್‌ಗೆ ಉತ್ತೇಜನ ನೀಡುವ ಮೂಲಕ ಇಂಧನ ಕ್ಷೇತ್ರದಲ್ಲಿ ನವೀನ ತಂತ್ರಜ್ಞಾನಕ್ಕೆ ಉತ್ತೇಜಿಸಲು ಕರ್ನಾಟಕ ನವೀಕರಿಸಬಹುದಾದ ಇಂಧನ ನೀತಿ 2022–27 ಅನ್ನು ಜಾರಿಗೆ ತರಲು ಮುಂದಾಗಿದೆ.





Downloaded From: www.kpscvaani.com

## ರೈತನ ಮನಪರಿವರ್ತಿಸಿದ

# ಸಮಗ್ರ ಕೃಷಿ ಪದ್ಧತಿ



**ಆತ್ಮಹತ್ಯೆಗೆ ಯತ್ನಿಸಿದ್ದ ರೈತನ ಬದುಕನ್ನು ಬದಲಾಯಿಸಿ ಮಾದರಿ ರೈತನನ್ನಾಗಿ ಮಾಡಿದ ಸಮಗ್ರ ಕೃಷಿ ಪದ್ಧತಿ.**

ಸಂಧ್ಯಾ ಸೊರಬ

ಸಮಗ್ರ ಕೃಷಿ ಪದ್ಧತಿ ಎನ್ನುವುದು ರೈತರನ್ನು ಒಂದಲ್ಲ ಒಂದು ರೀತಿಯಲ್ಲಿ ಕೈಹಿಡಿದೇ ಹಿಡಿಯುತ್ತದೆ. ಸಾಲ ಮಾಡಿಕೊಂಡು ಕೊರಗುತ್ತಿರುವ ರೈತರ ಆದಾಯವನ್ನು ಹೆಚ್ಚಿಸಿಕೊಳ್ಳುವ ನಿಟ್ಟಿನಲ್ಲಿ ರೈತರಿಗೆ ಆತ್ಮಸ್ಥೈರ್ಯ ತುಂಬಿ, ಸಮಗ್ರ ಕೃಷಿ ಪದ್ಧತಿಯನ್ನು ಅಳವಡಿಸಿಕೊಳ್ಳುವುದಕ್ಕಾಗಿಯೇ 'ರೈತರೊಂದಿಗೊಂದು ದಿನ' ಕಾರ್ಯಕ್ರಮವನ್ನು ಸರ್ಕಾರದಿಂದ ನಡೆಸಲಾಗುತ್ತಿದೆ.

ವ್ಯವಸಾಯದಲ್ಲಿ ಸಮಗ್ರ ಕೃಷಿ ಪದ್ಧತಿಯನ್ನು ಅಳವಡಿಕೊಂಡು ತಮ್ಮ ಆದಾಯವನ್ನು ಹೇಗೆ ಪರಿಣಾಮಕಾರಿಯಾಗಿ ಹೆಚ್ಚಿಸಿಕೊಳ್ಳಬಹುದು ಎಂಬುದನ್ನು ಕೆಲವು ರೈತರು ಮಾಡಿ ತೋರಿಸಿದ್ದಾರೆ. ಅಂತವರಲ್ಲಿ ಶಿಕಾರಿಪುರ ತಾಲೂಕಿನ ಸಹಸ್ರವಳ್ಳಿ ಗ್ರಾಮದ ರೈತ ದುರ್ಗಪ್ಪ ಅಂಗಡಿ ಅವರು ಒಬ್ಬರು. ವ್ಯವಸಾಯಕ್ಕಾಗಿ ಸಾಲ ಮಾಡಿಕೊಂಡು ಆತ್ಮಹತ್ಯೆ ಮಾಡಿಕೊಳ್ಳಲು ಯತ್ನಿಸಿದ್ದ ಇವರು, ಇಂದು ಇತರ ಅನ್ನದಾತರಿಗೆ ಸ್ಫೂರ್ತಿಯಾಗಿದ್ದಾರೆ.

ಆತ್ಮಹತ್ಯೆ ಮಾಡಿಕೊಳ್ಳಲು ನಿರ್ಧರಿಸಿದ ಸಂದರ್ಭದಲ್ಲಿ ತನ್ನನ್ನು ನಂಬಿಕೊಂಡಿರುವ ಕುಟುಂಬದವರು ಇವರ ಕಣ್ಣ ಮುಂದೆ ಬರುತ್ತಾರೆ. ಆಗ ಸಾಲಕ್ಕೆ ಆತ್ಮಹತ್ಯೆಯೇ ದಾರಿಯಲ್ಲ ಎಂದು ನಿರ್ಧರಿಸಿ, ಗಟ್ಟಿ ಮನಸ್ಸಿನಿಂದ ವ್ಯವಸಾಯದಲ್ಲೇ ಆದಾಯ ಕಾಣುವ ಪಣತೊಡುತ್ತಾರೆ. ಆನಂತರ ಅವರು ತಮ್ಮ ಜಮೀನಿನಲ್ಲಿ ಸಮಗ್ರ ಕೃಷಿ ಪದ್ಧತಿಯನ್ನು ಅಳವಡಿಸಿಕೊಳ್ಳುವ ಮೂಲಕ ಹಂತ ಹಂತವಾಗಿ ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳುತ್ತಾರೆ.



Downloaded From: www.kpscvaani.com

**ಲಾಕ್‌ಡೌನ್‌ನಲ್ಲಿ ಅಧಿಕ ಆದಾಯ ಗಳಿಕೆ**

ಲಾಕ್‌ಡೌನ್ ಅವಧಿಯಲ್ಲಿ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳ ಸಲಹೆಯಂತೆ ತರಕಾರಿಗಳನ್ನು ಕೊಯ್ಲು ಮಾಡಿ, ತರಕಾರಿ ಸಾಗಿಸುವ ವಾಹನ, ಗೋಣಿಚೀಲ ಮತ್ತು ಉಪಯೋಗಿಸುವ ವಸ್ತುಗಳನ್ನು ಸೋಂಕು ನಿವಾರಕ ರಾಸಾಯನಿಕಗಳಿಂದ ಶುದ್ಧಗೊಳಿಸಿಕೊಂಡು, ತರಕಾರಿಗಳ ಮಾರಾಟಕ್ಕೆ ಸ್ಥಳೀಯ ಮಾರುಕಟ್ಟೆಯನ್ನು ಬಳಸಿಕೊಳ್ಳುವ ಮೂಲಕ ಹೆಚ್ಚಿನ ಆದಾಯವನ್ನು ಪಡೆದುಕೊಂಡಿದ್ದಾರೆ.

ಇಂತಹ ಗಟ್ಟಿಮನಸಿನ ರೈತರು ಇತರರಿಗೂ ಮಾದರಿಯಾಗಬಲ್ಲರು. ಹಾಗಾಗಿ ಈ ಅನ್ನದಾತನ ಸ್ಫೂರ್ತಿದಾಯಕ ಬದುಕನ್ನು ವಿಶ್ವವಿದ್ಯಾಲಯದಲ್ಲಿ ಪಠ್ಯವಾಗಿಸಲಾಗಿದೆ. ಹೌದು ಮಂಗಳೂರು ವಿಶ್ವವಿದ್ಯಾಲಯದ ಪದವಿ ಮಕ್ಕಳ ವಿದ್ಯಾಭ್ಯಾಸಕ್ಕೆ ದುರ್ಗಪ್ಪ ಅಂಗಡಿಯ ಬದುಕೇ ಪಠ್ಯ. ಇದು ನಮ್ಮ ಅನ್ನದಾತನಿಗೆ ದೊರೆತ ಗೌರವವೇ ಸರಿ. ಹೀಗೆ ರೈತನೊಬ್ಬನ ಯಶೋಗಾಥೆಯನ್ನು ಪಠ್ಯವಾಗಿಸಿ ಇಡೀ ರಾಜ್ಯಕ್ಕೆ ಪರಿಚಯಿಸುವಂತೆ ಮಾಡಿದ್ದು ಅಂದಿನ ಶಿವಮೊಗ್ಗದ ಜಿಲ್ಲಾಧಿಕಾರಿಯಾಗಿದ್ದ ದಯಾನಂದ್. ಸಾಧನೆಗೆ ಶೈಕ್ಷಣಿಕ ಅರ್ಹತೆಯೊಂದೇ ಮುಖ್ಯವಲ್ಲ. ಸಾಧಿಸುವ ಛಲ, ದಿಟ್ಟ ನಡೆ ಎಂಬುದನ್ನು ದುರ್ಗಪ್ಪ ಅಂಗಡಿ ತೋರಿಸಿ ಕೊಟ್ಟಿರುವುದಲ್ಲದೆ ರೈತರಿಗೆ ಸಮಗ್ರ ಕೃಷಿಯನ್ನು ಅಳವಡಿಸಿಕೊಳ್ಳುವ ಕುರಿತು ಮಾಹಿತಿಯನ್ನು ನೀಡುತ್ತಿದ್ದಾರೆ.

ಲಾಕ್‌ಡೌನ್ ಪರಿಸ್ಥಿತಿ ಮಧ್ಯೆ ಧೃತಿಗೆಡದೆ ತಾವು ಬೆಳೆದ ತರಕಾರಿಗಳನ್ನು ನೇರವಾಗಿ ಸ್ಥಳೀಯ ಮಾರುಕಟ್ಟೆಯಲ್ಲಿ ಮಾರಿ ದುರ್ಗಪ್ಪ ಅಂಗಡಿಯವರು ಲಾಭ ಕಂಡುಕೊಂಡಿದ್ದಾರೆ. ನೇರ ಮಾರುಕಟ್ಟೆಯಿಂದ ಲಾಭ ಗಳಿಸಿದ ದುರ್ಗಪ್ಪ ಅವರು ತಮ್ಮ ಕೃಷಿ ಅನುಭವವನ್ನು ಶಿವಮೊಗ್ಗ ಕೃಷಿ ವಿಶ್ವವಿದ್ಯಾಲಯದ ಮಕ್ಕಳಿಗೆ ಬೋಧನೆ ಮೂಲಕ ಧಾರೆ ಎರೆಯುತ್ತಿದ್ದಾರೆ. ಅಲ್ಲದೆ ಶಿವಮೊಗ್ಗ ಜಿಲ್ಲೆ ಕೃಷಿ ವಿಜ್ಞಾನ ಕೇಂದ್ರದಲ್ಲಿ ಸಲಹೆಗಾರರಾಗಿಯೂ ಕಾರ್ಯ ನಿರ್ವಹಿಸುತ್ತಿದ್ದಾರೆ.

ಲಾಕ್‌ಡೌನ್ ಸಮಯದಲ್ಲಿ ದೂರದ ಗ್ರಾಮಗಳಿಗೆ ಸಾಗಾಟಕ್ಕೆ ಅವಕಾಶ ಇಲ್ಲದೆ ಇದ್ದುದ್ದರಿಂದ ತಾವೇ ಖುದ್ದು ತರಕಾರಿಗಳನ್ನು ಸ್ಥಳೀಯವಾಗಿ ಮನೆ ಮನೆಗೆ ಹೋಗಿ ತರಕಾರಿಗಳನ್ನು ಮಾರಾಟ ಮಾಡಿದ್ದಾರೆ. ನೇರ ಮಾರುಕಟ್ಟೆಯ ವ್ಯವಹಾರವು ಅವರ ಮುಖದಲ್ಲಿ ಮಂದಹಾಸ ಬೀರುವ ಹಾಗೆ ಮಾಡಿತು.

ದುರ್ಗಪ್ಪ ಅಂಗಡಿಯವರು ಕಳೆದ ಕೆಲವು ವರ್ಷಗಳಿಂದ ಶಿವಮೊಗ್ಗದ ಕೃಷಿ ವಿಜ್ಞಾನ ಕೇಂದ್ರ ಮಾರ್ಗದರ್ಶನದಲ್ಲಿ ಸಮಗ್ರ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡು ವಿವಿಧ ಬೆಳೆಗಳನ್ನು ಬೆಳೆಯುತ್ತಿದ್ದು, ಜೊತೆಗೆ ತಮ್ಮ 2 ಎಕರೆ ಪ್ರದೇಶದಲ್ಲಿ, ಕೋಳಿ ಸಾಕಾಣಿಕೆ, ಜೇನು ಸಾಕಾಣಿಕೆ, ಕೃಷಿ ಹೊಂಡ, ಎರೆಹುಳುಗೊಬ್ಬರ ತಯಾರಿಕೆ ಘಟಕಗಳನ್ನು ಸ್ಥಾಪಿಸಿಕೊಂಡಿದ್ದಾರೆ. ತೋಟಗಾರಿಕೆ ಬೆಳೆಗಳಾದ ಬಾಳೆ ಮತ್ತು ಅಡಿಕೆಯ ಬೆಳೆಗಳ ಮಧ್ಯೆ ಅಂತರ ಬೆಳೆಯಾಗಿ ತರಕಾರಿ ಬೆಳೆಗಳಾದ ತೊಂಡೆಕಾಯಿ, ನುಗ್ಗೆಕಾಯಿ, ಸೌತೆಕಾಯಿ, ಟೊಮ್ಯಾಟೋ, ಬದನೆಕಾಯಿ ಮತ್ತು ಬೀನ್ಸ್ ತರಕಾರಿಗಳನ್ನು ಬೆಳೆಯುತ್ತಿದ್ದಾರೆ.

ವಿಶೇಷವೆಂದರೆ, ಯಾವುದೇ ಬೆಳೆಗೂ ಇವರು ರಾಸಾಯನಿಕಗಳನ್ನು ಬಳಸುವುದಿಲ್ಲ. ಜೀವಾಮೃತ, ಸೊಪ್ಪನ್ನು ಕೊಳೆಸಿ ತಯಾರಿಸಿದ ಗೊಬ್ಬರವನ್ನು ಬಳಸುತ್ತಾರೆ. ಕೋವಿಡ್ ಲಾಕ್‌ಡೌನ್ ಸಂದರ್ಭ ತಾವು ಬೆಳೆದ ತರಕಾರಿ, ಹಣ್ಣುಗಳನ್ನು ತಾವೇ ಖುದ್ದಾಗಿ ಮಾರಾಟ ಮಾಡಿ 3 ಲಕ್ಷ ರೂ ಆದಾಯ ಗಳಿಸಿದ್ದಾರೆ.

ಇವರ ಸಾಧನೆಯನ್ನು ಗುರುತಿಸಿ, ರಾಜ್ಯಮಟ್ಟದ ಡಾ.ವೀರೇಶ ದತ್ತಿ ಪ್ರಶಸ್ತಿ, ಕೃಷಿಕ ಸಮಾಜದಿಂದ ರಾಜ್ಯಮಟ್ಟದ ಪ್ರಶಸ್ತಿ ಸೇರಿದಂತೆ 4 ರಾಜ್ಯಮಟ್ಟದ ಪ್ರಶಸ್ತಿಗಳು, ಜಿಲ್ಲಾ ಪ್ರಶಸ್ತಿ ಸೇರಿ ವಿವಿಧ ಪ್ರಶಸ್ತಿಗಳು ದುರ್ಗಪ್ಪ ಅವರನ್ನು ಅರಸಿ ಬಂದಿವೆ. ಇತ್ತೀಚೆಗಷ್ಟೇ ಇವರ ಸಾಧನೆಯನ್ನು ಪರಿಗಣಿಸಿ ಕೃಷಿ ಸಚಿವರು ಸರ್ಕಾರದ ಪರವಾಗಿ ಇವರನ್ನು ಸನ್ಮಾನಿಸಿದರು.

ರೈತ ಉತ್ಪಾದಕರ ಸಂಘ ಹಾಗೂ ಹಾಪ್‌ಕಾಮ್ಸ್‌ಗಳ ಜೊತೆಗೆ ಸ್ಥಳೀಯವಾಗಿಯೇ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಿಕೊಂಡು, ಕಳೆದ ಎರಡ್ಮೂರು ತಿಂಗಳ ಹಿಂದೆಯಷ್ಟೇ 20 ರೂ.ನಂತೆ 20 ಕ್ವಿಂಟಾಲ್ ತೊಂಡೆಕಾಯಿ, 25 ರೂ.ನಂತೆ 5 ಕ್ವಿಂಟಾಲ್ ನುಗ್ಗೆಕಾಯಿ, 20 ರೂ.ನಂತೆ 6 ಕ್ವಿಂಟಾಲ್ ಟೊಮ್ಯಾಟೊ, 30 ರೂ.ನಂತೆ 10 ಕ್ವಿಂಟಾಲ್ ಬೀನ್ಸ್ ಅನ್ನು ಮಾರಾಟ ಮಾಡಿರುತ್ತಾರೆ. ಇದರಿಂದ ಒಟ್ಟು 54,500/– ರೂಪಾಯಿ ನಿವ್ವಳ ಆದಾಯ ಬಂದಿದೆ.

ಲಾಕ್‌ಡೌನ್ ಸಮಯದಲ್ಲಿ ಅವರು ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗದ ವ್ಯಾಪ್ತಿಯಲ್ಲಿ ಬರುವ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳಿಂದ ಮಾಹಿತಿ ಪಡೆದು ಮಾರಾಟ ಮಾಡಲು ಸೂಕ್ತ ಮತ್ತು ಪರ್ಯಾಯ ದಾರಿಯ ಬಗ್ಗೆ ಚಿಂತಿಸದಿದ್ದರೆ ತರಕಾರಿಗಳು ಹೊಲದಲ್ಲಿ ಕೊಳೆತು ನಾರುತ್ತಿದ್ದವು.

ಈಗ ಪ್ರತಿದಿನ ನೂರಾರು ಮಂದಿ ಇವರ ಹೊಲಕ್ಕೆ ಭೇಟಿ ನೀಡಿ ಮಾಹಿತಿ ಪಡೆಯುತ್ತಿರುವುದರಿಂದ ತಮ್ಮ ಜಮೀನಿನಲ್ಲಿಯೇ ಕೃಷಿ ಶಾಲೆಯೊಂದನ್ನು ಸ್ಥಾಪಿಸಬೇಕೆಂಬ ಆಸೆಯನ್ನು ಹೊಂದಿದ್ದಾರೆ. ಅವರ ಈ ಆಸೆ ಆದಷ್ಟು ಬೇಗ ಈಡೇರಿದಲ್ಲಿ, ಆ ಭಾಗದ ಯುವ ರೈತರಿಗೆ ಹೆಚ್ಚಿನ ಅನುಕೂಲವಾಗಲಿದೆ. 7975212283 ಇದು ದುರ್ಗಪ್ಪ ಅವರ ಮೊಬೈಲ್ ನಂಬರ್.



Downloaded From: www.kpscvaani.com




# ನಿಮ್ಮ ಹಣದ ಸುರಕ್ಷತೆ ನಿಮ್ಮ ಕೈಯಲ್ಲಿದೆ

ವಿ. ನಂಜುಂಡಪ್ಪ

**ಪರ್ಯಾಯ ದೂರುಗಳ ಪರಿಹಾರ ಯೋಜನೆಯಾಗಿರುವ ಒಂಬುಡ್ಸ್ ಮನ್ ವ್ಯವಸ್ಥೆಯು ಗ್ರಾಹಕರ ಹಿತ ರಕ್ಷಣೆಯಲ್ಲಿ ಮಹತ್ವದ ಪಾತ್ರವಹಿಸುತ್ತದೆ.**

ಭಾರತೀಯ ರಿಸರ್ವ್ ಬ್ಯಾಂಕ್‌ನ ಮೂಲ ಆಶಯ ಗ್ರಾಹಕರ ರಕ್ಷಣೆ. ಜಗತ್ತಿನಲ್ಲಿ ಇಂದು ಗ್ರಾಹಕನೇ ಯಜಮಾನನಾಗಿದ್ದಾನೆ. ಹೀಗಾಗಿ ಗ್ರಾಹಕರ ಹಿತಕ್ಕಾಗಿ ಆರ್.ಬಿ.ಐ 1995ರಲ್ಲೇ ತನ್ನದೇ ಆದ ಒಂಬಡ್ಸ್ ಮನ್ ವ್ಯವಸ್ಥೆಯನ್ನು ಮೊಟ್ಟ ಮೊದಲ ಬಾರಿಗೆ ರೂಪಿಸಿತು. ಆ ಬಳಿಕ ವಿಮಾ ಸಂಸ್ಥೆ, ಉದ್ಯೋಗ ಖಾತ್ರಿ ಯೋಜನೆ ಸೇರಿದಂತೆ ಹಲವಡೆ ಒಂಬುಡ್ಸ್ ಮನ್‌ಗಳನ್ನು ನಿಯೋಜಿಸುವ ಪರಿಪಾಠ ಬೆಳೆಯಿತು. ಆರ್ಥಿಕ ಕ್ಷೇತ್ರದ ಅಭಿವೃದ್ಧಿಗೆ ಅನುಗುಣವಾಗಿ, ಕಾಲಕಾಲಕ್ಕೆ ಒಂಬುಡ್ಸ್ ಮನ್ ವ್ಯವಸ್ಥೆಯನ್ನು ಆರ್.ಬಿ.ಐ ಮಾರ್ಪಾಡು ಮಾಡಿ ಉತ್ತಮಗೊಳಿಸುತ್ತಾ ಬಂದಿದೆ. ಇದನ್ನು ಪರ್ಯಾಯ ದೂರುಗಳ ಪರಿಹಾರ ಯೋಜನೆ ಎಂದು ಸಹ ಕರೆಯಲಾಗುತ್ತದೆ.

ಪ್ರತಿ ವರ್ಷ ಮಾರ್ಚ್ 15ರಂದು, ವಿಶ್ವ ಗ್ರಾಹಕರ ಹಕ್ಕುಗಳ ದಿನ ಆಚರಿಸಲಾಗುತ್ತದೆ. ಈ ನಿಟ್ಟಿನಲ್ಲಿ ಆರ್.ಬಿ.ಐ ನ ಪರ್ಯಾಯ ದೂರುಗಳ ಪರಿಹಾರ ಯೋಜನೆ ಹಾಗೂ ಇತ್ತೀಚಿಗಷ್ಟೇ ಜಾರಿಗೆ ತಂದ ಏಕೀಕೃತ ಲೋಕಪಾಲ ಯೋಜನೆ ಬಗ್ಗೆ ಅರಿವು ಮೂಡಿಸಲು ಮತ್ತು ಗ್ರಾಹಕರನ್ನು ಸಶಕ್ತಗೊಳಿಸಲು, ಆರ್.ಬಿ.ಐ ಒಂಬಡ್ಸ್ ಮನ್‌ಗಳು ತೀವ್ರ ಪ್ರಚಾರ ಅಭಿಯಾನ ಆರಂಭಿಸಿದ್ದಾರೆ. ತಂತ್ರಜ್ಞಾನ ಬೆಳೆದಂತೆ ಡಿಜಿಟಲ್ ವಂಚನೆಗಳು ಹೆಚ್ಚುತ್ತಿವೆ. ಹೀಗಾಗಿ ಡಿಜಿಟಲ್ ತಂತ್ರಜ್ಞಾನ ಬಳಸುವ ವಿಧಾನಗಳು, ಸಾಮಾನ್ಯ ಸುರಕ್ಷತೆ ಬಗ್ಗೆ ಜನಜಾಗೃತಿ ಮೂಡಿಸುವ ಪ್ರಯತ್ನದಲ್ಲಿ ತೊಡಗಿವೆ.

ಈ ಹಿಂದೆ ಇದ್ದ ಮೂರೂ ಲೋಕಪಾಲ ಯೋಜನೆಗಳು ಎಂದರೆ ಬ್ಯಾಂಕುಗಳು, ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳು ಮತ್ತು ಬ್ಯಾಂಕಿಂಗೇತರ ವ್ಯವಸ್ಥೆಯ ಪಾಲುದಾರರುಗಳಿಗೆ ಅನ್ವಯಿಸುವ ಲೋಕಪಾಲ ಯೋಜನೆಗಳನ್ನು ಒಗ್ಗೂಡಿಸಿ ರಿಸರ್ವ್ ಬ್ಯಾಂಕ್ ಏಕೀಕೃತ ಒಂಬುಡ್ಸ್ ಮನ್ ಯೋಜನೆ - 2021 ಅನ್ನು ಜಾರಿಗೆ ತರಲಾಗಿದೆ. ಆರ್.ಬಿ.ಐ ನಿಯಂತ್ರಣದ ಸಂಸ್ಥೆಗಳಲ್ಲಿ ಸೇವಾ ನ್ಯೂನತೆಗೆ ಸಂಬಂಧಿಸಿದ ಗ್ರಾಹಕರ ದೂರುಗಳನ್ನು, ಆ ಸಂಸ್ಥೆಗಳು ತೃಪ್ತಿಕರವಾಗಿ ಬಗೆಹರಿಸದೇ ಇದ್ದ ಸಂದರ್ಭದಲ್ಲಿ ಅಥವಾ 30 ದಿನಗಳ ಒಳಗೆ ಉತ್ತರಿಸದೆ ಇದ್ದಲ್ಲಿ ಅಂತಹ ದೂರುಗಳನ್ನು ಈ ಯೋಜನೆಯಡಿ ಶುಲ್ಕರಹಿತವಾಗಿ ಬಗೆಹರಿಸಲಾಗುತ್ತದೆ.

ಈ ಒಂಬುಡ್ಸ್ ಮನ್ ಯೋಜನೆ ವ್ಯಾಪ್ತಿಗೆ ವಾಣಿಜ್ಯ ಬ್ಯಾಂಕುಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳು, ಶೆಡ್ಯೂಲ್ಡ್ (ಅನುಸೂಚಿತ) ಪ್ರಾಥಮಿಕ (ನಗರ) ಸಹಕಾರಿ ಬ್ಯಾಂಕುಗಳು ಮತ್ತು ರೂ. 50 ಕೋಟಿ, ಅದಕ್ಕಿಂತ ಹೆಚ್ಚಿನ ಠೇವಣಿ ಹೊಂದಿರುವ ಇತರ ನಗರ ಸಹಕಾರಿ ಬ್ಯಾಂಕುಗಳು, ಎಲ್ಲಾ ಠೇವಣಿ-ಸ್ವೀಕರಿಸುವ ಬ್ಯಾಂಕೇತರ ಹಣಕಾಸು ಕಂಪನಿಗಳು ಮತ್ತು ಗ್ರಾಹಕರೊಂದಿಗೆ ವ್ಯವಹಾರ ಹೊಂದಿದ್ದು, ರೂ. 100 ಕೋಟಿ ಮತ್ತು ಅದಕ್ಕಿಂತ ಹೆಚ್ಚಿನ ಸಂಪತ್ತು ಹೊಂದಿರುವ ಎನ್.ಬಿ.ಎಫ್.ಸಿ ಗಳು ಮತ್ತು ಬ್ಯಾಂಕಿಂಗೇತರ ವ್ಯವಸ್ಥೆಯ ಪಾಲುದಾರರು ಈ ವ್ಯಾಪ್ತಿಗೆ ಒಳಪಡಲಿದ್ದಾರೆ.

ಇಲ್ಲಿ ನೊಂದ ಗ್ರಾಹಕನಿಗೆ ಸಂಬಂಧಿಸಿದಂತೆ ನಿಯಂತ್ರಿತ ಸಂಸ್ಥೆಗಳ ವಾಣಿಜ್ಯ ವಿಭಾಗದ ತೀರ್ಪು, ನಿರ್ಧಾರಕ್ಕೆ ಸಂಬಂಧಿಸಿದ ದೂರುಗಳು, ಹೊರಗುತ್ತಿಗೆ ಒಪ್ಪಂದ, ಮಾರಾಟಗಾರ ಮತ್ತು ಬ್ಯಾಂಕಿನ ನಡುವಿನ ವಿವಾದ ಸಂಬಂಧಿತ ದೂರುಗಳಿಗೆ ಅವಕಾಶವಿಲ್ಲ. ಉಳಿದಂತೆ ದೂರುದಾರರು, ದೂರು ದಾಖಲಿಸುವ ಮೊದಲು ಸಂಬಂಧಪಟ್ಟ ನಿಯಂತ್ರಿತ ಸಂಸ್ಥೆಗೆ ಲಿಖಿತ ದೂರು ನೀಡಿರಬೇಕು. 30 ದಿನಗಳ ಒಳಗೆ ದೂರು



Downloaded From: www.kpscvaani.com

### ಆನ್ ಲೈನ್ ವಂಚನೆ ತಡೆಗಟ್ಟಲು ವಹಿಸಬೇಕಾದ ಕ್ರಮಗಳು

- ನಿಮ್ಮ ಬ್ಯಾಂಕ್ ಖಾತೆಯ ಲಾಗಿನ್ ಐಡಿ, ಪಾಸ್‌ವರ್ಡ್, ಪಿನ್ ಅಥವಾ ಒಟಿಪಿಯನ್ನು ಬ್ಯಾಂಕ್ ಅಧಿಕಾರಿಗಳು ಒಳಗೊಂಡು ಯಾರೊಂದಿಗೂ ಹಂಚಿಕೊಳ್ಳಬಾರದು.
- ಕೆ.ವೈ.ಸಿ ಯನ್ನು ನವೀಕರಿಸುವ/ತ್ವರಿತಗೊಳಿಸುವ ಆಫರ್‌ಗಳಿಗೆ ಪ್ರತಿಕ್ರಿಯಿಸಬಾರದು. ಬ್ಯಾಂಕ್/ಎನ್‌ಬಿಎಫ್‌ಸಿ/ಇ–ವ್ಯಾಲೆಟ್ ಪೂರೈಕೆದಾರರ ಅಧಿಕೃತ ವೆಬ್‌ಸೈಟ್ ಅನ್ನು ಬಳಸಬೇಕು ಅಥವಾ ಶಾಖೆಯನ್ನು ಸಂಪರ್ಕಿಸಬೇಕು. ಇಂಟರ್ನೆಟ್ ಸರ್ಚ್ ಇಂಜಿನ್‌ಗಳಲ್ಲಿನ ಸಂಪರ್ಕ ಸಂಖ್ಯೆಗಳು ಮೋಸದಾಯಕವಾಗಿರಬಹುದು ಎಂಬ ಬಗ್ಗೆ ಎಚ್ಚರ ಅಗತ್ಯ.
- ನಿಮ್ಮ ಫೋನ್/ಸಾಧನದಲ್ಲಿ ಯಾವುದೇ ಅಪರಿಚಿತ ಅಪ್ಲಿಕೇಶನ್ ಅನ್ನು ಡೌನ್‌ಲೋಡ್ ಮಾಡಬೇಡಿ. ಅಪ್ಲಿಕೇಶನ್ ನಿಮ್ಮ ಗೌಪ್ಯ ಮಾಹಿತಿಯನ್ನು ರಹಸ್ಯವಾಗಿ ಉಪಯೋಗಿಸುವ ಸಾಧ್ಯತೆಯಿದೆ.
- ಹಣದ ಸ್ವೀಕೃತಿಯನ್ನು ಒಳಗೊಂಡಿರುವ ವಹಿವಾಟುಗಳಿಗೆ ಬಾರ್‌ಕೋಡ್/ಕ್ಯೂಆರ್ ಕೋಡ್‌ಗಳನ್ನು ಸ್ಕ್ಯಾನ್ ಮಾಡುವ ಅಥವಾ ಎಂ.ಪಿ.ಐ.ಎನ್ ನಮೂದಿಸುವ ಅಗತ್ಯವಿಲ್ಲ.
- ಯು.ಪಿ.ಐ ಅಪ್ಲಿಕೇಶನ್ ನೋಂದಣಿಗೆ ಯಾವುದೇ ಎಸ್.ಎಂ.ಎಸ್ ಫಾರ್ವರ್ಡ್ ಮಾಡಬೇಕಿಲ್ಲ.
- ನೀವು ಮಾಡಿರದ ವಹಿವಾಟಿಗೆ ನಿಮ್ಮ ಖಾತೆಯಿಂದ ಡೆಬಿಟ್ ಮಾಡಲು ಒ.ಟಿ.ಪಿ ಸ್ವೀಕರಿಸಿದರೆ, ತಕ್ಷಣವೇ ನಿಮ್ಮ ಬ್ಯಾಂಕ್ ಅಥವಾ ಇ–ವ್ಯಾಲೆಟ್‌ಗೆ ತಿಳಿಸಿ.
- ವಹಿವಾಟಿಗಾಗಿ ನೀವು ಡೆಬಿಟ್ ಎಸ್.ಎಂ.ಎಸ್ ಸ್ವೀಕರಿಸಿದರೆ, ತಕ್ಷಣವೇ ನಿಮ್ಮ ಬ್ಯಾಂಕ್ ಇಲ್ಲವೆ ಇ–ವ್ಯಾಲೆಟ್‌ಗೆ ತಿಳಿಸುವ ಜತೆಗೆ ಯು.ಪಿ.ಐ ಸೇರಿದಂತೆ ಎಲ್ಲಾ ಡೆಬಿಟ್ ಮೋಡ್‌ಗಳನ್ನು ತಕ್ಷಣವೇ ನಿರ್ಬಂಧಿಸಬೇಕು.
- ಇ–ಕಾಮರ್ಸ್, ಸಾಮಾಜಿಕ ಮಾಧ್ಯಮ ಸೈಟ್‌ಗಳಿಗೆ ಹಾಗೂ ನಿಮ್ಮ ಬ್ಯಾಂಕ್ ಖಾತೆಗೆ ಲಿಂಕ್ ಮಾಡಿದ ಇಮೇಲ್‌ಗಳಿಗೆ ಒಂದೇ ಪಾಸ್‌ವರ್ಡ್‌ಗಳನ್ನು ಉಪಯೋಗಿಸಬಾರದು.
- ಎಟಿಎಂನಲ್ಲಿ ಅಪರಿಚಿತರಿಂದ ಸಹಾಯ ಪಡೆಯಬಾರದು. ಪಿನ್ ಹಾಕುವಾಗ ಯಾವಾಗಲೂ ಎಟಿಎಂ ಕೀಪ್ಯಾಡ್ ಅನ್ನು ನಿಮ್ಮ ಕೈಯಿಂದ ಮುಚ್ಚಿಕೊಳ್ಳಬೇಕು.
- ಅಪರಿಚಿತ ಲಿಂಕ್‌ಗಳನ್ನು ಕ್ಲಿಕ್ ಮಾಡಬಾರದು, ಭವಿಷ್ಯದಲ್ಲಿ ಅವುಗಳ ಬಳಕೆ ತಪ್ಪಿಸಲು ಎಸ್.ಎಂ.ಎಸ್ ಅಥವಾ ಇಮೇಲ್ ಅನ್ನು ತಕ್ಷಣವೇ ಅಳಿಸಬೇಕು. ವಿಶೇಷವಾಗಿ ಹಣಕಾಸಿನ ರುಜುವಾತುಗಳನ್ನು ನಮೂದಿಸುವ ಅಗತ್ಯವಿರುವೆಡೆ ವೆಬ್‌ಸೈಟ್ ವಿವರಗಳನ್ನು ಪರಿಶೀಲಿಸಬೇಕು.
- ಸಾರ್ವಜನಿಕ, ಅಪರಿಚಿತ ಚಾರ್ಜಿಂಗ್ ಪೋರ್ಟ್‌ಗಳು, ಕೇಬಲ್‌ಗಳ ಬಳಕೆಯಿಂದ ದೂರ ಇರಬೇಕು.
- ಉದ್ಯೋಗ ನೀಡುವ ನಿಜವಾದ ಕಂಪನಿ ಎಂದಿಗೂ ಹಣ ಕೇಳುವುದಿಲ್ಲ ಎಂಬುದು ಸದಾ ನೆನಪಿನಲ್ಲಿರಲಿ.
- ನಿಮ್ಮ ಪರವಾಗಿ ಆರ್.ಬಿ.ಐ ನಲ್ಲಿ ಹಣ ಠೇವಣಿ ಮಾಡುವ, ವಿದೇಶಿ ರವಾನೆ, ಕಮಿಷನ್ ಸ್ವೀಕೃತಿ ಅಥವಾ ಲಾಟರಿ ಗೆದ್ದಿರುವುದಾಗಿ ಹೇಳಿ ಯಾಮಾರಿಸುವವರಿಂದ ದೂರ ಇರಿ.
- ನಿಮ್ಮ ಕಾರ್ಡ್‌ಗಳನ್ನು ಸುರಕ್ಷಿತಗೊಳಿಸಿ, ವಹಿವಾಟುಗಳಿಗೆ ದೈನಂದಿನ ಮಿತಿ ನಿಗದಿಪಡಿಸಿ. ನೀವು ದೇಶೀಯ, ಅಂತರರಾಷ್ಟ್ರೀಯ ವಹಿವಾಟುಗಳಿಗೆ ಮಿತಿ ಹೇರಿಕೊಳ್ಳುವ ಜತೆಗೆ ಕಾರ್ಡ್‌ಗಳನ್ನು ಸಕ್ರಿಯ/ ನಿಷ್ಕ್ರಿಯಗೊಳಿಸಬಹುದು. ಈ ಮೂಲಕ ನಷ್ಟದ ಪ್ರಮಾಣವನ್ನು ಕಡಿಮೆಗೊಳಿಸಬಹುದು.

ಪರಿಹರಿಸದಿದ್ದಲ್ಲಿ ಅಥವಾ ದೂರುದಾರರಿಗೆ ಸಂಸ್ಥೆಯು ನೀಡಿದ ಉತ್ತರ ಸಮಾಧಾನಕಾರವಾಗದೇ ಇದ್ದಲ್ಲಿ, ಸಂಬಂಧಪಟ್ಟ ನಿಯಂತ್ರಿತ ಸಂಸ್ಥೆ ನೀಡಿದ ಉತ್ತರ ತಲುಪಿದ ದಿನಾಂಕದಿಂದ ಒಂದು ವರ್ಷದ ಒಳಗೆ ಯಾವುದೇ ಸಮಯದಲ್ಲಿ ಆರ್ ಬಿ ಐ ಒಂಬುಡ್ಸ್ ಮನ್ ರನ್ನ ಸಂಪರ್ಕಿಸಬಹುದಾಗಿದೆ.

ದೂರುಗಳನ್ನು ಆನ್ ಲೈನ್ ಮೂಲಕ– ಭಾರತೀಯ ರಿಸರ್ವ್ ಬ್ಯಾಂಕಿನ ದೂರು ನಿರ್ವಹಣೆ ವ್ಯವಸ್ಥೆ (ಸಿ ಎಂ ಎಸ್) ಪೋರ್ಟಲ್ ಮೂಲಕ https://cms.rbi.org.in, ಈ–ಮೇಲ್ ಮೂಲಕ– crpc@rbi.org.in ಸಲ್ಲಿಸಬಹುದು. ಲಿಖಿತ/ಅಂಚೆ ಮೂಲಕ ಸಲ್ಲಿಸುವ ದೂರುಗಳನ್ನು 'ಕೇಂದ್ರೀಕೃತ ಸ್ವೀಕೃತಿ ಮತ್ತು ಸಂಸ್ಕರಣಾ ಕೇಂದ್ರ (ಸಿ.ಆರ್.ಪಿ.ಸಿ), 4ನೆ ಮಹಡಿ, ಭಾರತೀಯ ರಿಸರ್ವ್ ಬ್ಯಾಂಕ್, ಸೆಕ್ಟರ್–17 ಸೆಂಟ್ರಲ್ ವಿಸ್ತಾ, ಚಂಡೀಗಢ – 160017' ಈ ವಿಳಾಸಕ್ಕೆ ಕಳುಹಿಸಬಹುದು.

ಆರ್ ಬಿ ಐ ಒ ಎಸ್ ಮತ್ತು ಸಿಇಪಿಸಿ ಅಡಿಯಲ್ಲಿ ಬರುವ ಸಂಸ್ಥೆಗಳ ಹೆಸರುಗಳು ಸೇರಿದಂತೆ ಹೆಚ್ಚಿನ ಮಾಹಿತಿಯನ್ನು https://cms.rbi.org.in ಜಾಲತಾಣ ಅಥವಾ ಶುಲ್ಕ ರಹಿತ ದೂರವಾಣಿ ಸಂಖ್ಯೆ 14448 ಮೂಲಕ ಪಡೆಯಬಹುದು.

ಟೋಲ್–ಫ್ರೀ ಸಂಖ್ಯೆಯ (14448) ಸಂಪರ್ಕ ಕೇಂದ್ರ ಸಿ.ಆರ್.ಪಿ.ಸಿಯ ಭಾಗವಾಗಿದ್ದು, ದೂರುದಾರರಿಗೆ ದೂರುಗಳನ್ನು ದಾಖಲಿಸಲು ಮತ್ತು ದಾಖಲಿಸಿದ ದೂರುಗಳ ಮಾಹಿತಿ ಒದಗಿಸಲು ಈ ಸಹಾಯವಾಣಿ ಕಾರ್ಯನಿರ್ವಹಿಸುತ್ತದೆ. ಹಿಂದಿ ಮತ್ತು ಇಂಗ್ಲಿಷ್ ಜೊತೆಗೆ ಕನ್ನಡ ಸೇರಿ 9 ಪ್ರಾದೇಶಿಕ ಭಾಷೆಗಳಲ್ಲಿ ಸೇವೆ ದೊರೆಯುತ್ತದೆ. ಪತ್ರ ಮತ್ತು ಇಮೇಲ್ ಮೂಲಕ ದೂರುಗಳನ್ನು ಯಾವುದೇ ಭಾಷೆಯಲ್ಲಾದರೂ ಒಂಬಡ್ಸ್ ಮನ್‌ಗೆ ಸಲ್ಲಿಸಬಹುದು. ಸಿ.ಎಂ.ಎಸ್. ಪೋರ್ಟಲ್‌ನಲ್ಲಿ ಪ್ರಸ್ತುತ, ಹಿಂದಿ ಮತ್ತು ಇಂಗ್ಲಿಷ್‌ನಲ್ಲಿ ಮಾತ್ರ ದೂರು ಸಲ್ಲಿಸಲು ಅವಕಾಶವಿದೆ. ಆದಾಗ್ಯೂ, ಯಾವುದೇ ಭಾಷೆಯಲ್ಲಿ ದೂರಿನ ವಿವರಣೆಗಳನ್ನು ಪೋರ್ಟಲ್‌ನಲ್ಲಿ ಇರುವ ವಿವರಣೆ ಪೆಟ್ಟಿಗೆಯಲ್ಲಿ ಒದಗಿಸಬಹುದು. ■



Downloaded From: www.kpscvaani.com

# ಅಚ್ಚರಿ ಮೂಡಿಸಿರುವ ಬಿದನೂರಿನಲ್ಲಿ ಪತ್ತೆಯಾದ ರಾಕೆಟ್‌ಗಳು





**ಸಾವಿರಕ್ಕೂ ಹೆಚ್ಚು ಅಪರೂಪದ ಯುದ್ಧ ರಾಕೆಟ್‌ಗಳು ಶಿವಮೊಗ್ಗ ಜಿಲ್ಲೆಯ ಬಿದನೂರು ಗ್ರಾಮದಲ್ಲಿ ಪತ್ತೆ ಆಗಿರುವುದು ಅಚ್ಚರಿ ಮೂಡಿಸಿದೆ.**

ಎಲ್. ವತ್ಸಲಾ
ಎಸ್.ಸಿ. ಅಮೃತ

ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲೂಕಿನ ನಗರ (ಬಿದನೂರು) ಗ್ರಾಮದ ತೋಟವೊಂದರ ಬಾವಿಯಲ್ಲಿ ಯುದ್ಧಕ್ಕೆ ಬಳಸಲಾಗುತ್ತಿದ್ದ ಸಾವಿರಾರು ರಾಕೆಟ್‌ಗಳು ಕಂಡುಬಂದಿದ್ದು ಎಲ್ಲರಲ್ಲೂ ಅಚ್ಚರಿ ಮೂಡಿಸಿದೆ! ಇದರ ಬೆನ್ನತ್ತಿ ಹೊರಟಾಗ ಸಿಕ್ಕ ಮಾಹಿತಿ ಇನ್ನೂ ರೋಚಕವಾಗಿದೆ.

ಬಿದನೂರಿನ ನಾಗರಾಜ್ 2002ರ ಏಪ್ರಿಲ್‌ನಲ್ಲಿ ತಮ್ಮ ತೋಟದ ಬಾವಿಯಲ್ಲಿ ನೀರು ಬತ್ತಿ ಹೋಗಿದ್ದರಿಂದ 30 ಅಡಿ ಆಳದವರೆಗೆ ಬಾವಿಯಲ್ಲಿ ಹೂಳೆತ್ತಿಸಿದರು. ಆಗ 30 ಅಡಿ ಆಳದಲ್ಲಿ ರಾಕೆಟ್ ಮಾದರಿಯ ಕಬ್ಬಿಣದ ತುಂಡುಗಳು ಕಂಡು ಬಂದವು. ಇವುಗಳನ್ನು ಮೊದಲು ಶೆಲ್‌ಗಳೆಂದು ತಿಳಿದು ಶಿವಮೊಗ್ಗದ ಶಿವಪ್ಪನಾಯಕ ಅರಮನೆಯ ಸರ್ಕಾರಿ ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಿಸಿಡಲಾಗಿತ್ತು. 2007ರಲ್ಲಿ ಬೆಂಗಳೂರಿನ ವಸ್ತುಸಂಗ್ರಹಾಲಯದಲ್ಲಿ ಕಂಡು ಬಂದ ರಾಕೆಟ್‌ಗಳ ಆಧಾರದ ಮೇಲೆ ಇವುಗಳನ್ನು ರಾಕೆಟ್‌ಗಳೆಂದು ಗುರುತಿಸಲಾಯಿತು.

ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ವತಿಯಿಂದ 2002 ರಲ್ಲಿ ಬಾವಿಯಿಂದ ತೆಗೆದು ಹಾಕಲಾದ ಮಣ್ಣಿನಲ್ಲಿ ಮೂರು ದಿನಗಳ ಕಾಲ ಉತ್ಖನನ ಮಾಡಿದಾಗ 1,700 ರಾಕೆಟ್‌ಗಳು, ಕಠಾರಿ ಹಿಡಿ ಇತರೆ ಪುರಾತನ ವಸ್ತುಗಳು ದೊರೆತಿವೆ.



Downloaded From: www.kpscvaani.com



ಇವುಗಳನ್ನು ಸರ್ಕಾರಿ ವಸ್ತುಸಂಗ್ರಹಾಲಯ ಮತ್ತು ಶಿವಪ್ಪನಾಯಕ ಅರಮನೆಯಲ್ಲಿ ಸಂಗ್ರಹಿಸಿ ಹೆಚ್ಚಿನ ಅಧ್ಯಯನಕ್ಕಾಗಿ ಪ್ರಯೋಗಾಲಯಕ್ಕೆ ಕಳುಹಿಸಿ ಪರೀಕ್ಷೆಗೆ ಒಳಪಡಿಸಲಾಗಿದೆ.

ಕೆಳದಿ ಅರಸರ ಕೊನೆಯ ರಾಜಧಾನಿ ಬಿದನೂರು. ಈ ಬಿದನೂರು ಕೋಟೆಯಿಂದ ಸುಮಾರು 1 ಕಿ.ಮೀ ದೂರದಲ್ಲಿ ಅಂದರೆ ಮಠದ ಸ್ಥಳದಿಂದ ಮುಂದೆ ನೂರು ಮೀಟರ್ ಅಂತರದಲ್ಲಿ ಈ ರಾಕೆಟ್‌ಗಳು ಬಾವಿಯಲ್ಲಿ ದೊರೆತವು. ರಾಜಧಾನಿಯಾಗಿದ್ದಾಗ ಇಲ್ಲಿ ಒಂದು ಲಕ್ಷಕ್ಕೂ ಅಧಿಕ ಮನೆಗಳಿದ್ದರಿಂದ ಈ ಗ್ರಾಮವನ್ನು ನಗರವೆಂದು ಕರೆಯಲಾಗುತ್ತಿತ್ತು.

ಕ್ರಿ.ಶ. 1759ರಲ್ಲಿ ಮೈಸೂರು ಸೇನಾಧಿಪತಿಯಾಗಿದ್ದ ನವಾಬ ಹೈದರಾಲಿ ಬಿದನೂರನ್ನು ವಶಪಡಿಸಿಕೊಂಡನು. ಇತಿಹಾಸಕಾರ ಕರ್ಮಾನಿ ಈ ಬಗ್ಗೆ ತಿಳಿಸಿದ್ದಾನೆ. ಹೈದರನು ಬಿದನೂರನ್ನು ಗೆದ್ದು ಇದಕ್ಕೆ 'ಹೈದರ್ ನಗರ' ಎಂದು ಮರುನಾಮಕರಣ ಮಾಡುತ್ತಾನೆ. ಇಲ್ಲಿ ನಾಣ್ಯಗಳನ್ನು ಸಹಾ ಟಂಕಿಸಿದ್ದಾನೆ. ಕೆಳದಿ ನಾಯಕರ ಕಾಲದಲ್ಲಿ ನಗರದಲ್ಲಿ ಟಂಕಸಾಲೆಯಿದ್ದು, ಇದನ್ನೇ ಹೈದರಾಲಿ ಮುಂದುವರೆಸಿಕೊಂಡು ಇಲ್ಲಿಯ ಪರಿಣಿತರನ್ನು ಬಳಸಿಕೊಂಡಿರುವ ಸಾಧ್ಯತೆಗಳಿದ್ದು, ನಗರದಲ್ಲಿಯೂ ರಾಕೆಟ್‌ಗಳನ್ನು ತಯಾರು ಮಾಡಲು ಈ ಪರಣಿತರನ್ನು ಬಳಸಿಕೊಂಡಿರಬಹುದು ಎನ್ನಲಾಗಿದೆ.

ಟಿಪ್ಪುವಿನ ನಾಲ್ಕು ತಾರಾಮಂಡಲಗಳಲ್ಲಿ ನಗರವು ಒಂದಾಗಿತ್ತು, ಉಳಿದವು ಬೆಂಗಳೂರು, ಶ್ರೀರಂಗಪಟ್ಟಣ ಹಾಗೂ ಚಿತ್ರದುರ್ಗ. ಆದರೆ ಈಗಾಗಲೇ ಶ್ರೀರಂಗಪಟ್ಟಣದಲ್ಲಿ ರಾಕೆಟ್ ಸಂಗ್ರಹಣೆಯ ಉಗ್ರಾಣ ಸಿಕ್ಕಿದೆ. ನಗರದಲ್ಲಿ ರಾಕೆಟ್‌ಗಳು ದೊರೆತಿವೆ. ಆದರೆ ತಯಾರಿಕಾ ಘಟಕ ದೊರೆತಿರುವುದಿಲ್ಲ. ಈ ಬಗ್ಗೆ ಹೆಚ್ಚಿನ ಅಧ್ಯಯನ, ಅನ್ವೇಷಣೆ ಹಾಗೂ ಸಂಶೋಧನೆಯಿಂದ ಕಂಡುಹಿಡಿಯಬಹುದಾಗಿದೆ.

ಕನ್ನಡದಲ್ಲಿ ಬಿದನೂರಿಗೆ ಇನ್ನೊಂದು ಹೆಸರು 'ಬಿದಿರೂರು', ಅಂದರೆ ಬಿದಿರಿನ ಊರು ಎಂದು. ದಟ್ಟ ಕಾಡಿರುವ ಈ ಪ್ರದೇಶವು ಈ ರಾಕೆಟ್‌ಗಳಲ್ಲಿ ಕಂಡುಬರುವ ಬಿದಿರಿನ ಕೋಲುಗಳ ಉಗಮ ಸ್ಥಾನವಾಗಿರಬಹುದು ಹಾಗೂ ರಾಕೆಟ್‌ಗಳಿಗೆ ತುಂಬುತಿದ್ದ ಮದ್ದಿಗೆ ಬೇಕಾದ ಇದ್ದಿಲು ಇತರೆ ವಸ್ತುಗಳು ಈ ಕಾಡು ಪ್ರದೇಶದಲ್ಲಿ ದೊರೆಯುತ್ತಿದ್ದರಿಂದ ಇಲ್ಲಿ ರಾಕೆಟ್‌ಗಳನ್ನು ತಯಾರಿಸಲಾಗಿದೆ ಎನ್ನಬಹುದು.

ರಾಕೆಟ್‌ಗಳ ರಚನೆಯು ಕಬ್ಬಿಣದಿಂದ ಕೂಡಿದ ಸಿಲೆಂಡರಿಕ್ (ಕೊಳವೆ) ಆಕಾರದಲ್ಲಿವೆ. ರಾಕೆಟ್‌ನ ಎರಡೂ ತುದಿಗಳನ್ನು ಲೋಹದ ಬಿಲ್ಲೆಗಳಿಂದ ಮುಚ್ಚಲಾಗಿದೆ. ಹಿಂಭಾಗದಲ್ಲಿ ದುಂಡಗಿನ ರಂಧ್ರವಿದ್ದು ಇಲ್ಲಿ ಬತ್ತಿ ಇರುವುದು ಕಂಡುಬಂದಿದೆ. ಹಾಗೂ ಮುಂಭಾಗದಲ್ಲಿ ಸುಕ್ಕಗಳ ಸುತ್ತ ಕಂದುಬಣ್ಣದ ವಸ್ತುವಿರುವುದು ಕಂಡುಬಂದಿದೆ. ಸಿಕ್ಕಿರುವ ರಾಕೆಟ್‌ಗಳಲ್ಲಿ ಹತ್ತು ರಾಕೆಟ್‌ಗಳ ಅಳತೆ, ತೂಕ ಮತ್ತು ವ್ಯಾಸವನ್ನು ಗುರುತಿಸಲಾಗಿದೆ.

ಶಿವಮೊಗ್ಗದ ಪರ್ಫೆಕ್ಟ್ ಅಲಾಯ್ ಕಾಂಪೊನೆಂಟ್ಸ್ ಲಿಮಿಟೆಡ್‌ನ ಪ್ರಯೋಗಾಲಯದಲ್ಲಿ ರಾಕೆಟ್‌ಗಳನ್ನು

## ರಾಕೆಟ್‌ಗಳ ಇತಿಹಾಸ

**ಕ್ರಿ.ಶ. 1044ರಲ್ಲಿ ಚೀನಾದ ವುಂ-ಚಿಂಗ್-ತ್ಸುಂಗ್-ಯೋ ಎಂಬಾತನು ಮೊದಲು ಸಿಡಿಮದ್ದಿನ ಪುಡಿಯನ್ನು ಕಂಡುಹಿಡಿದನು. ನಂತರ ಕ್ರಿ.ಶ. 13ನೇ ಶತಮಾನದಲ್ಲಿ ಪೇಪರ್ ಹಾಗೂ ಬೊಂಬು ರಾಕೆಟ್‌ಗಳನ್ನು, ಪಟಾಕಿಗಳನ್ನು ಚೀನಾದವರು ಮಂಗೋಲಿಯನ್ನರ ವಿರುದ್ಧ ಬಳಸಿದರು. ಕ್ರಿ.ಶ.1258 ರ ವೇಳೆಗೆ ಮಂಗೋಲಿಯನ್ನರಿಂದ ಮದ್ದು ತುಂಬಿದ ರಾಕೆಟ್‌ಗಳು ಯೂರೋಪಿನವರೆಗೂ ಹರಡಿದವು. ನಂತರ ಭಾರತಕ್ಕೂ ಹರಡಿ ಮೊಘಲರ ಭೂ ಸೇನೆಯ ಆಯುಧಾಗಾರದ ಒಂದು ಭಾಗವಾದವು.**

## ವಿಶ್ವದಲ್ಲಿ ಇಲ್ಲಿಯವರೆಗೆ ದೊರೆತಿರುವ ರಾಕೆಟ್‌ಗಳು:

**ಇಂಗ್ಲೆಂಡ್‌ನ ವೂಲ್ವಿಚ್ ವಸ್ತುಸಂಗ್ರಹಾಲಯದಲ್ಲಿ ಎರಡು ರಾಕೆಟ್‌ಗಳು, ಬೆಂಗಳೂರಿನ ಸರ್ಕಾರಿ ವಸ್ತುಸಂಗ್ರಹಾಲಯದಲ್ಲಿ ಮೂರು ರಾಕೆಟ್‌ಗಳು, ಪಶ್ಚಿಮ ಬಂಗಾಳದ ಮುರ್ಷಿದಬಾದ್‌ನ ಹಜದ್ವಾರಿ ವಸ್ತುಸಂಗ್ರಹಾಲಯದಲ್ಲಿ ಒಂದು ರಾಕೆಟ್ ಅನ್ನು ಕಾಣಬಹುದು. ಈ ಎರಡು ಶತಮಾನಗಳ ಕಾಲಾವಧಿಯಲ್ಲಿ ಇಡೀ ಪ್ರಪಂಚದಲ್ಲಿಯೇ ಪತ್ತೆ ಹಚ್ಚಲ್ಪಟ್ಟಿರುವ ರಾಕೆಟ್‌ಗಳು ಆರು ಮಾತ್ರ ಎನ್ನುವುದು ಇತಿಹಾಸ ತಜ್ಞರಿಗೆ ರಾಕೆಟ್ ಸಂಶೋಧಕರಿಗೆ ಗೊಂದಲವನ್ನುಂಟು ಮಾಡಿದೆ. ವಸ್ತುಸಂಗ್ರಹಾಲಯದಲ್ಲಿ ಬೆರಳೆಣಿಕೆಯಷ್ಟು ರಾಕೆಟ್‌ಗಳಿರುವುದರಿಂದ ಇವುಗಳ ಬಗ್ಗೆ ಹೆಚ್ಚಿನ ಸಂಶೋಧನೆ ಆಗಿಲ್ಲ ಎನ್ನಬಹುದು. ಆದರೀಗ ಅಚ್ಚರಿ ಎನ್ನುವಂತೆ ಶಿವಮೊಗ್ಗದ ಬಿದನೂರಿನಲ್ಲಿ ಸಾವಿರಕ್ಕೂ ಹೆಚ್ಚು ರಾಕೆಟ್‌ಗಳು ಸಿಕ್ಕಿರುವುದು ಇತಿಹಾಸ ತಜ್ಞರಲ್ಲಿ ಹೊಸ ಕುತೂಹಲ ಮೂಡಿಸಿದೆ.**



Downloaded From: www.kpscvaani.com

ಪರೀಕ್ಷೆಗೆ ಒಳಪಡಿಸಲಾಗಿ, ರಾಕೆಟ್‌ಗಳ ಒಳಗಿರುವ ಮದ್ದು ಹಾಗೂ ಲೋಹದ ಬೋರಿಂಗುಗಳ (ಕಣಗಳ) ವೆಟ್ ಅನಾಲಿಸಿಸ್ ಮಾಡಲಾಯಿತು. ಈ ಫಲಿತಾಂಶವನ್ನಾಧರಿಸಿ ಮುಂದಿನ ಅಧ್ಯಯನ ನಡೆಸಲಾಯಿತು.

ಈ ರಾಕೆಟ್‌ಗಳು ಕಡಿಮೆ ಇಂಗಾಲ ಅಂಶವುಳ್ಳ ಉಕ್ಕಿನದ್ದು ಎಂಬುದು ಸ್ಪಷ್ಟವಾಗಿದೆ. ಸಿಲಿಕಾನ್, ಮ್ಯಾಂಗನೀಸ್, ಗಂಧಕ, ರಂಜಕ ಇತ್ಯಾದಿಗಳು ತೀರಾ ಕಡಿಮೆ ಪ್ರಮಾಣದಲ್ಲಿವೆ. ಇಲ್ಲಿ ಕಾಸ್ಟಿಂಗ್ ಇಲ್ಲದೇ ಕಡಿಮೆ ಪ್ರಮಾಣದ ಇಂಗಾಲವನ್ನು ಬಳಸಿ ರಾಕೆಟ್ಟಿನ ಹೊರ ಕವಚವನ್ನು ತಯಾರು ಮಾಡಿರುವುದು ಕಂಡುಬಂದಿದೆ. ಅದು ಇಂದಿನ ವಿಜ್ಞಾನಿಗಳಿಗೂ ಸವಾಲೇ ಸರಿ.

ರಾಕೆಟ್ ಕವಚದ ಎರಡು ಕೊನೆಯಲ್ಲಿರುವ ಬಿಲ್ಲೆಗಳಲ್ಲಿ ಇಂಗಾಲದ ಪ್ರಮಾಣ 0.3% ರಷ್ಟಿದ್ದು ರಂಜಕವು 0.1ರಷ್ಟಿರುವುದರಿಂದ ತುಕ್ಕು ಹಿಡಿಯುವುದನ್ನು ತಡೆಯುತ್ತದೆ. ಇದರಿಂದ ಸುಮಾರು 250 ವರ್ಷಗಳ ಕಾಲ ನೀರಿನಲ್ಲಿದ್ದರೂ ಸ್ವಲ್ಪವೇ ತುಕ್ಕು ಹಿಡಿದಿರುವುದು ವಿಶೇಷವಾಗಿದೆ. ಈ ರಾಕೆಟ್‌ಗಳ ಮೈಕ್ರೋ ರಚನೆ ಹಾಗೂ ಸಂಯೋಜನೆಯನ್ನು ದೆಹಲಿಯ ಕಬ್ಬಿಣದ ಸ್ತಂಭದ ಸಂಯೋಜನೆಗೆ ಹೋಲಿಸಬಹುದಾಗಿದ್ದು ಇದು ತುಂಬಾ ಕುತೂಹಲಕಾರಿಯಾಗಿದೆ.

ದಕ್ಷಿಣ ಭಾರತದ ಕುಲುಮೆಯ ಪರಂಪರೆಯು ರಾಕೆಟ್ಟಿನ ಕವಚ ಅಂದರೆ ರಾಕೆಟ್ಟಿನ ತಯಾರಿಕೆಯ ತಂತ್ರಜ್ಞಾನದಲ್ಲಿ ಕಂಡು ಬರುತ್ತದೆ. ರಾಕೆಟ್‌ನ ಹೊರಮೈ ಕವಚದ ಮೈಕ್ರೋ ರಚನೆಯು ಕಬ್ಬಿಣವನ್ನು ಕುಲುಮೆಯಲ್ಲಿ ಕಾಯಿಸಿ ಗಟ್ಟಿಗೊಳಿಸಿಲಾಗಿದೆ. ರಾಕೆಟ್‌ನ ಮದ್ದಿನಲ್ಲಿ ಶೇ. 12 ಇದ್ದಿಲು ಅಂದರೆ ಇಂಗಾಲ, ಶೇ.9 ಗಂಧಕ ಹಾಗೂ ಉಳಿದ ಅಂಶವು ಶೇ.79 ನೈಟ್ರೇಟ್ ಇರುವುದು ಕಂಡು ಬರುತ್ತದೆ.

ರಾಕೆಟ್ ಒಳಭಾಗದಲ್ಲಿ ಕಪ್ಪು ಬಣ್ಣದ ವಸ್ತು ಇದ್ದು, ಅದು ಜೇಡಿಮಣ್ಣು ಎಂದು ದೃಢಪಟ್ಟಿದೆ. ಇದು ಸಿಡಿಮದ್ದು ಹಾಗೂ ರಾಕೆಟ್‌ನ ಕವಚದ ನಡುವೆ ಉಷ್ಣ ನಿರೋಧಕವಾಗಿ ಹಾಗೂ ಒಳಗಿನ ಶಾಖದಿಂದ ಕವಚವನ್ನು ರಕ್ಷಿಸುತ್ತದೆ. ಇಲ್ಲಿ ಜೇಡಿಮಣ್ಣನ್ನು ಉಷ್ಣ ನಿರೋಧಕವಾಗಿ ಬಳಸಿರುವುದು ವಿಶೇಷ. ಜೇಡಿಮಣ್ಣನ್ನು ಉಷ್ಣ ನಿರೋಧಕವಾಗಿ ಬಳಸದಿದ್ದರೆ ರಾಕೆಟ್ ಉಡಾವಣೆ ಸಾಧ್ಯವಿಲ್ಲ. ಬಿಸಿಯನ್ನು ತಾಳಲಾರದೆ ಬೀಳುವ ಸಾಧ್ಯತೆಯಿತ್ತು.

ರಾಕೆಟ್‌ನಲ್ಲಿ ಮದ್ದನ್ನು ಕ್ರಮಬದ್ಧವಾಗಿ ತುಂಬಿದ್ದು, ಮದ್ದನ್ನು ತುಂಬಲು ಮಡಿಕೆಯನ್ನು ಲಾಳಿಕೆಯ ರೀತಿಯಲ್ಲಿ  ಬಳಸಿರುವುದನ್ನು ಕಾಣಬಹುದು. ರಾಕೆಟ್‌ನಿಂದ ಹೊರತೆಗೆದ ಮದ್ದಿಗೆ ಸ್ವಲ್ಪ ಬೆಂಕಿ ತಾಗಿಸಿದರೆ ಕಿಡಿಕಾರುತ್ತದೆ. ಆದರೆ ಇದು ನೀರಿನಲ್ಲಿ 200 ರಿಂದ 250 ವರ್ಷಗಳ ಕಾಲವಿದ್ದರಿಂದ ಸ್ಫೋಟಿಸುವ ಸತ್ವವನ್ನು ಕಳೆದುಕೊಂಡಿರಬಹುದು. ಹಾಗೂ ಪೊಟ್ಯಾಶಿಯಂ ನೈಟ್ರೇಟ್ ನೀರಿನಲ್ಲಿ ಕರಗುವಂತಹ ಐಯಾನಿಕ್ ಸಂಯುಕ್ತವಾಗಿದ್ದರಿಂದ ಅದು ಬಾವಿಯ ನೀರಿನಲ್ಲಿ ಕರಗಿ ಹೋಗಿರಬಹುದಾಗಿದ್ದು ಇಂದಿಗೂ ಸಹ ರಾಕೆಟ್ ದೊರೆತ ಬಾವಿಯಲ್ಲಿ ಮದ್ದಿನ ವಾಸನೆಯಿಂದಾಗಿ ನೀರು ಕುಡಿಯಲು ಸಾಧ್ಯವಾಗುತ್ತಿಲ್ಲ.

ಮದ್ದಿನ ಬತ್ತಿಯ ಉದ್ದವು ರಾಕೆಟ್‌ನ ಉದ್ದದ ಕೇವಲ 1/4 ರಷ್ಟಿದೆ. ಇದರರ್ಥ ಮೊದಲನೇಯ 1/4 ಅಥವಾ 1/3 ರಷ್ಟು ಮದ್ದು ಬಹಳ ವೇಗವಾಗಿ ಉರಿದು, ಉಳಿದಿದ್ದು ನಿಧಾನವಾಗಿ ಉಳಿದ ದೂರ ಕ್ರಮಿಸುವ ತನಕ ಉರಿಯುತ್ತದೆ. ಮದ್ದು ಉರಿಯುವ ಪ್ರಕ್ರಿಯೆ ಮತ್ತು ರಾಕೆಟ್‌ನ ಹಾರಾಟದ ಮೇಲೆ ಅದರ ಪ್ರಭಾವ ಮೊದಲಾದವುಗಳನ್ನು ತಿಳಿಯಲು ಇನ್ನೂ ಹೆಚ್ಚಿನ ಸಂಶೋಧನೆಯ ಅಗತ್ಯವಿದ್ದು ಇತಿಹಾಸ ತಜ್ಞರಲ್ಲಿ ಕುತೂಹಲ ಮತ್ತು ಅಚ್ಚರಿ ಮೂಡಿಸಿದೆ.



### ಆಂಗ್ಲೋ–ಮೈಸೂರು ಯುದ್ಧದಲ್ಲಿ ಮೈಸೂರಿನ ಕ್ಷಿಪಣಿ (ರಾಕೆಟ್– (1767–1799)

ಕ್ರಿ.ಶ. 18ನೇ ಶತಮಾನದಲ್ಲಿ ಮೈಸೂರಿನವರು ಬ್ರಿಟಿಷ್ ಆಳ್ವಿಕೆಯ ವಿರುದ್ಧ ಧಂಗೆ ಎದ್ದಾಗ ಟಿಪ್ಪು ಸುಲ್ತಾನನ ಸೈನ್ಯದಲ್ಲಿದ್ದ ಲೋಹ ಲೇಪಿತ (ಕಬ್ಬಿಣದ) ಕ್ಷಿಪಣಿಗಳನ್ನು ಎದುರಾಳಿಗಳ ಮೇಲೆ ಮೊದಲನೆಯ ಬಾರಿಗೆ ಯಶಸ್ವಿಯಾಗಿ ಪ್ರಯೋಗಿಸಲಾಯಿತು. ನಿಯಮಿತ ಬಲಗಳನ್ನು ಕಚೇರಿ, ಕುಶುನ್ಸ್ ಮತ್ತು ಜಾಕ್ಸ್ ಎಂದು ವಿಂಗಡಿಸಿದ್ದನು.

1793 ರಲ್ಲಿ ಸುಗ್ರೀವಾಜ್ಞೆ ಹೊರಡಿಸಿದ ಟಿಪ್ಪು ವಿವಿಧ ಕಚೇರಿಗಳು, ಜಾಕ್‌ಗಳು ಮತ್ತು ಕುಶುನ್ ಬಲಗಳನ್ನು ಉಪಯೋಗಿಸಿದ್ದ. ಪ್ರತಿ ಕುಶುನ್‌ಗಳಲ್ಲಿ 1392 ಸಿಬ್ಬಂದಿಗಳಿದ್ದು, ಪ್ರತೀ ಜಾಕ್‌ಗಳಲ್ಲಿ 39 ಕ್ಷಿಪಣಿ ಸಿಬ್ಬಂದಿಗಳನ್ನು ನಿಯೋಜಿಸಿದ್ದ.

ಮೈಸೂರಿನಲ್ಲಿ ರಾಕೆಟ್ ಅನ್ನು ಬಾಣ ಎಂದು ಕರೆಯಲಾಗುತ್ತಿತ್ತು. ರಾಕೆಟ್ ಬಿಡುವವರನ್ನು ಬಾಣದಾರ್ ಎಂದು ಕರೆಯಲಾಗುತ್ತಿತ್ತು. 1793ರ ಸುಮಾರಿಗೆ ಟಿಪ್ಪು ಬಾಣದ ಹೆಸರನ್ನು ಬದಲಿಸಿ ಶುಹಾಬ್ ಎಂದು ಮರುನಾಮಕರಣ ಮಾಡಿದ. ರಾಕೆಟ್ ತಂತ್ರಜ್ಞಾನ ಮತ್ತು ಬಳಕೆಯು ಟಿಪ್ಪುವಿನ ಮರಣದೊಂದಿಗೆ ಭಾರತದಲ್ಲಿ ಕ್ಷೀಣಿಸಿತು. ಈ ರಾಕೆಟ್‌ಗಳು ಮುಂದೆ ಬ್ರಿಟಿಷರಿಗೆ ಯುರೋಪಿಯನ್ ಮತ್ತು ಅಮೆರಿಕನ್ ವೈರಿಗಳ ವಿರುದ್ಧದ ಯುದ್ಧದಲ್ಲಿ ಹೋರಾಡಲು ಪ್ರಮುಖ ಪಾತ್ರವಹಿಸಿದವು.



Downloaded From: www.kpscvaani.com



# ಮೋಡಿ ಲಿಪಿಯ ಪರಿಣಿತ ಡಾ.ಎಂ.ವೈ. ಸಾವಂತ್

ಮಂಜುನಾಥ ಡಿ.ಡೊಳ್ಳಿನ

**ಮೋಡಿ ಲಿಪಿಯನ್ನು ಓದಿ, ವಿವರಿಸುವ ಜೊತೆ ಜೊತೆಗೆ ಯುವಜನರಿಗೆ ಅದನ್ನು ಕಲಿಸುವ ಕೈಂಕರ್ಯವನ್ನು ಮೋಡಿ ಲಿಪಿ ಪರಿಣಿತರಾದ ಧಾರವಾಡದ ಡಾ. ಎಂ.ವೈ. ಸಾವಂತ್ ಅವರು ಬಹಳ ವರ್ಷಗಳಿಂದ ನಡೆಸುತ್ತಾ ಸಾಗಿದ್ದಾರೆ.**

ಕ್ರಿಶ 13 ನೇ ಶತಮಾನದಿಂದ 20 ನೇ ಶತಮಾನದ ಅಂತ್ಯದವರೆಗೂ ಆಡಳಿತದ ದಾಖಲೆಗಳಲ್ಲಿ "ಮೋಡಿ ಲಿಪಿ" ಬಳಕೆಯಲ್ಲಿತ್ತು. ಈ ಲಿಪಿಯಲ್ಲಿ ಅಕ್ಷರಗಳು ವಕ್ರವಾಗಿರುವುದರಿಂದ "ಮೋಡಿ" ಎಂದು ಕರೆಯಲ್ಪಡುತ್ತದೆ. ಚಾರಿತ್ರಿಕ ಮಹತ್ವ ಇರುವ "ಮೋಡಿ" ಒಂದು ಲಿಪಿ ಮಾತ್ರ, ಅದೊಂದು ಭಾಷೆಯಲ್ಲ. ಸ್ವಾತಂತ್ರ್ಯ ಪೂರ್ವದಲ್ಲಿ ದೇಸಾಯಿ, ಗೌಡರು, ಶಾನುಭೋಗರು, ಕುಲಕರ್ಣಿಯವರ ಆಡಳಿತ ಕಾಲದಲ್ಲಿ ಭೂಮಿ, ಆಸ್ತಿ, ಧಾರ್ಮಿಕ, ಸಾರ್ವಜನಿಕ ಆಸ್ತಿ, ಪಾಸ್ತಿಗಳ ದಾಖಲೆಗಳು ಈ ಮೋಡಿ ಲಿಪಿಯಲ್ಲಿಯೇ ದಾಖಲಾಗಿವೆ. ಲೆಕ್ಕ ಪತ್ರಗಳನ್ನು, ರಹಸ್ಯ ಮಾಹಿತಿಗಳನ್ನು ಮತ್ತು ಕೆಲ ಮುಖ್ಯ ಘಟನೆಗಳೂ ಕೂಡ ಈ ಲಿಪಿಯಲ್ಲಿವೆ. ಇವುಗಳನ್ನು ಓದಿ, ವಿವರಿಸುವ ತಜ್ಞರು ಬಹು ಅಪರೂಪ. ಮೋಡಿ ಲಿಪಿಯನ್ನು ಆಸಕ್ತಿಯಿಂದ ಸ್ವತಃ ಅಭ್ಯಸಿಸಿ ಸರ್ಕಾರದ ಕೆಲಸಗಳಿಗೆ ನೆರವಾಗುತ್ತ, ಇಂದಿನ ಯುವಜನತೆಗೂ ಅದನ್ನು ಕಲಿಸಲು ಶ್ರಮಿಸುತ್ತಿರುವ ಹಿರಿಯ ಜೀವಿಯೊಬ್ಬರು ಧಾರವಾಡದಲ್ಲಿದ್ದಾರೆ.

ಹೌದು, ಧಾರವಾಡದ ಪ್ರತಿಷ್ಠಿತ ಕಿಟೆಲ್ ಕಲಾ ಮಹಾವಿದ್ಯಾಲಯದ ಇತಿಹಾಸ ವಿಭಾಗದ ನಿವೃತ್ತ ಪ್ರಾಧ್ಯಾಪಕ ಡಾ.ಮಂಗೇಶ್ ಯಶವಂತ್ ಸಾವಂತ್ ಅವರು, ತಮ್ಮ ಪಿಹೆಚ್‌ಡಿ ಪದವಿ ಹಾಗೂ ಆಸಕ್ತಿಗಾಗಿ ಮೋಡಿ ಲಿಪಿ ಕಲಿತವರು.

1948 ರ ಎಪ್ರಿಲ್ 11 ರಂದು ಕಾರವಾರ ಸಮೀಪದ ಬಾಡದಲ್ಲಿ ಜನಿಸಿದ ಎಂ.ವೈ.ಸಾವಂತ್ ಅವರು, 1971 ರಲ್ಲಿ ಕರ್ನಾಟಕ ವಿ.ವಿ.ಯಿಂದ ಇತಿಹಾಸದಲ್ಲಿ ಎಂ.ಎ.ಪದವಿ ಪಡೆದವರು. ಶಾಸನಶಾಸ್ತ್ರದಲ್ಲಿ ಡಿಪ್ಲೋಮಾ ಕೂಡ ಪೂರೈಸಿದ್ದಾರೆ. ಕಾರವಾರದ ಶಿವಾಜಿ ಕಾಲೇಜಿನಲ್ಲಿ ಸುಮಾರು 05 ವರ್ಷಗಳ ಕಾಲ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ ಬಳಿಕ 1976 ರಿಂದ ನಿವೃತ್ತಿಯವರೆಗೆ ಧಾರವಾಡದ ಕಿಟೆಲ್ ಮಹಾವಿದ್ಯಾಲಯದಲ್ಲಿ ಸೇವೆಗೈದರು.

"ಪೇಶ್ವೆಗಳ ಆಡಳಿತದಲ್ಲಿ ಧಾರವಾಡ: ಒಂದು ಸಮಾಜೋ- ಆರ್ಥಿಕ ಅಧ್ಯಯನ" (Dharwad Under Peshwas A Socio Economic Study) ಎಂಬ ಮಹಾಪ್ರಬಂಧವನ್ನು ಪಿಹೆಚ್‌ಡಿ ಪದವಿಗಾಗಿ ಮಂಡಿಸಲು ಮಹಾರಾಷ್ಟ್ರದ ಪುಣೆ ವಿಶ್ವವಿದ್ಯಾಲಯದಲ್ಲಿ 1991 ರಲ್ಲಿ ನೋಂದಣಿ ಮಾಡಿಕೊಂಡರು. ದೇಶದ ಹೆಸರಾಂತ ಇತಿಹಾಸ ತಜ್ಞ ಡಾ.ಕೆ.ಎನ್.ಚಟ್ನೀಸ್ ಅವರ ಮಾರ್ಗದರ್ಶನದಲ್ಲಿ ಪ್ರಬಂಧಕ್ಕಾಗಿ ಸಂಶೋಧನೆ ಪ್ರಾರಂಭಿಸಿದರು. ಪೇಶ್ವೆಗಳ ಕಾಲದ ಆಡಳಿತದ ಅಧಿಕೃತ ಲಿಪಿ ಮೋಡಿ ಲಿಪಿಯೇ ಆಗಿತ್ತು. ತಮ್ಮ ಸಂಶೋಧನೆಗಾಗಿ ಎಂ.ವೈ.ಸಾವಂತ್ ಅವರಿಗೆ ಮೋಡಿ ಲಿಪಿ ಅಧ್ಯಯನ ಅನಿವಾರ್ಯವಾಯಿತು ಮತ್ತು ಆಸಕ್ತಿಯೂ ಇತ್ತು. ಪುಣೆಯ ಮೋಡಿ ಲಿಪಿಯ ತಜ್ಞ ಡಾ.ಎಂ.ಆರ್.ಕುಲಕರ್ಣಿ ಅವರಿಂದ ಮೋಡಿ ಲಿಪಿಯ ಓದು, ಬರವಣಿಗೆ, ವ್ಯಾಖ್ಯಾನುಸುವಿಕೆ, ಪದಕೋಶ ಕಲಿತರು. ಅದನ್ನು ಶ್ರದ್ಧೆ ಮತ್ತು ಪ್ರೀತಿಯಿಂದ ಇಂದಿಗೂ ನಿರಂತರವಾಗಿ ಮುಂದುವರೆಸಿಕೊಂಡು ಬರುತ್ತಿದ್ದಾರೆ.

ಡಾ.ಎಂ.ವೈ.ಸಾವಂತ್ ಅವರ ಮೋಡಿ ಲಿಪಿಯ ಓದು, ಬರಹ ಸರ್ಕಾರದ ಹಳೆಯ ದಾಖಲೆಗಳ ಅಧ್ಯಯನಕ್ಕೆ ವರದಾನವಾಗಿದೆ. ಇತಿಹಾಸದ ಕಾಲಘಟ್ಟಗಳಲ್ಲಿ ಮರಾಠರು, ಪೇಶ್ವೆಗಳು, ನಂತರ ಬ್ರಿಟಿಷರ ಆಳ್ವಿಕೆ ಕಾಲದಲ್ಲಿ ಮುಂಬೈ ಪ್ರಾಂತ್ಯದ ಆಡಳಿತಕ್ಕೆ ಒಳಪಟ್ಟಿದ್ದ ಇಂದಿನ ಕಿತ್ತೂರು ಕರ್ನಾಟಕದ ಬೆಳಗಾವಿ, ಧಾರವಾಡ, ಉತ್ತರ ಕನ್ನಡ, ವಿಜಯಪುರದ ಅನೇಕ ಭಾಗಗಳನ್ನು "ಸದರ್ನ್ ಮರಾಠ ಕಂಟ್ರಿ" ಎಂದೇ ಅಧಿಕೃತವಾಗಿ ಕರೆಯಲಾಗುತ್ತಿತ್ತು. ಧಾರವಾಡ ಈ ಪ್ರದೇಶದ ಪ್ರಮುಖ ಆಡಳಿತ ನೆಲೆಯೂ ಆಗಿದ್ದರಿಂದ ಇಲ್ಲಿನ ಬಹುತೇಕ ದಾಖಲೆಗಳು ಮೋಡಿ ಲಿಪಿಯಲ್ಲಿಯೇ ಇವೆ. ಕಂದಾಯ, ನ್ಯಾಯಾಂಗ ಕಾಗದ ಪತ್ರಗಳು, ಸಾಂಸ್ಕೃತಿಕ ಆಯಾಮಗಳು, ಹಿಂದಿನ ಆಡಳಿತದ



Downloaded From: www.kpscvaani.com






ನೀತಿಗಳು ಇದೇ ಲಿಪಿಯಲ್ಲಿವೆ. ಬಹುತೇಕ ದಾಖಲೆಗಳು ಪುಣೆಯ ಪತ್ರಾಗಾರದ ಕರ್ನಾಟಕ ಜಮಾವು ವಿಭಾಗದಲ್ಲಿವೆ. ಅವುಗಳನ್ನು ಬಟ್ಟೆಯ ರುಮಾಲುಗಳಲ್ಲಿ ವೈಜ್ಞಾನಿಕವಾಗಿ ಕಟ್ಟಿ ಸಂರಕ್ಷಿಸಿಡಲಾಗಿದೆ. ಅವುಗಳಿಗೆ ಕ್ರಮಸಂಖ್ಯೆಗಳನ್ನು ನೀಡಲಾಗಿದೆ.

ಮೋಡಿ ಲಿಪಿಯಲ್ಲಿರುವ ತಾಳೆ ಬಂದು (ಬ್ಯಾಲೆನ್ಸ್‌ಶೀಟ್), ಹುಕುಂ ನಾಮಾ (ಆದೇಶಗಳು, ಸುತ್ತೋಲೆಗಳು), ಕೈಫಿಯತ್ತು (ಪ್ರಶ್ನೋತ್ತರುಗಳು, ಇನಾಮ್‌ಕಮೀಷನ್), ಜಮೀನ್‌ಝಾಡಾ (ಭೂದಾಖಲೆಗಳು), ಕಸಬಾ,ಮೌಜೆ (ಗ್ರಾಮ), ಪರಗಣ (ತಾಲ್ಲೂಕು), ಸಭಾ (ಜಿಲ್ಲೆ), ಬಾರಾಬಲೂತಿದಾರ(ಗ್ರಾಮ ಸೇವಕರು), ಯಾದಿಗಳು(ಕೋಟೆ ಆಡಳಿತ ವಿವರಗಳು) ಮೊದಲಾದ ದಾಖಲೆಗಳನ್ನು ಡಾ.ಎಂ.ವೈ.ಸಾವಂತ್ ಅವರು ಆಳವಾಗಿ ಮತ್ತು ಅಧಿಕೃತವಾಗಿ ಅಧ್ಯಯನ ಮಾಡಿದ್ದಾರೆ.

**ವಕೀಲರು, ಶಿಕ್ಷಕರು, ಸಂಶೋಧನಾ ವಿದ್ಯಾರ್ಥಿಗಳು ಸೇರಿ ಇದುವರೆಗೆ ಸುಮಾರು 10 ಕ್ಕೂ ಹೆಚ್ಚು ಜನರಿಗೆ ಮೋಡಿ ಲಿಪಿ ಕಲಿಸಿದ್ದಾರೆ. ಇವರ ಮಾರ್ಗದರ್ಶನದಲ್ಲಿ ಮೋಡಿ ಲಿಪಿ ಆಧರಿಸಿ ಇಬ್ಬರು ಸಂಶೋಧಕರು ಪಿಹೆಚ್‌ಡಿ ಪದವಿ ಪಡೆದಿದ್ದಾರೆ. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಮೋಡಿ ಲಿಪಿಯ ಡಿಪ್ಲೋಮಾ ಕೋರ್ಸಿಗೆ ಪಠ್ಯಕ್ರಮ ಸಿದ್ಧಪಡಿಸುವಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದ್ದಾರೆ.**

### ಯುವಪೀಳಿಗೆಗೆ ಸ್ವಯಂ ಉದ್ಯೋಗ ಸೃಜನೆ

ಮೋಡಿ ಲಿಪಿಯ ಅನುವಾದಕರ ಕೊರತೆಯಿಂದ ಬಹಳಷ್ಟು ಭೂ ದಾಖಲೆಗಳು, ಭೂಮಿ ಉತಾರುಗಳು, ವಾರಸಾ ಪತ್ರ, ಭಕ್ಷೀಸ್, ಖರೀದಿ, ಇನಾಮು ಪತ್ರಗಳು, ಕೈಫಿಯತ್ತುಗಳ ದಾಖಲೆಗಳ ಭಾಷಾಂತರ ಮಾಡುವವರ ಕೊರತೆಯಿಂದ, ಅನೇಕ ತಹಸೀಲ್ದಾರ, ಉಪನೋಂದಣಾಧಿಕಾರಿಗಳ ಕಚೇರಿ, ಕೋರ್ಟು, ಕಚೇರಿಗಳಲ್ಲಿ ಭೂವಿವಾದಗಳು ಇತ್ಯರ್ಥವಾಗದೇ ಇಂದಿಗೂ ಅನೇಕರು ಪರದಾಡುತ್ತಿದ್ದಾರೆ. ಮೋಡಿ ಲಿಪಿ ಕಲಿಕೆ ಮತ್ತು ಅನುವಾದವನ್ನು ಆಸಕ್ತರು ಸ್ವಯಂ ಉದ್ಯೋಗವನ್ನಾಗಿಸಿಕೊಳ್ಳಲು ಅವಕಾಶಗಳಿವೆ.

ತಮ್ಮ ಆಸಕ್ತಿ ಹಾಗೂ ಸಂಶೋಧನೆಗಾಗಿ ಮೋಡಿ ಲಿಪಿಯನ್ನು ಕಲಿತಿರುವ ಡಾ.ಎಂ.ವೈ.ಸಾವಂತ್ ಹೊಸಪೀಳಿಗೆಗೂ ಈ ಲಿಪಿಯನ್ನು ಕಲಿಸಲು ಉತ್ಸುಕರಾಗಿದ್ದಾರೆ. ಯುವಜನರು ಮೋಡಿ ಲಿಪಿ ಕಲಿತು, ಹಳೆಯ ಐತಿಹಾಸಿಕ ದಾಖಲೆಗಳನ್ನು ಅನುವಾದಿಸಿ, ನೋಟರಿ ಮಾಡಿಸಿ ಕೊಡುವುದರ ಮೂಲಕ ಪ್ರತಿ ಪುಟಕ್ಕೆ ನಿರ್ದಿಷ್ಟ ಶುಲ್ಕ ಪಡೆಯಬಹುದು. ಅನೇಕ ಕಂದಾಯ, ನ್ಯಾಯಾಲಯ ಪ್ರಕರಣಗಳಲ್ಲಿ ಈ ಕಾರ್ಯಕ್ಕೆ ಬಹಳ ಮಹತ್ವವಿದೆ. ಮೋಡಿ ಲಿಪಿ ಅಭ್ಯಸಿಸಲು ಬಯಸುವವರು ನೇರವಾಗಿ ಡಾ.ಎಂ.ವೈ.ಸಾವಂತ್ ಅವರನ್ನು ಮೊಬೈಲ್ ಸಂಖ್ಯೆ +91 98808 59784 ಸಂಪರ್ಕಿಸಬಹುದು.



Downloaded From: www.kpscvaani.com

### ಮೋಡಿ ಲಿಪಿ ಪರಿಚಯ

ಇದು ಮಧ್ಯಕಾಲದ ಲಿಪಿ. ಮರಾಠಿ, ಪರ್ಷಿಯನ್, ಅರೇಬಿಕ್ ಹಾಗೂ ಕನ್ನಡ ಶಬ್ದಗಳು ಈ ಲಿಪಿಯಲ್ಲಿ ಬಳಕೆಯಾಗಿವೆ. ಮೋಡಿಲಿಪಿ ವಕ್ರವಾಗಿರುತ್ತದೆ. ಪೂರ್ಣ ವಿರಾಮ ಇಲ್ಲದಿರುವುದರಿಂದ ಒಂದು ಕಾಲದಲ್ಲಿ ಈ ಲಿಪಿಗೆ ಹೆಚ್ಚಿನ ಮಹತ್ವ ಇತ್ತು.

ದೇವಗಿರಿಯ ಯಾದವ ವಂಶದ ಅರಸ ರಾಮದೇವರಾವ್ ಅವರ ದಿವಾನರಾಗಿದ್ದ ಹೇಮಾಡಪಂತ್ ಕ್ರಿ.ಶ.13 ನೇ ಶತಮಾನದಲ್ಲಿ ಈ ಲಿಪಿಯನ್ನು ಸಂಶೋಧಿಸಿದರು. ಮರಾಠರು ಹಾಗೂ ಪೇಶ್ವೆಗಳ ಕಾಲದಲ್ಲಿ ಹೆಚ್ಚು ಬಳಕೆಯಾಯಿತು. ಶಿವಾಜಿಯ ಮಂತ್ರಿಯಾಗಿದ್ದ ಬಾಲಾಜಿ ಆವಜಿ ಚಟ್ನೀಸ್ ಅವರು ಮೋಡಿಲಿಪಿಯನ್ನು ಹೆಚ್ಚು ಬಳಕೆಗೆ ತಂದು ಅಧಿಕೃತ ಮಾನ್ಯತೆ ನೀಡಿದರು. ವಿಷಯಗಳ ಗೌಪ್ಯತೆ ಕಾಪಾಡುವ ಸಲುವಾಗಿ ಮತ್ತು ವೈರಿಗಳಿಗೆ ತಿಳಿಯದಂತೆ ಸಂವಹನ ಮಾಡಲು ಈ ಲಿಪಿಯನ್ನು ಬಳಸಲಾಗುತ್ತಿತ್ತು.

ಭಾರತಕ್ಕೆ ವ್ಯಾಪಾರಕ್ಕಾಗಿ ಬಂದ ಬ್ರಿಟಿಷರಿಗೂ ಈ ಲಿಪಿಯ ಪರಿಚಯವಿತ್ತು ಎನ್ನಲಾಗಿದೆ. ಧಾರವಾಡ, ಬೆಳಗಾವಿ, ಹಾವೇರಿ, ಗದಗ, ಕಾರವಾರ ಭಾಗದ ಶಾಲೆಗಳಲ್ಲಿ ಈ ಲಿಪಿಯನ್ನು ಮಕ್ಕಳಿಗೆ ಕಲಿಸಲಾಗುತ್ತಿತ್ತು. ಮೈಸೂರಿನ ಸರ್ಕಾರಿ ಕಚೇರಿಗಳಲ್ಲೂ ಈ ಲಿಪಿ ಬಳಕೆಯಾಗಿದೆ. ಮುಂಬೈ, ಪುಣೆ, ಕೊಲ್ಲಾಪುರ, ಗೋವಾ ಹಾಗೂ ಬೆಂಗಳೂರಿನ ಸಂಶೋಧನಾ ಕೇಂದ್ರಗಳು, ಪತ್ರಾಗಾರಗಳಲ್ಲಿ ಮೋಡಿ ಲಿಪಿಗಳ ದಾಖಲೆಗಳ ಸಂಗ್ರಹಗಳಿವೆ.

ಉತ್ತರ ಕರ್ನಾಟಕದ ಕೆಲವೆಡೆ ಭೂಮಿಗೆ ಸಂಬಂಧಿಸಿದ ದಾಖಲೆಗಳು ಇದೇ ಲಿಪಿಯಲ್ಲಿವೆ. ಇವುಗಳ ಮಾಹಿತಿಗಳನ್ನು ಕನ್ನಡಕ್ಕೆ ಅನುವಾದಿಸಬಲ್ಲ ಲಿಪಿ ತಜ್ಞರು ವಿರಳವಾಗಿದ್ದಾರೆ. ಕರ್ನಾಟಕದಲ್ಲಿ ಮರಾಠರ ಪ್ರವೇಶದ ಮಾಹಿತಿಗಳು, ಜಮಖಂಡಿ, ಮುಧೋಳ, ರಾಮದುರ್ಗ, ವಿಜಯಪುರ, ಸವಣೂರು, ಕಿತ್ತೂರು ಸಂಸ್ಥಾನಗಳ ಆಡಳಿತದ ಅನೇಕ ದಾಖಲೆಗಳು ಮೋಡಿ ಲಿಪಿಯಲ್ಲಿವೆ.

ಮರಾಠರು ಮತ್ತು ಪೇಶ್ವೆಗಳ ಆಡಳಿತ ಕಾಲದ "ಮೋಡಿ" ಲಿಪಿಯ ಎಲ್ಲ ಸರ್ಕಾರಿ ದಾಖಲೆಗಳನ್ನು ಕನ್ನಡಕ್ಕೆ ಭಾಷಾಂತರ ಮಾಡಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕ್ರಮ ಕೈಗೊಂಡಿದೆ. ಅವುಗಳನ್ನು ಪೂರ್ಣವಾಗಿ ಕನ್ನಡಕ್ಕೆ ಭಾಷಾಂತರಿಸಲು ವಿಶ್ವವಿದ್ಯಾಲಯಗಳೂ ಕೂಡ ಕೈಜೋಡಿಸಲು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗಿದೆ.



ಸರ್ಕಾರದ ನೋಂದಣಿ ದಾಖಲೆಗಳನ್ನು ಸರಿಪಡಿಸಲು ಇಂದಿಗೂ ಹಳೆಯ ಆಧಾರಗಳು ಅನಿವಾರ್ಯ. ಹಿಂದಿನ ಮೋಡಿ ಲಿಪಿಯ ದಾಖಲೆಗಳನ್ನು ಡಾ.ಎಂ.ವೈ.ಸಾವಂತ್ ಅವರು ಅರ್ಥವಿವರಣೆಗಳೊಂದಿಗೆ ಬರೆದು, ನೋಟರಿ ಮಾಡಿಸಿಕೊಡುವ ಮೂಲಕ ಸಹಸ್ರಾರು ಬಡ ರೈತರಿಗೆ ಭೂ ದಾಖಲೆಗಳ 'ಕ' ಮತ್ತು 'ಡ' ಉತಾರುಗಳನ್ನು ಉಚಿತವಾಗಿ ತಯಾರಿಸಿಕೊಟ್ಟು ಮಾದರಿ ಕಾರ್ಯ ನಿರ್ವಹಿಸುತ್ತಿದ್ದಾರೆ.

### ಮೋಡಿ ಲಿಪಿ ದಾಖಲೆಗಳ ಅಧಿಕೃತತೆ ಪರೀಕ್ಷೆ

ಮೋಡಿ ಲಿಪಿಯ ಐತಿಹಾಸಿಕ ದಾಖಲೆಗಳನ್ನು ಮತ್ತು ಅವುಗಳ ಅಧಿಕೃತತೆ ಗುರುತಿಸುವಲ್ಲಿ ಡಾ.ಎಂ.ವೈ.ಸಾವಂತ್ ಸಿದ್ಧಹಸ್ತರಾಗಿದ್ದಾರೆ. ಮೋಡಿ ಲಿಪಿಯ ದಾಖಲೆಗಳಲ್ಲಿ ಇನಾಮ್ ಕಮೀಷನ್ ನೀಡಿರುವ ಸಂಖ್ಯೆ, ಪುಣೆ ಪತ್ರಾಗಾರದ ಮೊಹರು, ಅಂದಿನ ಉಪನೋಂದಣಾಧಿಕಾರಿಗಳು, ತಹಸೀಲ್ದಾರರು ಅಧಿಕೃತವಾಗಿ ನೀಡಿದ ದಾಖಲೆ ಎಂಬುದನ್ನು ನಿಖರವಾಗಿ ಅಧ್ಯಯನ ಮಾಡಿ, ಅವುಗಳ ನಿಖರತೆಯನ್ನು ಅನುವಾದ ಮಾಡಿ ಇಂದಿನ ಕಾನೂನುಗಳಡಿ ಋಜುವಾತು ಪಡಿಸಿಕೊಡುತ್ತಾರೆ.


ಡಾ.ಎಂ.ವೈ.ಸಾವಂತ್ ಅವರು ತಾವು ನೋಡಿದ ಎಲ್ಲ ದಾಖಲೆಗಳಲ್ಲಿ ಕೈಫಿಯತ್ತುಗಳು ಹೆಚ್ಚು ಆಸಕ್ತಿದಾಯಕವಾದವು ಎನ್ನುತ್ತಾರೆ. ಹಳೆಹುಬ್ಬಳ್ಳಿಯ ಪ್ರಸಿದ್ಧ ಹಜರತ್ ಸೈಯದ್ ಫತೇಷಾಹ್ ಅಲಿ ದರ್ಗಾದ ಧರ್ಮಗುರು ತಾಜುದ್ದೀನ್ ಖಾದ್ರಿ ಅವರ ಮನವಿ ಮೇರೆಗೆ, ಸವಣೂರು ನವಾಬರ ಕಾಲದ ಅನೇಕ ದರ್ಗಾ ಮತ್ತು ಮಸೀದಿಗಳ ಕುರಿತ ನೂರಾರು ಕೈಫಿಯತ್ತುಗಳನ್ನು ಅಧ್ಯಯನ ಮಾಡಿ ಕನ್ನಡಕ್ಕೆ ಅನುವಾದಿಸಿ ಕೊಟ್ಟಿರುವುದು ಸಾವಂತ್ ಅವರ ಮಹತ್ವದ ಕಾರ್ಯಗಳಲ್ಲಿ ಒಂದಾಗಿದೆ.

ಮೈಸೂರು ಹುಲಿ ಟಿಪ್ಪು ಸುಲ್ತಾನ್ ಧಾರವಾಡದ ಶುಕ್ರವಾರ ಪೇಟೆಯ ವೆಂಕಟೇಶ್ವರ ದೇವಸ್ಥಾನಕ್ಕೆ ನವಲೂರು ಗ್ರಾಮದ ನಾಲ್ಕು ಎಕರೆ ಇನಾಮ್ ಜಮೀನು ನೀಡಿರುವುದು. ಟಿಪ್ಪುವಿನ ಕಾಲದಲ್ಲಿ ಧಾರವಾಡದ ಕಿಲ್ಲೆಯೊಳಗೆ ನಾಣ್ಯ ತಯಾರಿಸುವ ಟಂಕಸಾಲೆ ಇದ್ದುದು, ಇವೇ ಮೊದಲಾದ ಮಹತ್ವದ ಕಂದಾಯ ದಾಖಲೆಗಳನ್ನು ಅಧ್ಯಯನ ಮಾಡಿ, ಅರಿಯಲು ಮೋಡಿ ಲಿಪಿ ತಮಗೆ ಸಹಕಾರಿಯಾಗಿದೆ ಎಂದು ಡಾ.ಎಂ.ವೈ.ಸಾವಂತ್ ಹೆಮ್ಮೆಯಿಂದ ಹೇಳುತ್ತಾರೆ. ಅಂದಿನ ಕಾಲದ ತೆರಿಗೆ ಪದ್ಧತಿ, ಬೆಳೆ ವಿವರ, ಸುಂಕದ ಗುಣಾತ್ಮಕ ಸಂಗ್ರಹದ ವಿವರಗಳು ಮೋಡಿ ಲಿಪಿಯಲ್ಲಿ ಸಿಗುತ್ತವೆ. ಅವು ಇಂದಿನ ಆಡಳಿತಕ್ಕೂ ಮಾದರಿಯಾಗಿವೆ.



Downloaded From: www.kpscvaani.com

# ಪದಬಂಧ-29



ವಿದ್ಯಾ ವಿ. ಹಾಲಭಾವಿ

### ಎಡದಿಂದ ಬಲಕ್ಕೆ

1. ಎಣ್ಣೆ ಮಜ್ಜನ (4)
3. ಶ್ರೇಷ್ಠವಾದ ಕಾವ್ಯ (4)
5. ಪಕ್ಷಿ ಅಥವಾ ಗಂಧರ್ವ (3)
7. ತನ್ಮಯನಾಗಿ ಕುಳಿತಿರುವ ಮಗ! (3)
8. ತವರಲ್ಲಿರುವ ಲೋಹ! (3)
10. ಈತ ವಿವೇಕಶಾಲಿ(5)
11. ಹಂಸ ಇಲ್ಲಿದೆ(3)
13. ಚೆನ್ನಾಗಿ ಕಡೆಯಲ್ಪಟ್ಟಿದ್ದು (3)
14. ಮುಂದೆ ಬರಲಿರುವ ಕಾಲ (3)
16. ಕೃಷಿ ಯಂತ್ರೋಪಕರಣ ಬಳಕೆಯ ಉತ್ತೇಜನಕ್ಕಾಗಿ ಹಮ್ಮಿಕೊಂಡಿರುವ ಯೋಜನೆ (4)
17. ಶೀರ್ಷಿಕೆ ಅಥವಾ ತಲೆಬರಹ (4)

### ಮೇಲಿಂದ ಕೆಳಕ್ಕೆ

1. ಅನಿರೀಕ್ಷಿತವಾಗಿ ಬಂದ ಅತಿಥಿ (4)
2. ನಖರ ಮಾಡುವಾಗ ಕಾಣಿಸಿದ ಉಗುರು! (2)
3. ಮಧುರ ಫಲಗಳನ್ನು ನೀಡುವ ವೃಕ್ಷ (2)
4. ತಡೆ ಎನ್ನುವ ಪದಕ್ಕೊಂದು ಪರ್ಯಾಯ ಪದ(3)
6. ಚಂಬೆಳಕಿನ ಕವಿ ಎಂದೇ ಪ್ರಖ್ಯಾತರಾದವರು (7)
7. ಈ ತರ ತಮ್ಮ ತೋರಿದ ಭೇದಭಾವ! (4)
9. ಸೂರ್ಯನ ಮಗ (4)
12. ಭೋಜನ ಸಮಾರಂಭಕ್ಕೆ ಬೇಕಾದ ಸಾಧನ ಸಾಮಗ್ರಿ (4)
13. ಮೀನಾಕ್ಷಿ ದೇಗುಲವಿರುವ ತಮಿಳುನಾಡಿನ ಸಾಂಸ್ಕೃತಿಕರಾಜಧಾನಿ (3)
14. ಪೂಜ್ಯಭಾವನೆ ಅಥವಾ ನಿಷ್ಠೆ (2)
15. ಗುರುವಿಗೆ ತಕ್ಕ ವಿದ್ಯಾರ್ಥಿ ತಿರುಗಿದ್ದಾನಲ್ಲಾ! (2)

### ಉತ್ತರ

**ಮೇಲಿಂದ ಕೆಳಕ್ಕೆ**

1. ಅಭ್ಯಾಗತ 2. ನಖ 3. ಮರ 4. ವ್ಯತ್ಯಯ 6. ಚನ್ನವೀರಕಣವಿ 7. ತರತಮ 9. ರವಿಸುತ 12. ಲವಾಜಮೆ 13. ಮಧುರೈ 14. ಭಕ್ತಿ 15. ಷ್ಯಶಿ

**ಎಡದಿಂದ ಬಲಕ್ಕೆ**

1. ಅಭ್ಯಂಜನ 3. ಮಹಾಕಾವ್ಯ 5. ಖೇಚರ 7. ತನಯ 8. ತವರ 10. ವಿಚಾರವಂತ 11. ಮರಾಲ 13. ಮಥಿತ 14. ಭವಿಷ್ಯ 16.ರೈತಶಕ್ತಿ 17. ಶಿರೋನಾಮೆ

### -: ಸೂಚನೆ :-

ಲೇಖನಗಳನ್ನು ಬರೆಯುವ ಆಸಕ್ತರು ವಾರ್ತಾ ಜನಪದಕ್ಕೆ ಲೇಖನಗಳನ್ನು ಕಳುಹಿಸಬಹುದು. ಸರ್ಕಾರದ ಯೋಜನೆಗಳು, ಅಭಿವೃದ್ಧಿಗಳು, ಪ್ರಗತಿಪರ ರೈತರ ಯಶೋಗಾಥೆ, ಜನಜಾಗೃತಿ ಮೂಡಿಸುವ ವಿಚಾರಗಳು, ಕರ್ನಾಟಕದ ಪ್ರೇಕ್ಷಣೀಯ ಸ್ಥಳಗಳು, ಕರ್ನಾಟಕದ ಇತಿಹಾಸ ಸಾರುವ ಗತ ವೈಭವಗಳು, ವಿವಿಧ ವಲಯದಲ್ಲಿ ಸಾಧನೆ ಮಾಡಿರುವ ರಾಜ್ಯದ ಸಾಧಕರ ಪರಿಚಯ ಇಂತಹ ವಿಷಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.

ನುಡಿ ತಂತ್ರಾಂಶದಲ್ಲಿ ಟೈಪ್ ಮಾಡಿದ ಕನಿಷ್ಠ 500 ಪದಗಳಿಂದ 750 ಪದಗಳಿಗೆ ಮೀರದಂತೆ ಲೇಖನವನ್ನು ಪೂರಕವಾದ ಛಾಯಾಚಿತ್ರದೊಂದಿಗೆ ನಮ್ಮ ಇ-ಮೇಲ್ ವಿಳಾಸ janapada2008@gmail.comಗೆ ಕಳುಹಿಸಬಹುದು. ಲೇಖನಗಳ ಆಯ್ಕೆ ತೀರ್ಮಾನ ಅಂತಿಮವಾಗಿ ಸಂಪಾದಕ ಮಂಡಳಿಯದಾಗಿರುತ್ತದೆ. ಲೇಖನದ ಜೊತೆಗೆ ತಮ್ಮ ಹೆಸರು ವಿಳಾಸ ಮತ್ತು ದೂರವಾಣಿಯನ್ನು ನಮೂದಿಸತಕ್ಕದ್ದು.

Published by : Dr P S Harsha, IPS, Commissioner, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at :M/s Lavanya Mudrana, #19, Vidyapeeta Circle, Banashankari 1st Stage, Bangalore-560050

Downloaded From: www.kpscvaani.com



ಮಾರ್ಚ್ 18 ರಂದು ಮುಖ್ಯಮಂತ್ರಿ ಅವರ ಅಧ್ಯಕ್ಷತೆಯಲ್ಲಿ ಅಂತರ ರಾಜ್ಯ ಜಲ ವಿವಾದಗಳ ಕುರಿತು ವಿಧಾನ ಮಂಡಲ ಉಭಯ ಸದನಗಳ ನಾಯಕರ ಸಭೆ ನಡೆಸಿದ ಸಂದರ್ಭ.




ಮಾರ್ಚ್ 14 ರಂದು ಬೆಂಗಳೂರಿನಲ್ಲಿ ನರೇಗಾ ಹಬ್ಬ 2022 ಕಾರ್ಯಕ್ರಮವನ್ನು ಉದ್ಘಾಟಿಸಿ, ಅಧಿಕಾರಿಗಳಿಗೆ ನರೇಗಾ ವಾರ್ಷಿಕ ಪ್ರಶಸ್ತಿಯನ್ನು ಪ್ರದಾನ ಮಾಡಿದ ಸಂದರ್ಭ.

Downloaded From: www.kpscvaani.com

RNI No. KAR/KAN/2017/75029

Regd No.KA/BGGPO/2583/2021-23 Licensed to post without prepayment Licence No. PMG/BG/ WPP-365/2021-23
Published on 27th, Dt. 29th & 30th Posted at (Every month), Bangalore PSO, Mysore Road, Bangalore - 26



# ಯುಗಾದಿ ಹಬ್ಬದ ಶುಭಾಶಯಗಳು

Downloaded From: www.kpscvaani.com